medicine, saline and bad quality of food to in-patients and bad sanitation etc were reported by public and elected representives. There were representations for constitution of Visitors' Board and the names for constitution of Visitors' Board were recommended long back. Though, the period of 2½ years is passed, the visitors' board is not constituted yet. I therefore, sincerely requst the Government to constitute the Board of Visitors for District Hospital, Bidar immediately, of possible during this Assemly Session and this will also meet the ends of justice.

SRI B. RACHAIAH (Minister for Health).— I will look into it.

ವಿತ್ತೀಯ ಕಾರ್ಯಕಲಾಪಗಳು.

೧೯೮೮–೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

(ಕಾನೂನು, ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಇಲಾಖೆ) ಮುಂದುವರಿದ ಚರ್ಚೆ

† ಶ್ರೀ ಜಿ. ರಾಜುಗೌಡ (ಹನೂರು). ಸನ್ಮಾನ್ಯ ಅಧ್ಯಕ್ಷರೇ ನಿನ್ನೆ ರೇಷ್ಮೆ ಖಾತೆಯ ಬಗ್ಗೆ ಮಾತನಾಡುತ್ತಿದ್ದೆ. ಈಗ ಮತ್ತೆ ಎರಡೇ ಎರಡು ವಿಷಯಗಳನ್ನು ರೇಷ್ಮೆ ಖಾತೆಯ ಬಗ್ಗೆ ಮಾತನಾಡಿ, ಮತ್ತೆ ಇಟ್ಟಿಳಿದ ಬೇಡಿಕೆಗಳ ವಿಷಯದಲ್ಲಿ ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಈ ವಿಷಯಗಳಿಗೆ ಉತ್ತರ ಹೇಳಬೇಕು. ನಿನ್ನೆ ಮಾತನಾಡುತ್ತಾ, ರೇಷ್ಮೆ ಮಹಾ ಮಂಡಲಿಯ ಬಗ್ಗೆ ಬೆಲೆ ಸ್ಥಿರೀಕರಣದ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಈ ಬಗ್ಗೆ ಕೆಲವೊಂದು ಸಲಹೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಮೊದಲನೆಯದಾಗಿ ಈ ೩೯ ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡಬೇಕು, ಹೇಗೆ ಬಿಡುಗಡೆ ಮಾಡಬೇಕು ಎಂಬ ಬಗ್ಗೆ ಸಲಹೆ ಕೊಡುತ್ತೇನೆ. ರಾಜ್ಯ ಮಟ್ಟದಲ್ಲಿ ನೇಯ್ಗೆಯವರು, ಉರಿಕಾರರು ಮತ್ತು ರೀಲರ್ಸ್ ಇರತಕ್ಕಂಥ ಆರು ಜನರ ಒಂದು ಸಮಿತಿಯನ್ನು ಮಾಡಬೇಕು.

ಆ ಸಮಿತಿಯಲ್ಲಿ ಇಬ್ಬರು ಅಧಿಕಾರಿಗಳನ್ನು ಹಾಕಬೇಕು. ರೇಷ್ಮೆ ಬೆಲೆ ಜಾಸ್ತಿ ಆದಾಗ ಯಾವ ರೀತಿ ಮಾಡಬೇಕೆಂಬ ಬಗ್ಗೆ ಸಮಿತಿಯ ಸಲಹೆ ಪಡೆದು ರೇಷ್ಮೆ ಮಾರುಕಟ್ಟೆ ಮಂಡಲಿಯವರು ಅವರ ನಿರ್ದೇಶನದಲ್ಲಿ ನಡೆಯುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದಾಗ ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ ರೇಷ್ಮೆ ವಿನಿಮಯ ಕೇಂದ್ರದಲ್ಲಿ ಕೆಲವು ಅಧಿಕಾರಿಗಳು ಅನಧಿಕೃತವಾಗಿ ವಿದ್ಯುತ್ ಬಳಕೆ ಮಾಡಿ, ವಿದ್ಯುತ್ ಇಲಾಖೆಯವರು ಸುಮಾರು ಐದು ಲಕ್ಷರೂಪಾಯಿಗಳ ಬ್ಯಾಂಕ್ ಚಾರ್ಜಸ್ ಮಾಡಿರುತ್ತಾರೆ. ಎಂದು ತಿಳಿದು ಬಂದಿದೆ. ಇದು ಎಷ್ಟರಮಟ್ಟಿಗೆ ನಿಜ ಎಂಬುದನ್ನು ಪರೀಕ್ಷೆ ಮಾಡಿ, ಒಂದು ವೇಳೆ ಆ ರೀತಿ ಆಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ರೀತಿ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಿ ಅದನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಇನ್ನು ರೇಷ್ಮೆ ಇಲಾಖೆಯ ಅಧಿಕಾರಿಗಳು ರೇಷ್ಮೆ ಕೊಂಡುಕೊಳ್ಳಲು ಬರುವವರಿಗೆ ತೊಂದರೆ ಕೊಡುತ್ತಿದ್ದಾರೆ. ರೇಷ್ಮೆ ಕೊಂಡುಕೊಳ್ಳತಕ್ಕಂಥವರು ಮನೆಯಿಂದ ಬರುವಾಗ ಸ್ವಲ್ಪ ದುಡ್ಡನ್ನು ತಂದಿರುತ್ತಾರೆ. ಹರಾಜಿನಲ್ಲಿ ಭಾಗವಹಿಸಿದಾಗ ಇಷ್ಟೇ ರೂಪಾಯಿ ಆಗುತ್ತದೆ. ಇಷ್ಟೇ ವ್ಯಾಪಾರವಾಗುತ್ತದೆ ಎಂಬುವುದು ಅವರಿಗೆ ಗೊತ್ತಿರುವುದಿಲ್ಲ. ಒಂದೊಂದು ಸಲ ಹತ್ತು ಲಕ್ಷ, ಐದು ಲಕ್ಷ ರೂಪಾಯಿಗಳ ವ್ಯಾಪಾರ ಆದಾಗ, ಸ್ವಲ್ಪ ದುಡ್ಡನ್ನು ಅಲ್ಲಿ ಕಟ್ಟಿ, ಉಳಿದಿರತಕ್ಕಂಥ ದುಡ್ಡನ್ನು ಮನೆಯಿಂದ ತೆಗೆದುಕೊಂಡು ಬರುತ್ತೇವೆ, ಒಂದು ಅರ್ಧಗಂಟೆ, ಮುಕ್ಕಾಲುಗಂಟೆ, ಒಂದು ಗಂಟೆ ಟೈಮ್ ಕೊಡಿ ಎಂದು ಕೇಳಿಕೊಂಡರೂ ಅದಕ್ಕೆ ಅಧಿಕಾರಿಗಳು ಅವಕಾಶ ಕೊಡದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ನೀವು ಹರಾಜಿನಲ್ಲಿ ಭಾಗವಹಿಸಿದ್ದು ತಪ್ಪು ಎಂದು ದಂಡರೂಪದಲ್ಲಿ ಜುಲ್ಮಾನೆ ಹಾಕಿ, ಅನೇಕ ಪ್ರಕರಣಗಳಲ್ಲಿ ೨೫೦ರೂಪಾಯಿಜುಲ್ಮಾನೆ ಹಾಕಿ, ಅದರಲ್ಲಿ ೫೦ ರೂಪಾಯಿಗಳಿಗೆ ಮಾತ್ರ ರಶೀತಿ ಹಾಕಿ ೨೦೦ರೂಪಾಯಿಗಳನ್ನು ಅವರೇ ಇಟ್ಟುಕೊಂಡಿರತಕ್ಕಂಥ ಪ್ರಕರಣಗಳು ಅನೇಕ ಇವೆ. ದಯವಿಟ್ಟು ಇದು ಎಷ್ಟರಮಟ್ಟಿಗೆ ನಿಜ ಎಂಬುದನ್ನು ಪರೀಕ್ಷೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ವಿದ್ಯುತ್ ಬಳಕೆ ವಿಚಾರದಲ್ಲಿ ಬ್ಯಾಂಕ್ ಚಾರ್ಜಸ್ ವಸೂಲು ಮಾಡಿದ ಬಗ್ಗೆ ಏನಾಗಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಂಡು ಇನ್ನು ಎರಡು ಬೇಡಿಕೆಗಳಾಗಿರತಕ್ಕಂಥ ನ್ಯಾಯ ಪರಿಪಾಲನೆ ಮತ್ತು ವಿಧಾನ ಸಾರಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಇನ್ನು ಮುಂದೆ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದಂತಹ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವುದಿಲ್ಲ. ಅದನ್ನು ಲೋಕಾಯುಕ್ತಕ್ಕೆ ಕೊಡುತ್ತೇವೆ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ರಾಜ್ಯದಲ್ಲಿ ನಿಮ್ಮ ಪಕ್ಷದ ಆಡಳಿತ ಇರತಕ್ಕಂಥ ಒಂದು ಸಂದರ್ಭದಲ್ಲಿ ಯಾವುದಾದರೂ ರಾಜಕಾರಣಿಯ ಮೇಲೆ ಗೂಬೆ ಕೂಡಿಸಬೇಕು ಎಂಬ ದುರುದ್ದೇಶದಿಂದ ಕೆಲವು ಆಪಾದನೆಗಳನ್ನು ವ್ಯಕ್ತ ಮಾಡಿದಾಗ ಅದನ್ನು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದು ಪ್ರಶ್ನೆ. ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿದರೂ ಕೂಡಾ, ಅವರು ತೀರ್ಮಾನ ಕೊಡುವುದಕ್ಕೆ ಮೊದಲು, ಸಚಿವಸಂಪುಟದ ಮುಂದೆ ಬಂದು ಪರಿಶೀಲನೆಯಾದ ನಂತರ ಅವರು ಘೋಷಣೆ ಮಾಡಬೇಕು. ಇದರಿಂದ ಯಾವ ಹಂತದಲ್ಲಾದರೂ ಕೂಡಾ ಈ ವಿಚಾರಣೆಯನ್ನು, ತೀರ್ಮಾನವನ್ನು ಬದಲಾಯಿಸುವುದಕ್ಕೆ ಸಾಧ್ಯ ಇದೆ. ಆದುದರಿಂದ ಈ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮುಂತಾದ ಪ್ರಕರಣಗಳನ್ನು ನ್ಯಾಯಾಂಗ ತನಿಖೆಯ ಮೂಲಕ ವಿಚಾರಣೆ ಮಾಡಿಸುವುದಿಲ್ಲ ಎಂಬುದು ಸರಿಯಲ್ಲ. ಇವುಗಳನ್ನು ಶ್ರೇಷ್ಟ ನ್ಯಾಯಾಲಯದ ಅಥವಾ ಉಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳಿಂದ ವಿಚಾರಣೆ ಮಾಡಿಸಿ ತೀರ್ಮಾನ ಮಾಡಬೇಕು ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಈಗ ನ್ಯಾಯಾಂಗ ವಿಚಾರಣೆ ಆಗಬೇಕೆಂದು ಸಾಮಾನ್ಯವಾಗಿ ಕೇಳುತ್ತಾರೆ. ಸರಕಾರ ಒಪ್ಪಿಕೊಂಡು ನ್ಯಾಯಾಂಗ ವಿಚಾರಣೆ ಆದಾಗ, ನ್ಯಾಯಾಂಗ ವಿಚಾರಣೆಯು ಕಾನೂನು ಪ್ರಕಾರ, ಅದೂ ಒಂದು ಫ್ಯಾಕ್ಟ್ ಫೈಂಡಿಂಗ್ ಬಾಡಿ, ಅದು ವರದಿಯನ್ನು ಕೊಡುತ್ತದೆ, ಆ ವರದಿಯನ್ನು ಸರಕಾರ ಒಪ್ಪಿಕೊಳ್ಳಬಹುದು ಅಥವಾ ಒಪ್ಪಿಕೊಳ್ಳದಿರಬಹುದು. ಆದುದರಿಂದ ಇದಕ್ಕಿಂತಲೂ ಕೂಡಾ, ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್‌ನಲ್ಲಿ ಸೂಚನೆ ಮಾಡಿರತಕ್ಕಂಥ ವಿಧಿ ವಿಧಾನಗಳ ಪ್ರಕಾರ, ತನಿಖಾ ಮಂಡಲಿಯ ಅಧಿಕಾರ ವ್ಯಾಪ್ತಿಗಿಂತಲೂ ಕೂಡಾ ಹೆಚ್ಚಿನ ಪ್ರಮಾಣದ ಅಧಿಕಾರವನ್ನು ನಾವು ಲೋಕಾಯುಕ್ತ ಮತ್ತು ಉಪಲೋಕಾಯುಕ್ತಕ್ಕೆ ಕೊಟ್ಟಿದ್ದೇವೆ. ನೀವು ಇದೂ ಬೇಡ ಎಂದರೆ, ನ್ಯಾಯಾಂಗ ತನಿಖೆಗೆ ಕೊಟ್ಟರೂ ಕೂಡಾ ವ್ಯತ್ಯಾಸ ಏನೂ ಆಗುವುದಿಲ್ಲ. ದಯವಿಟ್ಟು ಇದಕ್ಕಿಂತಲೂ ಉತ್ತಮವಾದುದು ಏನಾದರೂ ಇದ್ದರೆ ಅದನ್ನು ಸೂಚನೆ ಮಾಡಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಿ. ರಾಜೂಗೌಡ.— ಸ್ವಾಮಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಮುಖಾಂತರ ವಿಚಾರಣೆ ಮಾಡಿದಾಗ ಕೂಡಾ, ಅದೂ ಸಹ ಸಚಿವ ಸಂಪುಟದ ಮುಂದೆ ಬಂದು ನಂತರ ಅದರ ಬಗ್ಗೆ ತಾವು ತೀರ್ಮಾನ ಮಾಡತಕ್ಕ ವ್ಯವಸ್ಥೆ ಇದೆಯೋ ಎಂದು ಕೇಳುತ್ತೇನೆ, ಲೋಕಾಯುಕ್ತದವರು ವಿಚಾರಣೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ವಿಚಾರಣಾ ವರದಿ ತಮ್ಮ ಸಚಿವ ಸಂಪುಟದ ಮುಂದೆ ಬಂದು, ತಾವು ಅದನ್ನು ಒಪ್ಪಿದರೆ, ಒಪ್ಪಿದ ನಂತರ ಅವರು ಅದನ್ನು ಘೋಷಣೆ ಮಾಡತಕ್ಕ ಅಧಿಕಾರವನ್ನು ತಾವು ಅವರಿಗೆ ಕೊಟ್ಟಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.— ಅದಕ್ಕಿಂತಲೂ ಹೆಚ್ಚಾಗಿ, ಈಗಾಗಲೇ ಕೆಲವು ವಿಚಾರಗಳಲ್ಲಿ ನೇರವಾಗಿ ಪ್ರಾಸಿಕ್ಯೂಷನ್ ಮಾಡತಕ್ಕ ಲೋಕಾಯುಕ್ತ ಮತ್ತು ಉಪಲೋಕಾಯುಕ್ತಕ್ಕೆ ನಾವು ಕೊಟ್ಟಿದ್ದೇವೆ. ಆದರೆ ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ, ಹೈಕೋರ್ಟ್ ನ್ಯಾಯಾಧೀಶರು ಇರಬಹುದು, ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಇರಬಹುದು ಅಥವಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇರಬಹುದು, ಅವರು ವಿಚಾರಣೆ ನಡೆಸಿದಾಗ, ಆ ವರದಿಯನ್ನು ಸರಕಾರ ಒಪ್ಪಬಹುದು ಅಥವಾ ಒಪ್ಪದಿರಬಹುದು. ಕೇಂದ್ರ ಸರಕಾರದವರು ಈಗ ಈ ಕಾನೂನಿಗೆ ತಿದ್ದುಪಡಿಯನ್ನೂ ತಂದಿದ್ದಾರೆ.

ಆ ವರದಿಯನ್ನು ಸರಕಾರ ತೀರ್ಮಾನ ಮಾಡಿದರೆ. ಸಾರ್ವಜನಿಕರಿಗೂ ಕೂಡಾ ಬಿಟ್ಟುಕೊಡುವುದಿಲ್ಲ, ಅಂತಹದರಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೆ, ಇಲ್ಲದೆ ಹೋದರೆ ಅದನ್ನು ಉಗ್ರ ಪ್ರಮಾಣದಲ್ಲಿ ಕಡಿಮೆ ಮಾಡುವುದಕ್ಕೆ ಸಹಾಯವಾಗತಕ್ಕಂಥ ಕಾನೂನು ನಾವು ಮಾಡಿದ್ದೇವೆ. ಅದರ ಉಪಯೋಗವನ್ನು ಮಾಡಿಕೊಳ್ಳದೇ ಹೋದರೆ, ಬೇರೆ ಮಾರ್ಗ ಯಾವುದು ಇದೆ ಎಂಬುದನ್ನು ತಾವು ಸೂಚಿಸಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸುಮ್ಮನೆ ಬಿಟ್ಟು ಬಿಡುವುದು.

ಶ್ರೀ ಜಿ. ರಾಜುಗೌಡ.—ನನ್ನ ವೈಯಕ್ತಿಕವಾದ ಸಲಹೆಯನ್ನು ಕೊಟ್ಟಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಒಳ್ಳೆಯದು.

ಶ್ರೀ ಜಿ. ರಾಜುಗೌಡ.—ಸ್ವಾಮಿ ನಮ್ಮ ರಾಜ್ಯದಲ್ಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವರದಿಯನ್ನು ಪ್ರಕಟಣೆ ಮಾಡದೆ ಇರತಕ್ಕಂಥ ಕಾನೂನು ಇರಲಿಲ್ಲ. ಆ ಅಧಿಕಾರವನ್ನು ಕೇಂದ್ರ ಸರ್ಕಾರದವರು ತಿದ್ದುಮಾಡಿ ವರದಿಯನ್ನು ಪ್ರಕಟಣೆ ಮಾಡದಿದ್ದರೂ ಕಮೀಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ರಾಜುಗೌಡ.—ಆ ವಿಷಯವನ್ನು ಅಲ್ಲಿಗೆ ನಿಲ್ಲಿಸುತ್ತೇನೆ ಸ್ವಾಮಿ. ಈಗ ನಮ್ಮ ರಾಜ್ಯದಲ್ಲಿರತಕ್ಕಂಥ ನ್ಯಾಯಾಲಯಗಳಲ್ಲಿ ನ್ಯಾಯ ಪರಿಪಾಲನೆ ಯಾವ ರೀತಿಯಾಗುತ್ತಿದೆ ಎನ್ನುವುದಕ್ಕೆ ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದ ನ್ಯಾಯಾಲಯಗಳಲ್ಲಿ ೩೧-೧೨-೮೬ಕ್ಕೆ ಇತ್ಯರ್ಥವಾಗದೆ ಉಳಿದಿರತಕ್ಕಂಥ ಸಿವಿಲ್ ಮತ್ತು ಕ್ರಿಮಿನಲ್ ಕೇಸ್‌ಗಳು ಸುಮಾರು ೪,೯೧,೫೮೭.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ೯ ಲಕ್ಷ ಆಗಿವೆ.

ಶ್ರೀ ಜಿ. ರಾಜುಗೌಡ.—ಅದು ೩೧-೩-೮೮ಕ್ಕೆ ೯,೧೨,೨೧೫ ಕೇಸ್‌ಗಳು ಇತ್ಯರ್ಥವಾಗದೆ ಇರುವ ಕೇಸ್‌ಗಳು. ಕೇವಲ ೩ ತಿಂಗಳಲ್ಲಿ ೨೦,೬೬೮ ಮೊಕದ್ದಮೆಗಳು ಹೆಚ್ಚಾಗಿವೆ. ಇಲ್ಲಿ ಸರಾಸರಿ ನೋಡಿದರೆ ಸುಮಾರು ಒಂದು ತಿಂಗಳಿಗೆ ೭೩೦ ಕೇಸ್‌ಗಳು ಹೆಚ್ಚಾಗಿವೆ. ಇದಕ್ಕೆ ನೀವೇನು ಮಾಡಬೇಕು ಎಂದರೆ ನ್ಯಾಯಾಲಯಗಳಲ್ಲಿ ಕೊನೆ ಪಕ್ಷ ತಿಂಗಳಿಗೆ ೫೦೦ ಕೇಸ್‌ಗಳನ್ನು ಇತ್ಯರ್ಥ ಮಾಡುವ ಕೆಲಸ ಆಗಬೇಕು. ಆಗ ಮೊಕದ್ದಮೆಗಳ ಸಂಖ್ಯೆ ಸ್ವಲ್ಪ ಕಡಿಮೆಯಾಗುತ್ತವೆ. ಈ ರೀತಿ ಮಾಡಬೇಕೆಂದು ನಾನು ಸೂಚನೆ ಕೊಡುವುದಕ್ಕೆ ಬಯಸುತ್ತೇನೆ. ಇದಕ್ಕೆ ಕೊರತೆ ಏನು ಎಂದು ನಾನು ಯೋಚನೆ ಮಾಡಿದಾಗ ಎಲ್ಲಾ ಅಧೀನ ನ್ಯಾಯಾಲಯಗಳಿಂದ ಹಿಡಿದು ಉನ್ನತ ನ್ಯಾಯಾಲಯದವರೆವಿಗೂ ನ್ಯಾಯಾಧೀಶರ ಹುದ್ದೆಗಳು ಖಾಲಿಯಾಗಿವೆ, ದಿನಾಂಕ ೩೧-೧೨-೮೭ಕ್ಕೆ ಮಂಜೂರು ಮಾಡಿದ ೯೪ ಜಿಲ್ಲಾ ನ್ಯಾಯಾಧೀಶರ ಹುದ್ದೆಗಳು ೧೫೭ ಸಿವಿಲ್ ನ್ಯಾಯಾಧೀಶರು ಹುದ್ದೆಗಳು, ೨೫೧ ಮುನ್ಸಿಫ್ ಹುದ್ದೆಗಳು ಈ ಪೈಕಿ ೯ ಜಿಲ್ಲಾ ನ್ಯಾಯಾಧೀಶರ ಹುದ್ದೆಗಳು ೪೮ ಸಿವಿಲ್ ನ್ಯಾಯಾಧೀಶರ ಹುದ್ದೆಗಳು, ೮ ಮುನ್ಸಿಫ್ ಸೇವೆಯಿಂದ ಎರವಲು ಪಡೆಯಲಾಯಿತು. ಆಮೇಲೆ ೩೧-೧೨-೮೭ಕ್ಕೆ ಜಿಲ್ಲಾ ನ್ಯಾಯಾಧೀಶರ ಹುದ್ದೆಗಳು ೧೩ ಖಾಲಿ ಇದ್ದು ಸಿವಿಲ್ ನ್ಯಾಯಾಧೀಶರ ಹುದ್ದೆಗಳು ಎರಡು ಖಾಲಿ ಇದ್ದು. ಅಂದರೆ ಒಟ್ಟು ೧೫ ಹುದ್ದೆಗಳು ಖಾಲಿಯಾದವು. ಇಷ್ಟು ಖಾಲಿ ಹುದ್ದೆಗಳನ್ನು ತಾವಿಟ್ಟುಕೊಂಡು ನ್ಯಾಯವನ್ನು ಶೀಘ್ರದಲ್ಲಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ತಾವೇ ಯೋಚನೆ ಮಾಡಬೇಕು. ದಯಮಾಡಿ ಎಂತಹ ಕಾರಣಗಳೇ ಎದುರು ಬಂದರೂ ಸಹ ಕೋರ್ಟಿನಲ್ಲಿ ಸಿವಿಲ್ ನ್ಯಾಯಾಧೀಶರ ಹುದ್ದೆಗಳಾಗಲಿ ಅಥವಾ ಇನ್ನಿತರ ನ್ಯಾಯಾಧೀಶರ ಹುದ್ದೆಗಳನ್ನು ಖಾಲಿ ಇರುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ೧೯೭೮ ರಿಂದ ೧೯೮೬ ರವರೆವಿಗೆ ಪ್ರತಿ ವರ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ, ಹಿಂದುಳಿದ ಜಾತಿಯವರನ್ನು ಗುರುತಿಸಿ ಯಾರು ಅರ್ಹ ಕಾನೂನು ಪದವೀಧರರು ಇರುತ್ತಾರೋ ಅವರಿಗೆ ನ್ಯಾಯಾಲಯಗಳಲ್ಲಿ ತರಬೇತಿ ನೀಡುವ ಒಂದು ಯೋಜನೆಯನ್ನು ಹಾಕಿಕೊಂಡಿರಿ. ಈ ಯೋಜನೆ ಹಾಕಿಕೊಂಡ ಮೇಲೆ ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ. ೧೯೭೮ ರಲ್ಲಿ ಸುಮಾರು ೨೬ ಜನರನ್ನು ತರಬೇತಿ ಮಾಡಿದ್ದೀರಿ. ಆಮೇಲೆ ೧೯೮೮ ನೇ ಇಸವಿಯಲ್ಲಿ ೪೦ ಜನರನ್ನು ತರಬೇತಿ

ಮಾಡಿದ್ದೀರಿ. ೧೯೮೧ ನೇ ಇಸವಿಯಲ್ಲಿ ೧೦೦ ಜನರನ್ನು ತರಬೇತಿ ಮಾಡಿದೀರಿ. ೧೯೭೫ ರಿಂದ ೧೯೮೩ ರವರೆವಿಗೆ ಸುಮಾರು ೯ ವರ್ಷದಲ್ಲಿ ೯೦೦ ಜನರನ್ನು ತರಬೇತಿ ಮಾಡಬೇಕಾಗಿತ್ತು. ಆದರೆ ತಾವು ಬರೀ ೪೮೩ ಜನರನ್ನು ಮಾತ್ರ ತರಬೇತಿ ಮಾಡಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನ್ಯಾಯಾಧೀಶರನ್ನು ನೇಮಕಾತಿ ಮಾಡುವುದು ಅದು ಮುನ್ಸೀಫ್ ಮ್ಯಾಜಿಸ್ಟ್ರೇಟ್‌ನಿಂದ ಹಿಡಿದು ಎಲ್ಲಾ ಉನ್ನತ ಮಟ್ಟದ ನ್ಯಾಯಾಧೀಶರವರೆವಿಗೂ ನ್ಯಾಯಾಂಗ ಇಲಾಖೆ. ಸರ್ಕಾರಿಂದ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ. ಹೈಕೋರ್ಟ್‌ನವರು ನೇಮಕ ಮಾಡುತ್ತಾರೆ. ಅದು ಬಿಟ್ಟು ಬೇರೆ ವಿಚಾರಗಳ ವ್ಯಾಖ್ಯಾನ ಮಾಡಬೇಕೆಂದು ನಾನು ಮಾನ್ಯ ರಾಜುಗೌಡರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ.—ತಾವು ತಪ್ಪು ಅರ್ಥ ಮಾಡಿಕೊಂಡಿದ್ದೀರಿ. ನಾನು ಹೇಳತಕ್ಕಂಥಾದ್ದು ಬೇರೆ. ಯಾರನ್ನಾದರೂ ನೇಮಕ ಮಾಡಿ. ತಾವು ಕೊಟ್ಟಿರುವ ಒಂದು ರೂಪರೇಖೆಗಳ ಪ್ರಕಾರ ಪ್ರತಿ ವರ್ಷ ನೂರು ಜನ ಅರ್ಹ ಕಾನೂನು ಪದವೀಧರರನ್ನು ನ್ಯಾಯಾಲಯದಲ್ಲಿ ತರಬೇತಿ ಕೊಡ ತಕ್ಕಂಥ ಯೋಜನೆಯನ್ನು ಮಾಡಿದ್ದೀರಿ. ಕಳೆದ ೯ ವರ್ಷದಲ್ಲಿ ೯೦೦ ಜನರನ್ನು ತರಬೇತಿ ಗೊಳಿಸ ಬೇಕಾಗಿತ್ತು, ಆದರೆ ೪೮೩ ಜನರನ್ನು ಮಾತ್ರ ತರಬೇತಿ ಪಡಿಸಿದ್ದೀರಿ ಇದರಲ್ಲಿ ನೂರಕ್ಕೆ ೨೦ ಜನ ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ತರಬೇತಿ ಪಡಿಸಬೇಕಾಗಿತ್ತು, ಅಲ್ಲೂ ನೀವು ವಿಫಲ ರಾಗಿದ್ದೀರಿ,

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಕೊಟ್ಟಿದ್ದುದು ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಕ್ಕೆ.

ಶ್ರೀ ಜಿ. ರಾಜುಗೌಡ.—೯ ವರ್ಷದಲ್ಲಿ ಕೇವಲ ೪೮೩ ಜನರಿಗೆ ಮಾತ್ರ ನೀವು ತರಬೇತಿ ಕೊಟ್ಟಿದ್ದೀರಿ. ಈ ತರಬೇತಿ ಕೊಡುವ ಉದ್ದೇಶ ಸಫಲವಾಗಲಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ೧೯೮೦ ರಲ್ಲಿ ಅನುಸೂಚಿತ ಜಾತಿಯವರಿಗೆ ೨೩ ಪರ್ಸೆಂಟ್ ಜನಕ್ಕೆ ತರಬೇತಿ ಕೊಡ ಬೇಕಾಗಿತ್ತು ಆದರೆ ಕೇವಲ ೧೬ ಜನಕ್ಕೆ ಮಾತ್ರ ತರಬೇತಿ ಕೊಟ್ಟಿದ್ದೀರಿ. ೧೯೮೧ ರಲ್ಲಿ ೮ ಜನಕ್ಕೆ ಮಾತ್ರ ತರಬೇತಿ ಕೊಟ್ಟಿದ್ದೀರಿ. ಆಮೇಲೆ ೧೯೮೨ ರಲ್ಲಿ ೭ ಹೊಸ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಿದ್ದೀರಿ ಅದೇ ರೀತಿ ವಿಶೇಷ ಜಿಲ್ಲಾ ನ್ಯಾಯಾಲಯಗಳನ್ನು ಬೆಂಗಳೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಡಿಷನಲ್ ಕೋರ್ಟ್‌ಗಳನ್ನು ರಾಜ್ಯದಲ್ಲಿ ೧೩ ಕಡೆ ತೆಗೆದಿದ್ದೀರಿ ಆದರೆ ನಮ್ಮ ಕೊಳ್ಳೆಗಾಲದಲ್ಲಿ ಒಂದು ಅಡಿಷನಲ್ ಕೋರ್ಟ್‌ನ್ನು ನೀವು ಪ್ರಾರಂಭ ಮಾಡಿಲ್ಲ. ನಮ್ಮ ಕೊಳ್ಳೆಗಾಲ ತಾಲ್ಲೂಕು ಬಹಳ ದೊಡ್ಡದು. ನಮ್ಮ ತಾಲ್ಲೂಕು ಕೇಂದ್ರ ಪಶ್ಚಿಮದಲ್ಲಿ ಇದೆ. ಪೂರ್ವಕ್ಕೆಲ್ಲಾ ಪೂರಾ ಹಳ್ಳಿಗಳು ಇವೆ. ಪೂರ್ವದ ಕೊನೆಯ ಹಳ್ಳಿಗೂ ನಮ್ಮ ತಾಲ್ಲೂಕು ಕೇಂದ್ರಕ್ಕೂ ಸುಮಾರು ೧೪೫ ಕಿಲೋ ಮೀಟರ್ ದೂರವಾಗುತ್ತದೆ ಇಷ್ಟು ದೂರದಿಂದ ತಾಲ್ಲೂಕು ಕೇಂದ್ರಕ್ಕೆ ಬರುವುದಕ್ಕೆ ರೈತರುಗಳಿಗೆ ಬಹಳ ತೊಂದರೆಯಾಗುತ್ತದೆ. ಬೆಂಗಳೂರಿನಿಂದ ಮೈಸೂರಿಗೆ ಇರುವಷ್ಟು ದೂರವನ್ನು ಅವರು ಉಪಕ್ರಮಿಸಬೇಕಾಗುತ್ತದೆ. ಆದ್ದರಿಂದ, ದಯಮಾಡಿ ನಮ್ಮ ಕೊಳ್ಳೆಗಾಲ ಕೇಂದ್ರದಲ್ಲಿ ಇನ್ನೊಂದು ಮುನ್ಸಿಫ್ ಕೋರ್ಟ್‌ನ್ನು ತೆಗೆದರೆ ಒಳ್ಳೆಯ ದಾಗುತ್ತ ದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಆಮೇಲೆ, ಪ್ರತಿಯೊಂದು ಅಧೀನ ನ್ಯಾಯಾಲಯಕ್ಕೂ ದೂರವಾಣಿ ಸಂಪರ್ಕವನ್ನು ಕಲ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ೧೯೯೦ರ ಹೊತ್ತಿಗೆ ಎಲ್ಲೆಲ್ಲಿ ನ್ಯಾಯಾಲಯಗಳು ಇಲ್ಲವೋ ಮತ್ತು ನ್ಯಾಯಾಧೀಶರುಗಳು ಇಲ್ಲವೋ ಅಂಥ ಕಡೆಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪನೆ ಮಾಡ ಬೇಕು ಹಾಗೂ ನ್ಯಾಯಾಧೀಶರುಗಳನ್ನು ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ರಾಜ್ಯ ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ. ಇದು ಬಹಳ ಒಳ್ಳೆಯ ಕೆಲಸ. ಅದೇನೆಂದರೆ, ರಾಜ್ಯದಲ್ಲಿ ಪೆಂಡಿಂಗ್ ಇರುವ ಸಿವಿಲ್ ಮತ್ತು ಕ್ರಿಮಿನಲ್ ಕೇಸ್ ಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕೆಂದು ಎಲ್ಲಾ ನ್ಯಾಯಾಲಯಗಳಿಗೂ ತಿಳಿಸಲಾಗಿದೆ. ಈ ರೀತಿ ಎಲ್ಲಾ ನ್ಯಾಯಾಲಯಗಳಲ್ಲೂ ಕೇಸ್‌ಗಳನ್ನು ಬೇಗ ಬೇಗ ವಿಚಾರಣೆ ಮಾಡಿ ಇತ್ಯರ್ಥ ಮಾಡು ವುದು ಒಳ್ಳೆಯದು. ಈ ಸತ್ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಬೇಕು. ಮತ್ತೆ ಇನ್ನೂ ಒಂದು ಉತ್ತಮವಾದ ಕೆಲಸವನ್ನು ತಮ್ಮ ಕಾಲದಲ್ಲಿ ಮಾಡಿದ್ದೀರಿ. ಅದೇನೆಂದರೆ, ಕರ್ನಾಟಕ ಕಾನೂನು ಉಚಿತ ನೆರವು ಮಂಡಳಿ ಎನ್ನತಕ್ಕಂಥದು . ಇದು ದಿನಾಂಕ ೫-೩-೧೯೮೧ರಂದು ಅಸ್ತಿತ್ವಕ್ಕೆ

ಬಂದಿದೆ. ಈ ಮಂಡಳಿ ಅಸ್ತಿತ್ವಕ್ಕೆ ಬಂದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು ೩೫೧ ಕಡೆ ಉಚಿತ ಕಾನೂನು ಶಿಬಿರಗಳನ್ನು ಮಾಡಿ ಇದರ ಮುಖಾಂತರ ೪೬,೦೧೦ ಜನರುಗಳಿಗೆ ಉಚಿತ ಕಾನೂನು ನೆರವನ್ನು ನೀಡಲಾಗಿದೆ. ಅದರಲ್ಲಿ ೪,೧೮೦ ಮೋಟಾರ್ ವಾಹನಗಳ ಅಪಘಾತ ಕೇಸ್‌ಗಳನ್ನು ಇತ್ಯರ್ಥ ಮಾಡಿ ನೊಂದವರಿಗೆ ೬ ಕೋಟಿ ೨೫ ಲಕ್ಷ ೭೭೪ ರೂಪಾಯಿಗಳನ್ನು ಪರಿಹಾರಧನವಾಗಿ ಕೊಡಿಸಿದ್ದೀರಿ. ಇದು ಬಹಳ ಸಂತೋಷದ ವಿಷಯ ಆದರೆ ಇನ್ನೂ ೯ ಲಕ್ಷದ ೨೫ ಸಾವಿರ ಸಂಖ್ಯೆಯಷ್ಟು ಕೇಸ್‌ಗಳು ಇತ್ಯರ್ಥವಾಗಬೇಕಾಗಿದೆ. ಬಹುಶಃ ನಿಮ್ಮ ಉಚಿತ ಕಾನೂನು ನೆರವಿನ ವಿಚಾರ ಸಾರ್ವಜನಿಕರಲ್ಲಿ ಹೆಚ್ಚು ಪ್ರಚಾರವಾಗಿಲ್ಲವೆಂದು ಕಾಣುತ್ತದೆ. ಈಗ ಅಧೀನ ನ್ಯಾಯಾಲಯದಲ್ಲಿ ಪೆಂಡಿಂಗ್ ಇರುವ ಕೇಸ್‌ಗಳನ್ನು ಆದಷ್ಟು ಶೀಘ್ರವಾಗಿ ಇತ್ಯರ್ಥ ಪಡಿಸುವುದಕ್ಕೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆ ಮೇಲೆ ಅನೇಕ ಕೇಸ್‌ಗಳಲ್ಲಿ ಮೊಕದ್ದಮೆದಾರರು ರಾಜೀ ಆಗಿರುತ್ತಾರೆ. ರಾಜೀ ಆದ ಮೇಲೆ ಕೋರ್ಟ್‌ಗೆ ಕಟ್ಟಿರತಕ್ಕ ಸ್ಟ್ಯಾಂಪ್ ಫೀಸನ್ನು ಮೊಕದ್ದಮೆದಾರರಿಗೆ ವಾಪಸ್ ಕೊಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ತಾವು ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಿರ್ದಿಷ್ಟ ಸಮಯದೊಳಗೆ ಕೇಸ್‌ನ್ನು ಹಿಂತೆಗೆದುಕೊಂಡರೆ ಸ್ಟ್ಯಾಂಪ್ ಫೀಸ್‌ನಲ್ಲಿ ಅರ್ಧ ವಾಪಸ್ ಬರುತ್ತದೆ. ಪೂರ್ತಿ ವಾಪಸ್ ಬರಬೇಕಾದರೆ ಕಾನೂನಲ್ಲಿಯೇ ಬದಲಾವಣೆಯನ್ನು ಮಾಡಬೇಕಾಗುತ್ತದೆ.

ಶ್ರೀ ಜಿ. ರಾಜುಗೌಡ.—ಆ ಮೇಲೆ, ಬೆಂಗಳೂರಿನಲ್ಲಿ ಒಂದು ಫ್ಯಾಮಿಲಿ ಕೋರ್ಟ್‌ನ್ನು ಮಾಡಿದ್ದೀರಿ. ಅದೇ ರೀತಿ ಎಲ್ಲಾ ಜಿಲ್ಲೆಗಳಲ್ಲೂ ಫ್ಯಾಮಿಲಿ ಕೋರ್ಟ್‌ಗಳನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಮಹಿಳೆಯ ಮೇಲೆ ಅತ್ಯಾಚಾರ, ವರದಕ್ಷಿಣೆ ಪಿಡುಗಿನಿಂದ ಆಗತಕ್ಕ ಸಾವು ನೋವು ಮುಂತಾದ ಪ್ರಕರಣಗಳು ಕ್ಷಿಪ್ರಗತಿಯಲ್ಲಿ ಇತ್ಯರ್ಥಪಡಿಸುವುದಕ್ಕೆ ಬೆಂಗಳೂರಿನಲ್ಲಿ ಒಂದು ವಿಶೇಷ ಕೋರ್ಟ್‌ನ್ನು ತೆರೆಯಬೇಕೆಂದು ಕೇಳಿಕೊಳ್ಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಆ ಮೇಲೆ ಸಂಸದೀಯ ವ್ಯವಹಾರಗಳ ಬಗ್ಗೆ ಒಂದೆರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಈ ಸದನದಲ್ಲಿ ನಾವು ಮಾಡಿರತಕ್ಕಂಥ ಭಾಷಣಗಳ ದಾಖಲು, ತಪ್ಪು ಒಪ್ಪು ದಾಖಲು ಈ ಮೊದಲು ೮–೧೦ ದಿನಗಳ ಅವಧಿಯಲ್ಲಿ ನಮಗೆ ಸಿಗುತ್ತಾ ಇತ್ತು, ಆದರೆ ಈಗ ಅದು ೩–೪ ತಿಂಗಳಾದರೂ ಕೂಡ ನಮ್ಮ ಕೈಗೆ ಬರುತ್ತಿಲ್ಲ. ಹಾಗೆ ವಿಳಂಬವಾಗಿ ನಮ್ಮ ಕೈಸೇರಿದಾಗ ನಾವು ಏನು ಮಾತನಾಡಿದ್ದೇವೆ ಎಂಬುದೇ ಮರೆತು ಹೋಗಿರುತ್ತದೆ ಹೀಗೆ ವಿಳಂಬವಾಗದಂತೆ ಆದಷ್ಟು ಬೇಗ ನಮ್ಮ ಭಾಷಣಗಳ ಪ್ರತಿಯನ್ನು ಕೊಡಿಸುವಂಥ ಒಂದು ಏರ್ಪಾಡನ್ನು ಮಾಡಬೇಕು,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ತಪ್ಪು ಅಭಿಪ್ರಾಯ ಹೊಂದಿದ್ದಾರೆ. ನಿಜವಾಗಿಯೂ ಹಿಂದೆ ೩–೪ ತಿಂಗಳ ನಂತರ ಭಾಷಣಗಳ ಪ್ರತಿಯು ಸದಸ್ಯರಿಗೆ ಸಿಗುತ್ತಿತ್ತು ಈಗ ಅತೀ ತ್ವರಿತವಾಗಿ ಸಿಗುವಂಥ ಏರ್ಪಾಡಾಗಿದೆ. ಈ ಬಗ್ಗೆ ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಜಿ. ರಾಜುಗೌಡ.—ಹಾಗೆಯೇ ಶಾಸಕರುಗಳಿಗೆ ತಿಂಗಳೊಂದಕ್ಕೆ ಕನಿಷ್ಟ ಒಂದೂವರೆ ಸಾವಿರ ರೂಪಾಯಿಗಳವರೆಗೆ ಟ್ರಂಕ್‌ಕಾಲ್ ಬಿಲ್ ಬರುತ್ತಾ ಇದೆ. ಆ ಬಗ್ಗೆ ಏನಾದರೂ ಒಂದು ಪರಿಹಾರವನ್ನು ದೊರಕಿಸಿಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಮಿನಿಸ್ಟರ್ಸ್ ಸ್ಯಾಲರಿ ಆಕ್ಟ್‌ನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ಜಿ. ರಾಜುಗೌಡ.—ಶಾಸಕರ ಸಮಿತಿಯಲ್ಲಿರತಕ್ಕಂಥಹವರಿಗೆ ದೂರವಾಣಿ ಸೌಲಭ್ಯ ಮತ್ತಿತರ ಕೆಲವು ಸೌಲಭ್ಯಗಳನ್ನು ಅಗತ್ಯವಾಗಿ ಕೊಡಬೇಕು. ಬೇರೆ ರಾಜ್ಯಗಳಲ್ಲಿ ಇಂತಹ ಹಲವಾರು ಸೌಲಭ್ಯಗಳನ್ನು ಕೊಟ್ಟಿರುತ್ತಾರೆ. ಹಾಗೆ ಬೇರೆ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ಕೂಡ ಅಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕನಿಷ್ಟ ೧೦ ಜನ ಶಾಸಕರುಗಳಿಗೆ ಒಬ್ಬ ಶೀಘ್ರಲಿಪಿಗಾರರನ್ನು ಕೊಡುವಂಥ ಒಂದು ವ್ಯವಸ್ಥೆ ಆಗಬೇಕು. ಅಧಿವೇಶನಕಾಲದಲ್ಲಿ ನಾವು ಏನಾದರೂ ಟೈಪ್ ಮಾಡಿಸಿಕೊಳ್ಳಬೇಕೆಂದರೆ ಗಂಟೆಗಟ್ಟಲೆ ನಿಂತು ಕೊಂಡು ನಮ್ಮ ಅಮೂಲ್ಯವಾದ ಸಮಯವನ್ನು ಹಾಳು ಮಾಡುವಂಥ ಸಂದರ್ಭ ಬಂದಿದೆ. ಆದುದರಿಂದ ಕನಿಷ್ಟ ಅಧಿವೇಶನ ಕಾಲದಲ್ಲಾದರೂ ಈ ಒಂದು ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶಾಸಕರ

ಭವನದಲ್ಲಿರತಕ್ಕಂಥ ರೂಮ್‌ಬಾಯ್ಸ್ ಸರಿಯಾಗಿ ಕೆಲಸವನ್ನು ಮಾಡುತ್ತಾ ಇಲ್ಲ. ಈಗ ತಾವುಗಳು ಅಲ್ಲಿಯ ಮೂರು ಶಿಫ್ಟ್‌ಗಳಿಗೆ ನಾಲ್ಕೂವರೆ ಸಾವಿರ ರೂಪಾಯಿಗಳಷ್ಟು ಖರ್ಚು ಮಾಡುತ್ತೀರಿ. ಒಬ್ಬನು ಒಂಬತ್ತು ರೂಮ್‌ಗಳನ್ನು ನೋಡಿಕೊಳ್ಳುತ್ತಾನೆ. ಅಂದರೆ ೫೦೦ ರೂಪಾಯಿಗಳು ಒಂದು ರೂಮಿನ ವ್ಯವಸ್ಥೆಗೆ ಬಿದ್ದ ಹಾಗೆ ಆಯಿತು. ಅದರ ಬದಲು ಆ ಹಣವನ್ನು ನಮಗೆ ಸ್ವತಂತ್ರವಾಗಿ ಕೊಟ್ಟಲ್ಲಿ ನಾವೇ ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಏಕೆಂದರೆ ಈಗಿರುವ ವ್ಯವಸ್ಥೆಯಿಂದ ನಮಗೆ ಸೇವೆ ಸರಿಯಾಗಿ ದೊರೆಯುತ್ತಾ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ನಮ್ಮ ಲೆಜಿಸ್ಲೇಚರ್ ಸೆಕ್ರೇಟರಿಯೇಟ್ ಎಂದು ನಾವೇನು ಕರೆಯುತ್ತಾ ಇದ್ದೇವೆ. ಅದು ಸ್ವತಂತ್ರವಾಗಿರಬೇಕೆಂದು ಹೇಳಿ, ಅವರಿಗೆ ಆಸ್ವತಂತ್ರ್ಯವನ್ನು ನಾವೆಲ್ಲರೂ ಕೊಟ್ಟಿದ್ದೇವೆ. ನಾನು ಆ ಪ್ರಸ್ತಾವನೆಯು ಬಂದಾಗ ಅವರಿಗೆ ಸ್ವಾತಂತ್ರ್ಯವನ್ನು ಕೊಡೋಣ. ಆದರೆ ಅದರ ಬಗ್ಗೆ ಟೀಕೆ ಟಿಪ್ಪಣಿಗಳು ಬಂದಾಗ ಉತ್ತರ ಹೇಳುವವರು ಯಾರು ? ಎಂದು ಕೇಳಿದಾಗ ನನಗೆ ಉತ್ತರ ಸಿಗಲಿಲ್ಲ. ಆದುದರಿಂದ ಆ ಪ್ರಶ್ನೆಯನ್ನು ನಾನು ಮಾನ್ಯ ರಾಜುಗೌಡರಿಗೆ ಕೇಳುತ್ತೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಉಪಾಧ್ಯಕ್ಷರೆ, ನಮಗೆ ಶಾಸಕರ ಭವನದಲ್ಲಿ ಸರಿಯಾದ ರೀತಿಯಲ್ಲಿ ಊಟ ತಿಂಡಿಗಳು ಸಿಗುತ್ತಾ ಇಲ್ಲ. ನಮಗೆ ಅಲ್ಲಿಗೆ ಹೋದರೆ ಕುಳಿತುಕೊಂಡು ತಿನ್ನಲು ಸ್ಥಳಾವಕಾಶ ಇರುವುದಿಲ್ಲ. ಆದುದರಿಂದ ನಮಗೆ ಪ್ರತ್ಯೇಕವಾದ ಒಂದು ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ, ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಭೂಪತಿಯವರು......

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೆ, ನನಗೆ ಇನ್ನೊಂದು ನಿಮಿಷ ಕಾಲಾವಕಾಶವನ್ನು ಕೊಡಿ ಮೀನುಗಾರಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಸ್ವಾಮಿ, ಕಳೆದ ವರ್ಷ ಮಾನ್ಯ ಮೀನುಗಾರಿಕೆ ಮಂತ್ರಿಗಳವರು ರಾಜ್ಯ ಒಳನಾಡಿನ ಮೀನುಗಾರಿಕೆ ಸಂಗೋಪನೆ, ಅಭಿವೃದ್ಧಿಗಳ ಕುರಿತಾಗಿ ಮುಂದಿನ ಅಧಿವೇಶನದಲ್ಲಿ ಪ್ರಸ್ತಾವವನ್ನು ಮಂಡಿಸಲಾಗುತ್ತದೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆದುದರಿಂದ ಆ ಬಗ್ಗೆ ಇದೇ ಅಧಿವೇಶನದಲ್ಲಿ ಮಂಡನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ರಾಜ್ಯದಲ್ಲಿರತಕ್ಕಂಥ ಮೀನುಗಾರರ ಸಹಕಾರಿ ಸಂಘಗಳ ಮುಖಾಂತರ ಎಷ್ಟು ಟನ್ ಮೀನುಗಳ ಮಾರಾಟವಾಗಿದೆ? ನಷ್ಟದಲ್ಲಿರತಕ್ಕಂಥ ಸಂಘಗಳು ಯಾವುವು? ಅಂತಹ ಸಂಘಗಳಿಗೆ ಏನೇನು ಉತ್ತೇಜನಗಳನ್ನು ಕೊಟ್ಟಿದ್ದೀರಿ ? ಡೀಸೆಲ್‌ಗಾಗಿ ಶೇಕಡ ೮೦ರಷ್ಟು ಸಹಾಯಧನವನ್ನು ಮೀನುಗಾರಿಕಾ ಫೆಡರೇಶನ್ ಮೂಲಕ ದೊರೆಯಬೇಕು ಅದರ ಮುಖಾಂತರ ಮೀನುಗಾರರ ಅಭಿವೃದ್ಧಿಗಾಗಿ ಶ್ರಮಿಸಬೇಕು.

೧೨-೩೦ ಮಧ್ಯಾಹ್ನ.

ಮತ್ಸ್ಯೋದ್ಯಮಕ್ಕೆ ಹೆಚ್ಚು ಆಕರ್ಷಣೆಯನ್ನು ಉಂಟು ಮಾಡಬೇಕು. ರಾಜ್ಯದಲ್ಲಿ ೪.೫೭ ಲಕ್ಷ ಹೆಕ್ಟೇರ್ ನಷ್ಟು ವಿಸ್ತೀರ್ಣದಲ್ಲಿ ಮೀನಿನ ಸಂಪನ್ಮೂಲ ಲಭ್ಯವಿರುವ ಆ ಸ್ಥಳಗಳಲ್ಲಿ ಕೋಟ್ಯಾಂತರ ಮೀನುಗಳನ್ನು ಸಾಕಬಹುದಾದ್ದರಿಂದ ಅಷ್ಟು ಮೀನಿನ ಮರಿಗಳನ್ನು ಬೀಜೋತ್ಪನ್ನ ಮಾಡುವುದಕ್ಕೆ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ, ಇವುಗಳ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ ಎಂದು ಸಚಿವರು ತಿಳಿಸಬೇಕು. ಇಂಥ ಕೇಂದ್ರಗಳು ಮತ್ಸ್ಯೋದ್ಯಮಕ್ಕೆ ಭದ್ರಬುನಾದಿ ಆದ್ದರಿಂದ ಇವುಗಳನ್ನು ಬಲಪಡಿಸಲು ರಾಜ್ಯದಲ್ಲಿ ಒಂದು ಮೀನುಗಾರಿಕಾ ಫೆಡರೇಷನ್ ಮಾಡಬೇಕು. ಏಕಕಾಲದಲ್ಲಿ ೪.೫೭ ಲಕ್ಷ ಮೀನಿನ ಮರಿಗಳನ್ನು ಸಾಕಲು ಮೊದಲು ಅವಕಾಶ ಮಾಡಿಕೊಡಲಿ, ಆಮೇಲೆ ಫೆಡರೇಷನ್ ಸ್ಥಾಪಿಸಲಿ. ಮೀನುಗಾರರು ನದಿಗಳ ಪಕ್ಕದಲ್ಲಿ ಭದ್ರತೆಯಿಲ್ಲದೆ ಬದುಕುತ್ತಿದ್ದಾರೆ. ಇವರ ನಿವಾಸಗಳಿಗೆಂದು ಕೇಂದ್ರ ಸರ್ಕಾರ ಕೊಟ್ಟಿರುವುದರಲ್ಲಿ ನಿಮಗೆಷ್ಟು ಬಂದಿದೆ, ಎಷ್ಟು ಖರ್ಚು ಮಾಡಿದ್ದೀರಿ ಮತ್ತು ಇನ್ನಾವ ಯೋಜನೆಗಳಿವೆ ಎಂಬುದನ್ನು ಹೇಳಬೇಕು. ನನ್ನ ಕ್ಷೇತ್ರದ ಪಕ್ಕದ ಹೊಗೇನಕಲ್

ಧಾವಂದ ಬಳಿ ಒಳ್ಳೆಯ ಮೀನಿನ ಸಂಪತ್ತು ಇದ್ದು ಅಲ್ಲಿಗೆ ತಮಿಳು ನಾಡಿನಿಂದ ಬೆಸ್ತರು ಬಂದು ಹಿಂಗಿಬೀಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಆ ಸರ್ಕಾರಕ್ಕೆ ಸೂಕ್ತ ಎಚ್ಚರಿಕೆ ನೀಡಿ ಅಲ್ಲಿರುವ ಸಂಪತ್ತನ್ನು ನಮ್ಮ ರಾಜ್ಯ ಬಳಸಿಕೊಳ್ಳಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಇಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಬೇಡಿಕೆ, ರೇಷ್ಮೆಯ ಇಲಾಖೆ, ಮೀನುಗಾರಿಕೆ ಮತ್ತು ರಾಜ್ಯ ವಿಧಾನ ಮಂಡಲ ಇಷ್ಟು ಬೇಡಿಕೆ ಇವೆ. ಇದರಲ್ಲಿ ವಿಧಾನಮಂಡಲದ್ದೇ ಪ್ರತ್ಯೇಕ ಬೇಡಿಕೆ. ನಮ್ಮ ವಿಧಾನ ಮಂಡಲದ ಬಗ್ಗೆ ಯಾವುದೇ ರೀತಿಯ ವಾರ್ಷಿಕ ವರದಿಯಾಗಲಿ, ಕಾಗದ ಪತ್ರಗಳ ಮಾಹಿತಿಯಾಗಲೀ ನಮಗೆ ಸಿಕ್ಕಿಲ್ಲ. ನಾನೇ ಕೊನೆಗೆ ಇದರ ಬಗ್ಗೆ ಆಸಕ್ತಿವಹಿಸಿ ಹುಡುಕಿದಾಗ ತಿಳಿದುಬಂದಿದ್ದೇನೆಂದರೆ ಈ ವರ್ಷ ಸೆಕ್ರೆಟರಿಯೇಟ್ ವರದಿ ತಯಾರು ಮಾಡಿಲ್ಲ. ಕಳೆದ ವರ್ಷವೇ ತಯಾರು ಮಾಡುವುದನ್ನು ಕೈಬಿಟ್ಟಿದ್ದಾರೆಂಬುದು ಇದರಿಂದ ನನಗೆ ಏನು ಸಂಶಯ ಬಂದಿದೆ ಎಂದರೆ ವಿಧಾನಮಂಡಲದ ಬಗ್ಗೆ ಚರ್ಚೆ ಮಾಡುವ ಹಕ್ಕು ಈ ಮನೆಗೆ ಇದೆಯೋ ಇಲ್ಲವೋ ಎನ್ನುವುದು ವರದಿ ಇಲ್ಲದೆ ಹೇಗೆ ಮಾತ ನಾಡುವುದು ? ಆದರೆ ಶಾಸಕಾಂಗ ಮತ್ತು ವಿಧಾನಮಂಡಲಗಳ ಬಗ್ಗೆ ನನಗಂತೂ ಮಾತನಾಡ ಬೇಕೆನಿಸುತ್ತಿದೆ. ಜವಾಬ್ದಾರಿಯಿಂದಲೇ ಮಾತನಾಡಬೇಕಾಗುತ್ತದೆ ಸ್ವಲ್ಪ ಶಬ್ದ ಹೆಚ್ಚುಕಡಿಮೆ ಆದರೂ ಕೂಡ ಬ್ರೀಚ್ ಆಫ್ ಪ್ರಿವಿಲೇಜ್ ಮೋಷನನ್ನು ಮೂವ್ ಮಾಡುವ ಸಂದರ್ಭಗಳು ಬರುತ್ತವೆ. ಇಷ್ಟೆಲ್ಲ ಇದ್ದಾಗ ವಿಧಾನಮಂಡಲದ ಕಾರ್ಯಚಾರಣೆ ಏನು, ಅದರ ಇತಿಮಿತಿಗಳೇನು ಎಂದು ಹೇಗೆ ತಿಳಿದುಬರುವುದು ? ಅಧ್ಯಕ್ಷರೇ, ಹಿಂದೆ ೧೯೭೭ರ ಅಕ್ಟೋಬರ್ ೧೪, ೧೫ರಂದು ನವದೆಹಲಿಯಲ್ಲಿ ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್ ನಡೆದಾಗ ಅದರಲ್ಲಿ ಮೈಸೂರು ಅಸೆಂಬ್ಲಿ ಅಧ್ಯಕ್ಷ ಬಾಳಿಗಾ ಅವರು ಭಾಗವಹಿಸಿದ್ದರು. ಇದಾದ ನಂತರ ರಿಸರ್ಚ್ ಇಲಾಖೆಯಿಂದ ಮೂರು ವರದಿಗಳನ್ನು ನಾನು ತಂದೆ, ೧೯೮೫ರಲ್ಲಿ ನಡೆದ ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ರಾಜ್ಯ ವಿಧಾನ ಮಂಡಲಗಳ ಕಾರ್ಯಾಚರಣೆಯ ಬಗ್ಗೆ ಚರ್ಚೆ ಯಾಗಿದೆ. ನಮ್ಮ ಇವತ್ತಿನ ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಬಿ. ಜಿ. ಬಣಕಾರ್‌ರವರು ಕೂಡ ಆ ಸಭೆಯಲ್ಲಿ ಭಾಗವಹಿಸಿದ್ದಾರೆ. ಮತ್ತು ಮೇಲ್ಮನೆಯ ಉಪಾಧ್ಯಕ್ಷರಾದ ಶ್ರೀ ಎಸ್. ಮಲ್ಲಿಕಾರ್ಜುನಯ್ಯನವರು ಭಾಗವಹಿಸಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್. – ನಾನು ಈ ಸಭೆಯಲ್ಲಿ ೧೯೭೮ನೇ ಇಸವಿಯಿಂದ ಸದಸ್ಯನಾಗಿದ್ದೇನೆ. ಮೊದಲನೇಯ ವರ್ಷ ಈ ವಿಧಾನ ಮಂಡಲದ ಸಮಸ್ಯೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಪಟ್ಟಾಗ ಅಂದಿನ ಸಭಾಧ್ಯಕ್ಷರು ಮತ್ತು ಅವರ ನಂತರ ಬಂದಂತಹ ಸಭಾಧ್ಯಕ್ಷರು ವಿಧಾನ ಮಂಡಲದ ಕಾರ್ಯಾಚರಣೆಯ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆ ಮಾಡತಕ್ಕಂತಹ ಸಂಪ್ರದಾಯ ನಮ್ಮಲ್ಲಿ ಇಲ್ಲ ದಯಮಾಡಿ ಅದನ್ನು ಮಾಡಬೇಡಿ ಎಂದು ಹಲವಾರು ಸಲ ಹೇಳಿದರು. ಈ ಒಂದು ಹಿನ್ನೆಲೆಯಲ್ಲಿ ನಾವು ಏನೂ ಪ್ರಸ್ತಾಪ ಮಾಡಲಿಲ್ಲ. ಇಲ್ಲಿ ಹೆಚ್ಚಾಗಿ ಬರತಕ್ಕಂಥಾದ್ದು ವಿಧಾನ ಮಂಡಲದಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಅನೇಕ ವರ್ಗಗಳ ತರಗತಿಗಳ ಅಧಿಕಾರಿಗಳ ಪ್ರಶ್ನೆ. ಇದು ಒಂದು ಭಾಗ ಇದಾದ ನಂತರ ಈ ವಿಧಾನ ಮಂಡಲಕ್ಕೆ ಸ್ವಾತಂತ್ರ್ಯ ಕೊಡಬೇಕು ಎನ್ನತಕ್ಕಂತಹ ಪ್ರಸ್ತಾಪ ಬಂತು ಈ ಮಾತಿನ ತತ್ವವನ್ನು ಒಪ್ಪಿಕೊಂಡು ಅವರಿಗೆ ಸ್ವಾತಂತ್ರ್ಯವನ್ನು ಕೂಡ ಕೊಟ್ಟಿದ್ದೂ ಆಗಿದೆ. ಈ ಸ್ವಾತಂತ್ರ್ಯ ಕೊಡುವಿಕೆ ಎಲ್ಲಾ ರಾಜ್ಯಗಳಲ್ಲೂ ಏಕ ರೂಪವಾಗಿಲ್ಲ ಒಂದೊಂದು ಕಡೆ ಒಂದೊಂದು ರೀತಿಯಾಗಿ ಇದೆ. ಕೆಲವು ಕಡೆಗಳಲ್ಲಿ ಈ ದಿಶೆಯಲ್ಲಿ ಆ ಕ್ರಮವನ್ನು ತೆಗೆದುಕೊಂಡಿಲ್ಲ. ಇದನ್ನು ಬಹಳ ಮಟ್ಟಿಗೆ ಪ್ರಸ್ತಾಪ ಮಾಡಿದ ಸಮಯದಲ್ಲಿ ನಾನು ಸಂವಿಧಾನದ ರೀತ್ಯ ಈ ಒಂದು ಸ್ವಾತಂತ್ರ್ಯವನ್ನು ಕೊಡುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ.

"There shall be a separate Legislature Secretariat ಎಂದು ಇದೆ. not independent".

ಇದನ್ನು ಅವರ ಗಮನಕ್ಕೆ ತಂದು ಕೊಟ್ಟಾಗ ನನ್ನ ಮಾತಿಗೆ ಮನ್ನಣೆ ಕೊಡಲಿಲ್ಲ. ಕೊನೆಯದಾಗಿ ಸ್ವಾತಂತ್ರ್ಯವನ್ನು ಹಲವಾರು ಭಾಗಗಳಲ್ಲಿ ಕೊಟ್ಟಿದ್ದೇವೆ. ಇದಕ್ಕೆ ಸ್ವಾತಂತ್ರ್ಯ ಬಂದು, ಅದಕ್ಕೆ ಮುಖ್ಯಸ್ಥರಿದ್ದಾರೆ, ಈ ಮನೆಯ ಅಧ್ಯಕ್ಷರು ಮತ್ತು ಆ ಮನೆಯ ಅಂದರೆ ಮೇಲ್ಮನೆಯ ಅಧ್ಯಕ್ಷರು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸದಸ್ಯರಾಗಿದ್ದಾರೆ. ಇವರ ಆಂತರಿಕ ಕಾರ್ಯವನ್ನು, ವ್ಯವಹಾರವನ್ನು ನಡೆಸಿಕೊಂಡು ಹೋಗತಕ್ಕಂತಹ ಜವಾಬ್ದಾರಿ ಅವರದ್ದೇ. ಇಂತಹ ಪರಿಸ್ಥಿತಿಯಲ್ಲಿ ನಾನು ಈ ಪ್ರಶ್ನೆಯನ್ನು ಎತ್ತಿದ್ದೆ ಸರಕಾರದ ಹಣದ ಮಂಜೂರಾತಿಯನ್ನು ಕೇಳಿದಾಗ ಯಾವುದೇ ಆಗಲೀ ಸರಕಾರದ ಭಾಗದ್ದೇ ಆಗಲೀ ಆ ಮಂಜೂರಾತಿಯಾದ ಹಣವೇನಿದೆ ಅದು ಸರಿಯಾಗಿ ಖರ್ಚಾಗುತ್ತಿದೆಯೋ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿದುಕೊಳ್ಳಲು ಅಧಿಕಾರವಿಲ್ಲವೆಂದು ಹೇಳುವುದು ತಪ್ಪಾಗುತ್ತದೆ. ಅಧಿಕಾರ ಚಲಾಯಿಸಿದಾಗ ಅದರ ಬಗ್ಗೆ ಉತ್ತರ ಕೊಡತಕ್ಕಂತಹವರು ಯಾರು ಎಂದು ನಾನು ಇದಕ್ಕೆ ಸ್ವಾತಂತ್ರ್ಯವನ್ನೂ ಕೊಡುವ ಸಮಯ ಬಂದಾಗ ಇದನ್ನು ಪ್ರಸ್ತಾಪ ಮಾಡಿದಾಗ ನನಗೆ ಅವರು ಸರಿಯಾದಂತಹ ಉತ್ತರವನ್ನು ಕೊಡಲಿಲ್ಲ ಆದರೂ ಮಾಡಬೇಕೆಂದು ಮಾಡಿದ್ದೇವೆ. ಈ ಪರಿಸ್ಥಿತಿಯಲ್ಲಿ ಇದೆ, ತಾವು ದಯವಿಟ್ಟು ಸೀಮಾರೇಖೆಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಅಭಿಪ್ರಾಯವನ್ನು ಹೇಳಿದರೆ ಒಳ್ಳೆಯದು. ನಾವಂತೂ ವಿರೋಧ ಪಕ್ಷದಲ್ಲಿದ್ದಾಗ ಇದನ್ನು ಪ್ರಸ್ತಾಪ ಮಾಡಿ ನಿಲ್ಲಿಸಿಬಿಟ್ಟೆವು ಎಂಬ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟ ವಿಷಯವನ್ನು ಮಾತನಾಡುವುದಿದ್ದರೆ ತಾವು ಅಧ್ಯಕ್ಷರ ಜೊತೆಯಲ್ಲಿ ಮಾತನಾಡಬಹುದೆಂದು ನನಗೆ ಅನಿಸುತ್ತದೆ.

SRI U. BHUPATHY.—There is a provision in the Coonstitution to have a separate Legislature Secretariat but not independent Legislature Secretariat. ಎಂದು ಹೇಳಿದ್ದಾರೆ. ಹಾಗಿರುವಾಗ As a Member of this House I have got every right to discuss about that demand. He himself has accepted. ಈಗ ಇದಕ್ಕೆ ಯಾರು ಉತ್ತರ ಕೊಡಬೇಕು ಎನ್ನುವ ಪ್ರಶ್ನೆ ಬಂದಿದೆ. ಈ ಬೇಡಿಕೆಯ ಬಗ್ಗೆ ಲೆಜಿಸ್ಲೇಚರ್ ಪರವಾಗಿ ಸಂಬಂಧಪಟ್ಟ ಸಂಸದೀಯ ವ್ಯವಹಾರಗಳ ಖಾತೆಯ ಮಂತ್ರಿಗಳು ಉತ್ತರ ಕೊಡುತ್ತಾರೆಯೋ ? ಅಧ್ಯಕ್ಷರಂತೂ ಕೊಡುವುದಕ್ಕೆ ಬರುವುದಿಲ್ಲ. ಇದು ಕ್ಲಾರಿಫೈ ಆಗಬೇಕು. ಈ ರೀತಿಯ ಸಮಸ್ಯೆ ಬೇರೆ ವಿಧಾನ ಮಂಡಲನಲ್ಲೂ ಕೂಡ ಇರಬಹುದು ಇದನ್ನು ಕ್ಲಾರಿಫೈ ಮಾಡಿದರೆ ಬೇರೆಯವರಿಗೂ ಇದು ಮಾದರಿಯಾಗುತ್ತದೆ. ಆದುದರಿಂದ ನಾವು ಇದನ್ನು ಎತ್ತುತ್ತಿದ್ದೇವೆ, ಯಾವುದೇ ಬೇಡಿಕೆಯ ಬಗ್ಗೆ ನಾವು ಇಷ್ಟು ಹಣವನ್ನು ಅದಕ್ಕೆ ಕೊಡಬೇಕೆಂದು ನಿಗದಿ ಮಾಡಿ ಅದಕ್ಕೆ ಹಣಕಾಸನ್ನು ಕೊಟ್ಟಾಗ ನಾವು ನಿಗದಿ ಮಾಡಿ ಕೊಟ್ಟಂತಹ ಹಣ ಸರಿಯಾದ ರೀತಿಯಲ್ಲಿ ಖರ್ಚಾಗಿದೆಯೋ ಅಲ್ಲಿನ ವ್ಯವಹಾರ ಖರ್ಚು–ಜಮಾ ಹೇಗೆ ನಡೆಯುತ್ತಿದೆ ಎಂಬುದನ್ನು ಚರ್ಚೆ ಮಾಡಿ ಈ ಮನೆಯ ಒಪ್ಪಿಗೆ ಪಡೆಯುವುದು ಅವಶ್ಯಕತೆ ಇದೆ.

because we are giving money to legislature also. ನಾವು ಹಣ ಕೊಡದಿದ್ದರೆ ಅದು ಬೇರೆ ಪ್ರಶ್ನೆ. ಆಗ ಇಲ್ಲಿ ಮಾತನಾಡುವ ಪ್ರಶ್ನೆಯೇ ಬರುವುದಿಲ್ಲ.. ಮಾನ್ಯ ಉಪಾಧ್ಯಕ್ಷರೇ, ತಾವು ಇದರ ಬಗ್ಗೆ ಮಾತನಾಡಲೇಬೇಡಿ ಎಂದು ಹೇಳಿದರೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷರು —ಈಗ ತಾನೇ ಕಾಯಿದೆ ಸಚಿವರು ಹೇಳಿದ ಹಾಗೆ ಇದಕ್ಕೆ ಉತ್ತರ ಕೊಡುವಂಥ ಪರಿಸ್ಥಿತಿಯಲ್ಲಿ ಅವರು ಇಲ್ಲ. ತಾವು ಇಲ್ಲಿ ಹೇಳಿದ ಮೇಲೆ ಅದಕ್ಕೆ ಉತ್ತರ ಬರಲಿಲ್ಲ ಎಂದು ಹೇಳಿದರೆ ಅದು ಸಮಂಜಸವಾಗುವುದಿಲ್ಲ. ಸಧ್ಯದಲ್ಲಿ ಅವರ ಹತ್ತಿರ ಚರ್ಚೆ ಮಾಡಿ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು. ಬದಲಾವಣೆ ಏನಾದರೂ ಆದರೆ ಅವರು ಸೂಚನೆ ಮಾಡುತ್ತಾರೆ, ಯಾವ ರೀತಿ ಮಾಡಬಹುದು ಎಂದು ಹೇಳುತ್ತಾರೆ.

ಶ್ರೀ ಯು. ಭೂಪತಿ.—ಮಾನ್ಯ ಸಚಿವರು ಹೇಳಿರುವ ಹಾಗೆ ನಾನು ಈ ಇತಿಮಿತಿಯೊಳಗೆ ಮಾತನಾಡುತ್ತೇನೆ. I will not go beyond my limitations ಇಲ್ಲಿ ಕರ್ನಾಟಕ ವಿಧಾನ ಮಂಡಲದಲ್ಲಿ ಈ ಮನೆಯಲ್ಲಿರತಕ್ಕಂಥ ಸದಸ್ಯರು ಮತ್ತು ಇದಕ್ಕೆ ಸಂಬಂಧಪಟ್ಟಂಥ ಸೆಕ್ರೆಟೇರಿಯೆಟ್‌ನಲ್ಲಿ ಕೆಲಸ ಮಾಡತಕ್ಕಂಥ ನೌಕರರು ಮತ್ತು ಬೇರೆ ಶಾಸಕರ ಭವನದಲ್ಲಿ...

ಶ್ರೀ ಕೆ. ಹೆಚ್. ಪಾಟೀಲ್.—ಉಪಾಧ್ಯಕ್ಷರೇ, ಕೋರಂ ಇಲ್ಲದೇ ಸದನದ ಕಾರ್ಯ ನಡೆಯುತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ನಾವೇ ಹೆಚ್ಚು ಇದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಡಿಸ್ಕಷನ್ ನಡೆಯುತ್ತಿರುವಾಗ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ.

SRI K. H. PATIL.—Any proceedings that took place without quorum is null and void.

ಶ್ರೀ ಎ. ಲಕ್ಷ್ಮೀಸಾಗರ್.— ಕಾನೂನು ತಮಗೂ ಗೊತ್ತಿದೆ. ನನಗೂ ಗೊತ್ತಿದೆ, ಸಂಪ್ರದಾಯ ಕೇಳುತ್ತಿದ್ದೇನೆ. ಇದನ್ನು ಜಾಸ್ತಿ ಪ್ರೆಸ್ ಮಾಡಬಾರದು. ಇಷ್ಟೇ ನಾನು ಹೇಳುವುದು.

ಶ್ರೀ ಕೆ. ಹೆಚ್. ಪಾಟೀಲ್.—ಇಷ್ಟೆಲ್ಲಾ ಜನ ನೀವು ಇದ್ದುಕೊಂಡು ಏತಕ್ಕೆ ಆ ರೀತಿ ಮಾಡುತ್ತೀರಿ. ಅವರನ್ನು ಕರೆಯುವುದಕ್ಕೆ ಹೇಳಿ. ಪಾರ್ಲಿಮೆಂಟರಿ ಮಿನಿಸ್ಟರ್ ನೀವು ಯಾವಾಗಲೂ ನ್ಯಾಯವನ್ನು ಕೈಯಲ್ಲಿ ಹಿಡಿದಿಟ್ಟುಕೊಂಡು ಮಾತನಾಡಬೇಕು. ಇನ್ನು ಐದಾರು ಜನ ಮಿನಿಸ್ಟರನ್ನು ಸಭೆಗೆ ಕರೆಯಿಸಿದರೆ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.- ಕಾನೂನನ್ನು ಕೈಗೆ ಎತ್ತಿಕೊಳ್ಳುವುದಲ್ಲ. ಕಾನೂನನ್ನು ಶೀಘ್ರವಾಗಿ ವಾಗಿ ಜಾರಿಗೊಳಿಸುವ ಮನೋಭಿಲಾಷೆಯನ್ನು ಹೊಂದಿದ್ದೇನೆ, ಈ ವಿಚಾರವನ್ನು ಸಾಂಪ್ರದಾಯಿಕ ಪ್ರಸ್ತಾಪ ಮಾಡಿದೆ ಅಷ್ಟೆ.

ಒಬ್ಬ ಮಾನ್ಯ ಸದಸ್ಯರು.—ಕಾನೂನು ಮಂತ್ರಿಗಳು ಪ್ರತಿಯೊಂದಕ್ಕೂ ಕಾನೂನನ್ನು ಹೇಳುವುದು ಬೇಡ. ಮಾನ್ಯ ಮಂತ್ರಿಗಳನ್ನು ದಯವಿಟ್ಟು ಕರೆಯಿಸಿ.

ಉಪಾಧ್ಯಕ್ಷರು.—ಇದರ ಬಗ್ಗೆ ಹೆಚ್ಚು ಬೆಳೆಸುವುದು ಬೇಡ. ದಯವಿಟ್ಟು ಎಲ್ಲರೂ ಕುಳಿತು ಕೊಳ್ಳಿ ಅವರನ್ನು ಕರೆಯುವುದಕ್ಕೆ ಮುಖ್ಯ ಸಚೇತಕರಿಗೆ ಹೇಳಿದ್ದೇನೆ, ದಯವಿಟ್ಟು ಎಲ್ಲರೂ ಕುಳಿತು ಕೊಳ್ಳಿ.

ಶ್ರೀ ಯಂ. ಭೂಪತಿ.—ಉಪಾಧ್ಯಕ್ಷರೇ, ಸಚಿವರು ಹೇಳಿದಂತೆ ಅದರ ಇತಿ ಮಿತಿಯೊಳಗೆ ಮಾತನಾಡುತ್ತೇನೆ. ಕರ್ನಾಟಕ ರಾಜ್ಯದ ವಿಧಾನಮಂಡಲದ ವಿಚಾರವನ್ನು ಪ್ರಾರಂಭದಲ್ಲಿ ತೆಗೆದುಕೊಳ್ಳುವುದಕ್ಕೆ ಇದು ಒಂದು ಕಾರಣ. ಈ ಮನೆಯ ನಡವಳಿಕೆಗಳನ್ನು ನಾನು ಮೂರು ವರ್ಷಗಳಿಂದ ಗಮನಿಸುತ್ತಿದ್ದೇನೆ. ಈ ಒಂದು ಪಾರ್ಲಿಮೆಂಟರಿ ಸಿಸ್ಟಂನಲ್ಲಿ ನಮ್ಮ ದೇಶದಲ್ಲಿ ವಿಧಾನಸಭೆಗಳು ಪಾರ್ಲಿಮೆಂಟ್ ನಲ್ಲಾಗಲೀ ಅದು ಯಾವ ರೀತಿ ನಡೆಯುತ್ತಿದೆ, ಜನಗಳಿಗೆ ಇದರ ಬಗ್ಗೆ ಏನು ಅಭಿಪ್ರಾಯ ಇದೆ, ಈ ಪಾರ್ಲಿಮೆಂಟರಿ ಸಿಸ್ಟಂ ಇನ್ನು ಮುಂದೆ ಅಭಿವೃದ್ಧಿ ಆಗುತ್ತದೆಯೋ ಆಗುವುದಿಲ್ಲವೋ ಅದನ್ನು ಜನಗಳಿಗೆ ಬಿಡೋಣ. ಅದು ಬೇರೆ ವಿಚಾರ. ವಿಧಾನಸಭೆಯಲ್ಲಿ ಯಾವ ರೀತಿ ನಾನು ಮಾತನಾಡುವಾಗ ಕರ್ನಾಟಕ ವಿಧಾನಮಂಡಲದಲ್ಲಿ ಕೋರಂ ಯಾವ ರೀತಿ ಇಲ್ಲವೋ ಅದೇ ರೀತಿ ದೇಶದ ಬರಗಾಲದ ಬಗ್ಗೆ ಚರ್ಚೆಯಾಗುವಾಗ ಪಾರ್ಲಿಮೆಂಟ್‌ನಲ್ಲೂ ಮಿನಿಮಮ್ ಕೋರಂ ಇರಲಿಲ್ಲ ಎನ್ನುವುದನ್ನು ನಾವೆಲ್ಲಾ ಪತ್ರಿಕೆಗಳಲ್ಲಿ ಓದಿದ್ದೇವೆ. ಇದು ದೇಶದ ದುರಂತ ೧೯೮೬ನೇ ಇಸವಿಯಲ್ಲಿ Conference of Presiding Officers (Legislative Bodies) in India ಇದು ಲಕ್ನೋನಲ್ಲಿ ಆಕ್ಟೋಬರ್ ೨೮ನೇ ತಾರೀಖು ನಡೆದಿವೆ. ಈ ಸಮ್ಮೇಳನಕ್ಕೆ ನಮ್ಮ ಅಧ್ಯಕ್ಷರು ಕೂಡಾ ಹೋಗಿ ಭಾಗವಹಿಸಿದ್ದಾರೆ. ನಾನು ಆಗಲೇ ಹೇಳಿದ್ದೆ, ಮೇಲ್ಮನೆಯ ಉಪಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಯ್ಯನವರು ಸಹ ಇದರಲ್ಲಿ ಭಾಗವಹಿಸಿದ್ದರು. ಎಂದು ಇದರಲ್ಲಿ ಮುಖ್ಯವಾಗಿ ಚರ್ಚೆ ಆದ ವಿಚಾರ ಏನು ? ಚರ್ಚೆ ಆದ ವಿಚಾರ ಎಂದರೆ 'Legislaturs. their duties, conduct and responsibility'. ಈ ವಿಚಾರಗಳು ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ಚರ್ಚೆ ಆಗಿದೆ.

ಉಪಾಧ್ಯಕ್ಷರು.—ಅದನ್ನು ಇಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಇವರು ಅಭಿಪ್ರಾಯಪಟ್ಟಿದ್ದಾರೆ. ಸಂಪ್ರದಾಯ ೧೯೭೮ ರಿಂದ ಇಲ್ಲಿಯವರೆಗೆ ಯಾರಿಗೂ ಇವನ್ನು ಪ್ರಸ್ತಾಪ ಮಾಡುವುದಕೆ ಅವಕಾಶ ಕೊಟ್ಟಿಲ್ಲ.

ಶ್ರೀ ಯಂ. ಭೂಪತಿ.—ಮಾನ್ಯ ಸಚಿವರು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿಲ್ಲ There is a provision in the Constitution to have a separate Legislature Secretariat but not independent Legislature Secretariat. That means as a Member of this House I have got every right to speak on this demand.

ಉಪಾಧ್ಯಕ್ಷರು.—ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ, ಇದರ ಬಗ್ಗೆ ಈ ರೀತಿ ಮಾತನಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಯು. ಭೂಪತಿ.—ಸಭಾಧ್ಯಕ್ಷರ ಸಮ್ಮೇಳನದಲ್ಲಿ ಏನು ಚರ್ಚೆ ಆಗಿತ್ತೊ ಅದನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ ಹೊಸ ವಿಚಾರ ಯಾವುದನ್ನೂ ಹೇಳುತ್ತಿಲ್ಲ. ರೆಕಾರ್ಡ್‌ನಲ್ಲಿ ಇದೆ. ಈ ಮನೆಗೆ ಚ್ಯುತಿ ಆಗುವುದಾದರೆ ಅದನ್ನು ಮೀರುವುದಕ್ಕೆ ನಾನು ಹೋಗುವುದಿಲ್ಲ. ನಾನು ಏಕೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನನಗೆ ಮೂರು ವರ್ಷಗಳಲ್ಲಿ ಈ ಮನೆಯಲ್ಲಿ ಆದಂತಹ ಅನುಭವವೇ ನನಗೆ ಅನಿಸಿರತಕ್ಕ ಅಭಿಪ್ರಾಯಗಳನ್ನು ನಾನು ಮಾತನಾಡುವುದಕ್ಕೆ ಕಾರಣ. ಈ ಬೇಡಿಕೆ ಬಗ್ಗೆ ಮಾತನಾಡುವಾಗ ಆಗಿನ ಸಮ್ಮೇಳನದಲ್ಲಿ ಮೇಲ್ಮನೆಯ ಉಪಾಧ್ಯಕ್ಷರು ಶ್ರೀ ಮಲ್ಲಿಕಾರ್ಜುನಯ್ಯನವರು ಭಾಗವಹಿಸಿದ್ದರು.

(ಗೊಂದಲ)

ಉಪಾಧ್ಯಕ್ಷರು.—ಸಂಪ್ರದಾಯ ಇಲ್ಲ.

ಶ್ರೀ ಯು. ಭೂಪತಿ.—ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದು ರೂಲಿಂಗ್ ಇದ್ದರೆ ತೋರಿಸಿ, ರೂಲಿಂಗ್‌ನಲ್ಲಿ ಅವಕಾಶ ಇಲ್ಲದಿದ್ದರೆ ನಾನು ಮಾತನಾಡುವುದಿಲ್ಲ.

ಶ್ರೀ ಪಟವಾರಿ ರತ್ನಾಕರ್.—ಅವರು ರೆಫರೆನ್ಸ್ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕಿಯವರು ಏನಾದರೂ ಇದರ ಬಗ್ಗೆ ಬೆಳಕು ಚೆಲ್ಲಿ ಹೇಳಬಹುದು.

(ಗೊಂದಲ)

ಶ್ರೀ ಪಟವಾರಿ ರತ್ನಾಕರ್.—ಬೇಡಿಕೆಯ ಮೇಲೆ ಚರ್ಚೆ ಗೋಸ್ಕರವಾಗಿ ವಿಷಯವನ್ನು ಮಂಡಿಸಲಾಗಿದೆ, ಈ ಸಭೆಯ ಮುಂದೆ ಮಂಡಿಸಲಾಗಿರುವುದನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ಯಾವುದನ್ನು ಅದನ್ನು ಬಿಟ್ಟು ಬೇರೆ ಯಾವುದಕ್ಕೋ ಹೋಗುತ್ತಿದ್ದಾರೆ. ಅದನ್ನು ಮಾತನಾಡುದುದಕ್ಕೆ ಸಂಪ್ರದಾಯ ಇಲ್ಲ.

SRI U. BHUPATHY.—It is a report of Presiding Officers Conference and supplied by the Government.. ಅಲ್ಲಿ ಪ್ರಸ್ತಾಪ ಆದದ್ದನ್ನು ಮಾತ್ರ ಇಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಬಿಟ್ಟು ಬೇರೆ ಹೇಳುತ್ತಿಲ್ಲ. ಅದರಲ್ಲಿ ಬೇರೆ ಬೇರೆ ರಾಜ್ಯಗಳ ವಿಧಾನ ಮಂಡಲದ ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರುಗಳು ಭಾಗ ವಹಿಸಿದ್ದರು ಒಬ್ಬರೇ ಭಾಗವಹಿಸಿರಲಿಲ್ಲ.

MR. DEPUTY SPEAKER.—It is supplied by the Government for the reference. ಅದನ್ನು ಸರ್ಕಾರ ಕೊಟ್ಟಿಲ್ಲ. ಅದು ತಮ್ಮ ರೆಫರೆನ್ಸ್‌ಗೆ ಕೊಟ್ಟಿರುವುದು.

ಶ್ರೀ ಯು. ಭೂಪತಿ.—ಕೆಲವು ದಾಖಲೆಗಳನ್ನು ಅಫಿಷಿಯಲ್ ಯೂಸ್‌ಗಾಗಿ ಕಳುಹಿಸಿ ಕೊಡುತ್ತೀರಿ. ನಾನು ಇದನ್ನು ಸಪರೇಟ್ ಆಗಿ ರೀಸರ್ಚ್ ಸೆಕ್ಷನ್‌ನಿಂದ ತಂದಿದ್ದೇನೆ.

ಉಪಾಧ್ಯಕ್ಷರು.—ಅದನ್ನು ಲೈಬ್ರರಿಯಲ್ಲಿ ಇಡುವುದಕ್ಕೆ ಕಳುಹಿಸಿಕೊಡುತ್ತೇವೆ.

ಶ್ರೀ ಯು. ಭೂಪತಿ.—ತಾವು ಕೆಲವು ದಾಖಲೆಗಳನ್ನು ಅಫಿಷಿಯಲ್ಸ್ ಯೂಸ್‌ಗೆಂದು ಕಳುಹಿಸಿ ಕೊಡುತ್ತೀರಿ ಅದನ್ನು ಪಬ್ಲಿಕೇಶನ್‌ಗೊ ಮತ್ತೊಂದಕ್ಕೋ ಹೋಗುವುದಿಲ್ಲ, ಇಂತಹ ವರದಿಯನ್ನು ನಾನು ರಿಸರ್ಚ್ ಡಿಪಾರ್ಟ್‌ಮೆಂಟ್‌ನಿಂದ ತಂದಿದ್ದೇನೆ.

ಉಪಾಧ್ಯಕ್ಷರು.—ತಂದಿದ್ದೀರಿ, ವಿಷಯಾಂತರವಾದುದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಾದುದು ಅಲ್ಲ.

ಶ್ರೀ ಯು. ಭೂಪತಿ.—ತಾವು ಏನು ಹೇಳುತ್ತೀರೋ ನನಗೆ ಅರ್ಥವಾಗುವುದಿಲ್ಲ. ಅದು ರೆಕಾರ್ಡ್‌ನಲಿವೆ. ಅದನ್ನು ಪ್ರಸ್ತಾಪ ಮಾಡಬಾರದೆಂದು ಯಾವ ರೂಲಿಂಗ್‌ನಲ್ಲಿದೆ ಹೇಳಿ ?

ಉಪಾಧ್ಯಕ್ಷರು,—ಈ ರೀತಿ ಹೇಳುವಾಗ, ೭೮ರ ಹಿಂದೆ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಪಟ್ಟಾಗ ಸಂಪ್ರದಾಯಂ ಇಲ್ಲವೆಂದು ಹೇಳಿ ಅದನ್ನು ಬಿಡಿಸಿದ್ದಾರೆ ಎಂದು ಸಚಿವರು ಹೇಳಿದರು.

ಶ್ರೀ ಯು. ಭೂಪತಿ.—ಇಲ್ಲ ಹಾಗೆ ಮಾನ್ಯ ಸಚಿವರು ಹೇಳಿಲ್ಲ.

ಉಪಾಧ್ಯಕ್ಷರು.—ಹೇಳಿದ್ದಾರೆ.

ಶ್ರೀ ಯು. ಭೂಪತಿ.—ಅವರು ಬಹಳ ಜವಾಬ್ದಾರಿಯಿಂದ, ಬಹಳ ಸ್ಪಷ್ಟವಾಗಿಯೇ ಹೇಳಿದ್ದಾರೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ, ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ಪ್ರಯತ್ನ ಪಟ್ಟೆ, ಆಗಿನ ಅಧ್ಯಕ್ಷರು ಈ ತರಹ ಇಲ್ಲವೆಂದು ಹೇಳಿದರು ಎಂಬ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲವೆಂದು ಹೇಳಿಲ್ಲ. ಆ ಮಾತನ್ನು ಅವರು ಹೇಳಿಲ್ಲ, ಬೇಕಾದರೆ ಇನ್ನೊಮ್ಮೆ ಕೇಳಿ, ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವಿಧಾನ ಮಂಡಲದ ಕಾರ್ಯಕ್ರಮಗಳ ಬಗ್ಗೆ ಈ ಸಭೆಯಲ್ಲಿ ವಿಚಾರ ವಿನಿಮಯ ಮಾಡುವುದಕ್ಕೆ ಸಂಪ್ರದಾಯ ಇಲ್ಲವೆಂದು ಹೇಳಿದ್ದೇನೆ ಅಷ್ಟೇ.

ಉಪಾಧ್ಯಕ್ಷರು.—ಬೇರೆ ಯಾವುದಾದರೂ ರೀತಿಯ ಮೇಲೆ ಮಾತನಾಡ ಬಹುದೇ ಎಂದು ಕೇಳುತ್ತಿದ್ದಾರೆ, ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ತಡೆಯುವುದಕ್ಕೆ ಬರುವುದಿಲ್ಲ, ನನ್ನ ಕೈಯಲ್ಲಿ ಅಧಿಕಾರ ಇಲ್ಲ.

ಉಪಾಧ್ಯಕ್ಷರು.—ವಿಧಾನ ಮಂಡಲದಲ್ಲಿ ಈ ಒಂದು ಬೇಡಿಕೆಯ ಚರ್ಚೆಗಾಗಿ ಅವಕಾಶ ಕೊಟ್ಟಿದ್ದೀರೋ, ಹಾಗಾದರೆ ಚರ್ಚೆ ಮಾಡುವ ಹಕ್ಕು ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಕೊಡುವವರು ಯಾರು? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಈ ಮನೆಯ ಅಧ್ಯಕ್ಷರು ಮತ್ತು ಮೇಲ್ಮನೆಯ ಅಧ್ಯಕ್ಷರೂ ಕೂಡಿ ಒಂದು ಸಮಿತಿಯನ್ನು ಮಾಡಿದ್ದಾರೆ. ಆಂತರಿಕ ವ್ಯವಹಾರಗಳನ್ನು ನಡೆಸಿಕೊಂಡು ಹೋಗತಕ್ಕಂಥಹ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ. ಇಲ್ಲಿ ಏರುಪೇರುಗಳು, ಟೀಕೆ ಟಿಪ್ಪಣಿಗಳು ಬಂದರೆ ನನಗೆ ನೇರವಾಗಿ ಉತ್ತರ ಕೊಡುವ ಶಕ್ತಿ ಇರುವುದಿಲ್ಲ. ಆ ಜವಾಬ್ದಾರಿ ನನನಇರುವುದಿಲ್ಲ. ಈ ಇತಿ ಮಿತಿ ಯನ್ನು ಗಮನದಲ್ಲಿ ಇಟ್ಟುಕೊಂಡು ಮಾನ್ಯ ಸದಸ್ಯರಲ್ಲಿ ಮನವಿಯನ್ನು ಮಾಡಿಕೊಂಡಿದ್ದೇನೆ. ಅವರಿಗೆ ಮಾತನಾಡುವ ಅಧಿಕಾರ ಇಲ್ಲ, ಕಾನೂನು ರೀತ್ಯಾ ಅಧಿಕಾರ ಇಲ್ಲ ಎಂದು ಹೇಳತಕ್ಕಂಥ ಮಾತನ್ನು ನಾನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅವರಿಗೆ ಈ ಬಗ್ಗೆ ಮಾತನಾಡಲು ಕಾನ್ಸ್‌ಟಿಟ್ಯೂಷನಲ್ ರೈಟ್ಸ್ ಇಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ, ಆದರೆ ನಮ್ಮ ಅಲ್ಲಿನ ಸಂಪ್ರದಾಯಗಳಿಗೆ ಎಷ್ಟು ಬೆಲೆ ಇದೆಯೋ ಅಷ್ಟೇ ಬೆಲೆ ಕಾನೂನಿಗೂ ಇದೆ ಎಂದು ನಾನು ಅವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈಗ ಅವರು ಮಾತನಾಡುತ್ತಿರುವುದರಲ್ಲಿ ಎಕ್ಸ್‌ಪಂಜ್ ಮಾಡುವಂತಹ ವಿಷಯಗಳನ್ನು ಏನನ್ನೂ ಹೇಳುತ್ತಿಲ್ಲ. ಆದ್ದರಿಂದ ಅವರು ಮಾತ ನಾಡುವ ಬಗ್ಗೆ ನಾವು ಟೀಕೆ ಮಾಡುವುದಕ್ಕೆ ಬರುವುದಿಲ್ಲ ಈ ಸದನ ಇಂಡಿಪೆಂಡೆಂಟ್ ಆಗಿರಬೇಕಾದರೆ ಇದು ಪ್ರತ್ಯೇಕವಾಗಿರಬೇಕಾದರೆ ಏನೇನು ಕ್ರಮಗಳನ್ನು ಕೈಕೊಳ್ಳಬೇಕೆಂಬ ಬಗ್ಗೆ ಆ ಒಂದು ಕಾನ್‌ಫರೆನ್ಸ್‌ನಲ್ಲಿ ನಡೆದಂಥದ್ದನ್ನು ಆದರಿಸಿ ಇಲ್ಲಿ ಮಾತನಾಡುವುದಕ್ಕೆ ಅಡ್ಡಿ ಏನೂ ಇಲ್ಲ. His advice will be taken by the Speaker as well as Minister,

ಉಪಾಧ್ಯಕ್ಷರು.—ಈ ಬಗ್ಗೆ ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಮಾಡಿರುವಂತಹ ಅಬ್‌ಸರ್‌ವೇಷನ್ ಈ ರೀತಿ ಇದೆ :—

> "It is now established that the questions on matters which come uuder the adminiistretive control of the Speaker are disallowed and the information. when directed by the Speaker, may be supplied to the Members orally."

ಆದ್ದರಿಂದ ಮಾನ್ಯ ಕಾನೂನು ಸಚಿವರು ಹೇಳಿದಂತೆ...

SRI K. H. PATIL.—He does not make a reference about the Speaker. He wants only the Legislature Secretariat should be independent so that the Speaker's hands will be strengthened.

ಶ್ರೀ ಯು. ಭೂಪತಿ.—ಈ ಬಗ್ಗೆ ನನ್ನ ಸಬ್‌ಮಿಷನ್ ಏನೆಂದರೆ, ಮಾನ್ಯ ಸಭಾಧ್ಯಕ್ಷರ ಅಧೀನದಲ್ಲಿ ಈ ಒಂದು ಇಲಾಖೆ ಏನಿದೆ, ಈ ಇಲಾಖೆಯ ಆಡಳಿತದ ಬಗ್ಗೆ ಹಾಗೂ ಇದರ ಮೆರಿಟ್ಸ್ ಮತ್ತು ಡೀ-ಮೆರಿಟ್ಸ್ ಬಗ್ಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇಲ್ಲಿ ನನ್ನ ದೃಷ್ಟಿಕೋನವೇ ಬೇರೆ ಇದೆ. ಈ ಲೆಜಿಸ್ಲೇಚರ್ ಬಾಡೀಸ್ ಏನು ಅಧಿಕಾರ ನಡೆಸುತ್ತಿವೆ, ಏನು ಫಂಕ್ಷನ್ ಮಾಡುತ್ತಿವೆ, ಈ ಬಗ್ಗೆ there are conferences. There are precedents. ಇದರ ಬಗ್ಗೆ ಇಲ್ಲಿ ನಾವೇನಾದರೂ ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಿದ್ದೇವೆಯೋ ಮತ್ತು ಈ ಕಾನ್‌ಫರೆನ್ಸ್‌ನಲ್ಲಿ ಬೇರೆ ಬೇರೆ ರಾಜ್ಯಗಳ ವಿಧಾನಸಭಾಧ್ಯಕ್ಷರುಗಳು ಏನೇನು ಸಲಹೆಗಳನ್ನು ಮಾಡಿದ್ದಾರೆ, ಅದನ್ನೆಲ್ಲಾ ಇಲ್ಲಿ ನಾವು ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂಬುದನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ರಾಜ್ಯ ವಿಧಾನಮಂಡಲದ ಖರ್ಚಿನ ಬಗ್ಗೆ ಮತ್ತು ಇದರ ವ್ಯವಹಾರದ ಬಗ್ಗೆ ಇಲ್ಲಿ ನಾನು ಏನನ್ನೂ ಹೇಳುವುದಕ್ಕೆ ಹೋಗುತ್ತಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಈ ರಾಜ್ಯ ವಿಧಾನಮಂಡಲದ ಆಡಳಿತದ ಬಗ್ಗೆ ಮತ್ತು ಇದರ ಖರ್ಚಿನ ಬಗ್ಗೆ ಸಹ ನಾವು ಇಲ್ಲಿ ಮಾತನಾಡಬಹುದು. ಏನಾದರೂ ಸ್ಪೆಸಿಫಿಕ್ ಆದಂಥ ಕಾಮೆಂಟ್ಸ್ ಇದ್ದರೆ ಹೇಳಬಹುದು. ಇದಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಇಲ್ಲಿ ಮಂಡಿಸಿರುವಾಗ ಇದರ ಬಗ್ಗೆ ನಾವು ಏತಕ್ಕೆ ಚರ್ಚೆ ಮಾಡಬಾರದು? ತಾವು ಚರ್ಚೆ ಮಾಡಬಾರದೆಂದು ಹೇಳಿದರೆ ಹೇಗೆ?

ಉಪಾಧ್ಯಕ್ಷರು.—ರಾಜ್ಯ ವಿಧಾನಮಂಡಲವನ್ನು ಈಗ ಪ್ರತ್ಯೇಕ ಮಾಡಿರುವುದರಿಂದ ಇದನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ ಮತ್ತು ಪ್ರಸ್ತಾಪ ಮಾಡಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಬರುವುದಿಲ್ಲವೆಂದು ಮಾನ್ಯ ಕಾನೂನು ಸಚಿವರು ಹೇಳುತ್ತಿದ್ದಾರೆ,

ಶ್ರೀ ಯು. ಭೂಪತಿ.—ಈ ಕಾನ್‌ಫರೆನ್ಸ್‌ನಲ್ಲಿ ಪಶ್ಚಿಮ ಬಂಗಾಳದ ವಿಧಾನ ಸಭಾಧ್ಯಕ್ಷರು ಮಾತನಾಡಿದ್ದಾರೆ. ಅವರು ಅಲ್ಲಿ ಏನು ಪ್ರಪೋಸ್ ಮಾಡಿದ್ದಾರೆ, ಅದನ್ನು ಎಲ್ಲಾ ವಿಧಾನಸಭೆಗಳಿಗೂ ಅನ್ವಯ ಮಾಡುವುದಕ್ಕೆ ಸಾಧ್ಯತೆ ಇದೆ ಎಂದು ನನಗನಿಸುತ್ತದೆ. ಏಕೆಂದರೆ, ಅವರು ಲೆಜಿಸ್ಲೇಚರ್ಸ್ ಪ್ರಾಬ್ಲಮ್ಸ್ ಬಗ್ಗೆ ಮಾತನಾಡುತ್ತಾ ಕೊನೆಗೆ ಒಂದು ಮಾತನ್ನು ಹೇಳುತ್ತಾರೆ. ಅದು ಈ ರೀತಿ ಇದೆ.—

> "One more aspect about the newspapers is that many a time an MLA makes a scene in the House which has no relevance to the subject or to his constituency or to the State. But, he does it in the hope that he will hit the headlines in the next day's papers, This has to be stopped."

Further he has made a suggestion which reads thus:

> "In my State, I have started a procedure. On the Foundation Day of the Press Club, we hold a Seminar where newspaper journalists and MLAs come together and participate and they place their problems and I have taken a commitment from the newspapers that they will not print any news, which is of an unparliamentary nature. This will result in bringing out a better performance in the House."

ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಈ ರೀತಿಯ ಒಂದು ಸಂಪ್ರದಾಯವನ್ನು ನಾವೂ ಕೂಡ ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡುವುದಕ್ಕೆ ಸಾಧ್ಯತೆ ಇದೆ. ಆದ ಕಾರಣ ನಾನು ಈ ಮನೆಯಲ್ಲಿ ಮಾನ್ಯ ಉಪಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಬರುವ ದಿನಗಳಲ್ಲಿ ನಾವು ಏನು ಹೊಸದಾಗಿ

ಲೆಜಿಸ್ಲೇಟರಾಗಿ ಬರುತ್ತೇವೆ, ನಾವು ಬಂದಾಕ್ಷಣ ಇದರ ಪ್ರೊಸೀಜರ್ಸ್ ಏನು ಹೇಗೆ ಎಂದು ಒಮ್ಮೆಗೇ ಗೊತ್ತಾಗುವುದಿಲ್ಲ. ನಾನು ಮೊದಲನೇ ವರ್ಷ ೧೯೮೫ರಲ್ಲಿ ಬಂದಾಗ ಲಾ ಕಾಲೇಜಿನಲ್ಲಿ ಸ್ಟೂಡೆಂಟ್ ಆಗಿದ್ದವನು ಸ್ಟ್ರೈಟಾಗಿ ವಿಧಾನಸೌಧಕ್ಕೆ ಬಂದೆ. ವಿಧಾನಸೌಧಕ್ಕೆ ಬಂದಾಕ್ಷಣ ಇಲ್ಲಿ ಯಾವ ಶಬ್ದ ಪಾರ್ಲಿಮೆಂಟರಿ, ಯಾವ ಶಬ್ದ ಅನ್‌ಪಾರ್ಲಿಮೆಂಟರಿ ಎನ್ನತಕ್ಕಂಥಾದ್ದು ನಮಗೆ ಗೊತ್ತಾಗುತ್ತಾ ಇರಲಿಲ್ಲ. ಎರಡು ವರ್ಷಗಳ ಕಾಲ ಬೇರೆ ಬೇರೆ ನಾಯಕರುಗಳ ಭಾಷಣಗಳನ್ನು ಕೇಳಿದಮೇಲೆ ಸ್ವಲ್ಪಮಟ್ಟಿಗೆ ಶಬ್ದಗಳ ಬಳಕೆಯಲ್ಲಿ ಇತಿಮಿತಿಯನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಒಂದು ಸಾರಿ ಲೆಜಿಸ್ಲೇಟರ್ಸ್‌ಗೆ ಟ್ರೈನಿಂಗ್ ಕೊಡಬೇಕು, ಕ್ಯಾಂಪ್ ಮಾಡಬೇಕು ಎಂದು ಪ್ರಪೋಸಲ್ ಬಂತು. ಶ್ರೀಮಂತಿ ಲೀಲಾದೇವಿ ಪ್ರಸಾದ್‌ರವರು ಕಳಿಸಿದ ಒಂದು ಟೆಲಿಗ್ರಾಂ ಕೂಡ ಬಂದಿತ್ತು. ಈ ರೀತಿ ಟ್ರೈನಿಂಗ್ ಕ್ಯಾಂಪನ್ನು ಅರೇಂಜ್ ಮಾಡುತ್ತಾ ಇದ್ದೇವೆ ನೀವು ಬರಬೇಕು ಎಂದು. ಮತ್ತೆ ಅದು ಪೋಸ್ಟ್‌ಪೋನ್ ಆಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಈ ಸಭೆಯನ್ನು ಅರೇಂಜ್ ಮಾಡಿದ್ದೇವೆ. ನೀವು ಒಂದು ದಿನ ಮಾತನಾಡಬೇಕು ಎಂದು ನನಗೆ ಆದೇಶ ಬಂದಿತ್ತು. ಎಷ್ಟು ಜನ ಶಾಸಕರು ಬಂದಿದ್ದರು ಅಂದರೆ ೭ ಜನ ಬಂದಿದ್ದರು. ಸಪ್ತ ಋಷಿಗಳು ಬಂದ ಹಾಗೆ ೭ ಜನ ಬಂದಿದ್ದರು. ನಾವು ಏನು ಮಾಡೋಣ?

ಶ್ರೀ ಯು. ಭೂಪತಿ.—ಮೊದಲನೆ ಸಲ ಫಿಕ್ಸ್ ಆದಾಗ ಪೋಸ್ಟ್‌ಪೋನ್ ಆಯಿತು, ಎರಡನೇ ಸಾರಿ ಪೋಸ್ಟ್‌ಪೋನ್ ಆಗಿ, ಮೂರನೇ ಸಾರಿ ನಡೆಯಿತು. ಅದಕಾರಣ ಯಾರೂ ಬಂದಿರಲಿಲ್ಲ ಅಷ್ಟೆ, ಯಾರಿಗೂ ಬರಕೂಡದು ಎಂದು ಇಲ್ಲ. ಇಷ್ಟು ದೊಡ್ಡ ಅಧಿವೇಶನ ನಡೆಯುತ್ತಾ ಇರತಕ್ಕಂಥ ಸಂದರ್ಭದಲ್ಲಿ ಎರಡು ದಿವಸ ಸಮಾವೇಶ ಮಾಡಿಕೊಂಡು ಬೇರೆ ಕಡೆಗಳಿಂದ ಸ್ಪೀಕರ್ಸ್‌ನ್ನು ಕರೆಯಿಸಿ, ಎಕ್ಸ್‌ಪರ್ಟ್ಸ್‌ನ್ನು ಕರೆಯಿಸಿ ಮಾಡುತ್ತೇವೆ ಅಂದರೆ ನಾವಂತೂ ಕುಳಿತುಕೊಂಡು ಕೇಳುತ್ತೇವೆ. ಏಕೆಂದರೆ, ವಿಷಯಗಳು ಗೊತ್ತಾಗಬೇಕು, ಅನುಭವ ತಾವಾಗಿ ಸುಮ್ಮನೆ ಬರುವುದಿಲ್ಲ. ಈ ತರಹದ ಒಂದು ವ್ಯವಸ್ಥೆಯನ್ನು ನೀವು ವಿಧಾನಸಭೆ ಚುನಾವಣೆಯಾದಂಥ ಪ್ರಾರಂಭದಲ್ಲಿ ಮಾಡಬೇಕು ಎಂದು ನನ್ನ ವಿನಂತಿ. ನೀವು ಮಾಡಿದಿರಿ, ೧೯೮೫ರಲ್ಲಿ ನಾವು ಇಲ್ಲಿ ಬಂದರೆ ೧೯೮೭ರಲ್ಲಿ ಕ್ಲಾಸ್ ಮಾಡುತ್ತೇವೆ ಎನ್ನತಕ್ಕಂಥ ಪ್ರಪೋಸಲನ್ನು ನೀವು ತೆಗೆದುಕೊಂಡು ಬಂದಿರಿ. ೧೯೮೫ರಲ್ಲಿ ಮಾಡಿದ್ದರೆ ಬೇರೆ ಎಲ್ಲಾ ಸದಸ್ಯರಿಗೂ ಅನುಕೂಲವಾಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ನೇರವಾಗಿ ಸನ್ಮಾನ್ಯ ಭೂಪತಿಯವರಿಗೆ, ನನ್ನ ಪರವಾಗಿ ಈ ಮನೆಯ ಸದಸ್ಯನಾಗಿ ಹೇಳುತ್ತಿದ್ದೇನೆ, ಮಂತ್ರಿಯಾಗಿ ಅಲ್ಲ. ಈ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುತ್ತೇನೆ. ಇದಕ್ಕೆ ಪೂರಕವಾದಂಥ ತರಬೇತಿ ಕಾರ್ಯಕ್ರಮವನ್ನು ನಾನು ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವು ಕನಿಷ್ಟ ತಮ್ಮ ಕಡೆಯಿಂದ ೨೫ ಜನ ಶಾಸಕರು ಆ ಸಭೆಗೆ ಬರತಕ್ಕಂಥ ಜವಾಬ್ದಾರಿಯನ್ನು ತಾವು ಹೊತ್ತುಕೊಂಡಿದ್ದೇ ಆದರೆ ಮಿಕ್ಕ ಎಲ್ಲಾ ತರಬೇತಿ ಕೆಲಸವನ್ನು ನಾನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ ಎನ್ನತಕ್ಕಂಥ ಮಾತನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಏನು ಮಾಡುತ್ತೀರಿ, ಈಗ ಒಂದು ವರ್ಷ ಆರು ತಿಂಗಳು ಆಗೇಹೋಯಿತಂತೆ. ಆನೆ ಹೋಯಿತು, ಬಾಲಕ್ಕೆ ಏಕೆ ಬಡಿದಾಡುತ್ತೀರಿ, ಮುಗಿದುಹೋಯಿತಲ್ಲ, ಮುಂದಿನ ವರ್ಷನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಬೆಟರ್ ಲೇಟ್ ದ್ಯಾನ್ ನೆವರ್ ಸ್ವಾಮಿ. ಭೂಪತಿಯವರ ಒಂದು ಸಲ ಅಲ್ಲ, ಹತ್ತು ಸಲ ಈ ಸಭೆಗೆ ಆರಿಸಿ ಬರಬಹುದು.

ಶ್ರೀ ಯು. ಭೂಪತಿ.— ಮಾನ್ಯ ಅಧ್ಯಕ್ಷರೆ, ಈ ಶಾಸಕಾಂಗ ನಮ್ಮ ವ್ಯವಸ್ಥೆಯಲ್ಲಿ ಕಾರ್ಯಾಂಗಕ್ಕಿಂತಲೂ ದೊಡ್ಡದ್ದು ಎನ್ನತಕ್ಕಂಥ ಮಾತನ್ನು ಸಂವಿಧಾನಾತ್ಮಕವಾಗಿ ನಾವೆಲ್ಲರೂ ಒಪ್ಪುತ್ತೇವೆ. ಜೊತೆ ಈ ಕಾರ್ಯಾಂಗದ ಮೇಲೆ ಶಾಸಕರಾದಂಥವರು ತಮ್ಮ ಹಿಡಿತ ಇಟ್ಟುಕೊಂಡಿರಬೇಕು, ತಮ್ಮ ತಮ್ಮ ಏರಿಯಾಗಳಲ್ಲಿ ಹಿಡಿತವನ್ನು ಇಟ್ಟುಕೊಂಡಿರಬೇಕು. ಜೊತೆಗೆ ಅವರು ಅಡ್ಮಿನಿಸ್ಟ್ರೇಷನ್‌ನಲ್ಲಿ ಇಂಟರ್‌ಫಿಯರ್ ಮಾಡಬಾರದು ಎಂದು ಇದೆ. ಆದರೆ ಇವತ್ತು ಪರಿಸ್ಥಿತಿ ಏನಾಗುತ್ತಿದೆ, ಎಲ್ಲಾ ಕಡೆ ನಾವು ಕಂಡಿದ್ದಾದರೂ ಏನು ಅಂದರೆ ಬಹಳಷ್ಟು ಕಡೆ ಹಿಡಿತದ ಪ್ರಶ್ನೆಯಿಲ್ಲ, ಇಂಟರ್‌ಫಿಯರೆನ್ಸ್ ...ತ್ತು

ಯಾಗಿದೆ. ಈ ಅಫಿಷಿಯಲ್ ಮಿಷನರಿ, ಅಫಿಷಿಯಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾವು ಏನು ಹಿಡಿತವನು ಸಾಧಿಸಬೇಕು ಎನ್ನುತಕ್ಕಂಥ ವಿಚಾರವನ್ನು ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ಡಿಸ್ಕಸ್ ಆಗಿ ಅಲ್ಲಿ ಒಪಿನಿಯನ್‌ನನ್ನು ಅವರು ಏನು ಫಾರ್ಮುಲೇಟ್ ಮಾಡಿದ್ದಾರೆ. ಅದರಂತೆ ನಡೆಯುತ್ತಾ ಇಲ್ಲ. ಅದು ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ, ಆದಕ್ಕೇ ನಾನು ಹೇಳಿದ್ದುದು, ಲೆಜಿಸ್ಲೇಟರ್ಸ್ ಆದಂಥ ನಮಗೆ ಸರಿಯಾದಂಥ ಟ್ರೈನಿಂಗ್ ಬೇಕು. ಟ್ರೈನಿಂಗ್ ಇಲ್ಲದೇ ಹೋದರೆ ಆಸ್ ಎ ಲೆಜಿಸ್ಲೇಟರ್ ಇಲ್ಲಿ ಬಂದು ಏನು ಮಾಡಬೇಕು ಎಂದು ಅರ್ಥವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಕಳೆದ ವರ್ಷ ಅಲ್ಲ, ಆಚೆ ವರ್ಷ ಶಾಸಕರ ದಿನಾಚರಣೆ ಮಾಡುವಾಗ ತಾವು ಕೆಲವರಿಗೆ ಬಹುಮಾನವನ್ನು ಕೊಟ್ಟಿರಿ. ದಿ ಬೆಸ್ಟ್ ಲೆಜಿಸ್ಲೇಟರ್ಸ್ ಎಂತಲೋ ಅಥವಾ ಅದು ಏನು ಎಂದು ಕರೆಯಬೇಕು ಎಂದು ನನಗೆ ಗೊತ್ತಿಲ್ಲ, ಕೆಲವರು ಶಾಸಕರನ್ನು ಆಯ್ಕೆ ಮಾಡಿ ಬಹುಮಾನಗಳನ್ನು ಕೊಟ್ಟಿರಿ. ಅದರಲ್ಲಿ ವಿಧಾನ ಪರಿಷತ್ತಿನ ಸದಸ್ಯರೂ ಇದ್ದರು ಮತ್ತು ವಿಧಾನ ಸಭೆಯ ಸದಸ್ಯರೂ ಇದ್ದರು. ಬಹುಮಾನ ಕೊಡುವುದಕ್ಕೆ ಮೆಂಬರ್ಸ್‌ನ್ನು ಎಲೆಕ್ಟ್ ಮಾಡಿದಿರಿ. ಅದಕ್ಕೆ ಏನು ಆಧಾರ ಎಂದು ನನಗಂತೂ ಗೊತ್ತಾಗಲಿಲ್ಲ. There must be some base for it. ಈಗ ಅಲ್ಲಿ ಏನಾಗಿದೆಯೆಂದು ಜನರಲ್ಲಾಗಿ ನೋಡಿದರೆ ತಾವು ಎಲೆಕ್ಷನ್‌ಗಳಿಗೆ ಕ್ಯಾಂಡಿಡೇಟ್‌ಗಳನ್ನು ಜಾತಿವಾರು ಯಾವ ರೀತಿ ಡಿವೈಡ್ ಮಾಡುತ್ತೇವೋ ಅದೇ ರೀತಿ ಅಲ್ಲೂ ಕೂಡ ಒಂದೊಂದು ಜಾತಿಯಲ್ಲಿ ಒಬ್ಬೊಬ್ಬರಿಗೆ ಕೊಟ್ಟ ಹಾಗೆ ಕಾಣಿಸುತ್ತದೆ. ಹಾಗೆ ಆಗಿದೆ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು. — ಹೇಗೆ ಮಾಡುವುದು ಎಂದು ಸಲಹೆ ಕೊಡಿ.

ಶ್ರೀ ಯು. ಭೂಪತಿ. ಆದ ಕಾರಣ ನಾನು ಹೇಳುತ್ತೇನೆ, ಇವರಲ್ಲಿ ತಮಗೆ ಬಹಳ ಆಸಕ್ತಿ ಇದೆ. ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ನಾವು ಏನಾದರೂ ವಿಷಯ ಮಾತನಾಡಲಿಲ್ಲ. ಎಂದರೆ ಅಥವಾ ಸುಮ್ಮನೆ ನಾವು ವಿಧಾನ ಸಭೆಯಲ್ಲಿ ಕುಳಿತಿದ್ದೇವೆ ಅಂದರೆ ತಾವು ವೈಯುಕ್ತಿಕವಾಗಿ ಸುಮಾರು ಜನರಿಗೆ ಲೆಟರ್‌ಗಳನ್ನು ಬರೆದಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ, ಅದನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಸಾಮಾನ್ಯವಾಗಿ ಯಾವ ಅಧ್ಯಕ್ಷರೂ ಕೂಡ ಮಾತನಾಡದೇ ಇದ್ದ ಸದಸ್ಯರಿಗೆ ನೀವು ಮಾತನಾಡಲೇಬೇಕು ಎಂದು ಯಾರೂ ಒತ್ತಾಯ ಮಾಡುವುದಿಲ್ಲ. ಅಲ್ಲಿಯವರೆಗೂ ತಾವು ಆಸಕ್ತಿ ವಹಿಸಿದಿರಿ.

೧೨-೩೦ ಪಿ. ಎಂ.

ಆದರೆ ಅದಕ್ಕೆ ಯಾವ ರೀತಿ ಆಧಾರವನ್ನು ಇಟ್ಟುಕೊಳ್ಳಬೇಕು ಎಂಬ ಬಗ್ಗೆ ಹೆಚ್ಚಿನ ಸಲಹೆಯನ್ನು ಕೊಡಲು ನಾನು ಶಕ್ತನಲ್ಲ. ಆದ್ದರಿಂದ ತಾವು ಒಂದು ಸಮಿತಿಯನ್ನು ಫಾರಮ್ ಮಾಡಿ ಎಲ್ಲರ ಅಭಿಪ್ರಾಯವನ್ನು ಕೇಳಿ ನಂತರ ನಿರ್ಧಾರ ತೆಗೆದುಕೊಳ್ಳಿ. ವಿಧಾನ ಸಭೆಯ ಸಮಿತಿಗಳು ಇದೆ. ಉದಾಹರಣೆಗೆ ಪಿ.ಎ.ಸಿ. ಪಿ.ಯು.ಸಿ. ಎಸ್ಟಿಮೇಟ್ ಕಮಿಟಿ ಇತ್ಯಾದಿ. ಅದೇ ರೀತಿ ಬೇರೆ ಬೇರೆ ಇಲಾಖೆಗಳಿಗೆ ತಾವು ಸಲಹಾ ಸಮಿತಿಗಳನ್ನು ಮಾಡಿದ್ದೀರಿ. ಈ ಮನೆಯ ಸಾರ್ವಭೌಮತ್ವವನ್ನು ಹೊತ್ತುಕೊಂಡಿರತಕ್ಕ ಈ ವಿಧಾನ ಮಂಡಲದ ಸಮಿತಿಗಳ ವರದಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ನೋಡುವುದು ಅಗತ್ಯ. ೧೯೮೫ರಿಂದ ಇಲ್ಲಿಯವರೆಗೆ ಯಾವ ಯಾವ ಸಮಿತಿಗಳವರು ಎಷ್ಟೆಷ್ಟು ವರದಿಗಳನ್ನು ಕೊಟ್ಟಿದ್ದಾರೆ. ಅವರು ಮಾಡಿರತಕ್ಕ ಫೈಂಡಿಂಗ್ಸ್ ಏನು? ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ವರದಿಯನ್ನು ತಯಾರು ಮಾಡಿ ನಮಗೆ ಒದಗಿಸಿದರೆ ಅದರಿಂದ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪರವಾಗಿ ಬರತಕ್ಕಂಥ ಹೇಳಿಕೆಗಳನ್ನು ಅಥವಾ ಪತ್ರಿಕೆಗಳಲ್ಲಿ ಬರತಕ್ಕ ಎಡಿಟೋರಿಯಲ್ ಕಲಂಗಳನ್ನು ಕಟ್ಟು ಮಾಡಿಸಿ ಸೈಕ್ಲೋಸ್ಟೈಲ್ ಮಾಡಿಸಿ, ಜೆರಾಕ್ಸ್ ಮಾಡಿಸಿ ಎಲ್ಲಾ ಶಾಸಕರುಗಳಿಗೂ ಕಳುಹಿಸುತ್ತಾರೆ. ಆದರೆ ಈ ಸಮಿತಿಗಳು ಕೊಟ್ಟಿರತಕ್ಕಂಥ ವರದಿಗಳ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಲು ಯಾವ ವರದಿಯನ್ನೂ ಪ್ರಕಟಿಸಿಲ್ಲ. ಪಾರ್ಲಿಮೆಂಟಿನಲ್ಲಿ ಪಾರ್ಲಿಮೆಂಟ್ ಅಡ್ವೈಸರಿ ಕಮಿಟಿಗಳು ಇವೆ. ಇದೇ ರೀತಿ ನಮ್ಮಲ್ಲಿ ಸಲಹಾ ಸಮಿತಿಗಳು ಇದೆ. ನೀವು ಬಡ್ಜೆಟ್‌ನಲ್ಲಿ ಒಂದೊಂದು ಇಲಾಖೆಗಳ ಬೇಡಿಕೆಗಳನ್ನು ತಯಾರು ಮಾಡುವುದಕ್ಕೆ ಮುಂಚಿತವಾಗಿ ಅಂದರೆ ೨-೩ ತಿಂಗಳು ಮೊದಲು ಈ ಸಮಿತಿಗಳ ಸಭೆಗಳನ್ನು ಕರೆದು ಇಲಾಖೆಗೆ ಬೇಡಿಕೆ ಎಷ್ಟು ಇದೆ.

ಇದರ ಸಮಸ್ಯೆಗಳು ಏನು ಇದರ ಆಗುಹೋಗುಗಳ ಬಗ್ಗೆ ಈ ಸಮಿತಿಗಳಲ್ಲಿ ಚರ್ಚೆ ಮಾಡಿದ ನಂತರ ಈ ಮನೆಗೆ ಆ ವಿಚಾರಗಳನ್ನು ತಂದರೆ ಅನುಕೂಲವಾಗುತ್ತದೆ. ಒಂದೊಂದು ಸಲಹಾ ಸಮಿತಿಗಳು ಸಭೆಗಳನ್ನೇ ಕರೆಯುವುದಿಲ್ಲ. ನಾನು ಹಿಂದೆ ಕಾರ್ಮಿಕ ಇಲಾಖೆಯ ಸಲಹಾ ಸಮಿತಿಯಲ್ಲಿ ಇದ್ದೆ. ಹಿಂದೆ ಒಂದೇ ಖಾನೆಗೆ ಸಂಬಂಧ ಪಟ್ಟ ಸಲಹಾ ಸಮಿತಿಗೆ ಶ್ರೀ ವೀರಣ್ಣನವರು ನನಗೆ ಹಾಕಿದ್ದರು. ಹಲವಾರು ಸಲಹಾ ಸಮಿತಿಗಳ ಸಭೆಯಲ್ಲಿ ಇಲ್ಲಿಯವರೆಗೆ ಕರೆದಿಲ್ಲ. ಆದ್ದರಿಂದ ಎಷ್ಟು ಸಲಹಾ ಸಮಿತಿಗಳು ಸಭೆಗಳನ್ನು ಮಾಡಿದ್ದಾರೆ. ಏನೇನು ಚರ್ಚೆ ಮಾಡಿದ್ದಾರೆಂದು ಎಂಬುದರ ಬಗ್ಗೆ ಒಂದು ವರದಿಯನ್ನು ತಯಾರು ಮಾಡಿ ಈ ಸಭೆಯ ಮುಂದೆ ಇಟ್ಟರೆ ಒಳ್ಳೆಯದು.

ಸರ್ಕಾರಕ್ಕೆ ತಾವು ಹೇಳಬೇಕು. ಈ ಸಲಹಾ ಸಮಿತಿಗಳ ಸಭೆಯನ್ನು ಈ ಬೇಡಿಕೆಗಳು ಬರುವುದಕ್ಕಿಂತ ಕರೆಯಬೇಕು. ಹಾಗೂ ಆ ವರದಿಗಳನ್ನು ಈ ಸಭೆಗೆ ಇಡಬೇಕು ಎಂದು ತಾವು ಅವರಿಗೆ ಹೇಳಬೇಕು ಈ ವಿಧಾನ ಸಭೆಗಳ ಅಧ್ಯಕ್ಷರುಗಳ, ಸಮ್ಮೇಳನದ ಬಗ್ಗೆ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೆ ಅದನ್ನು ಮಾತಕೂಡದು ಎಂದು ಹೇಳಿದರು. ಆಗ ತಾವು ಇರಲಿಲ್ಲ. ತಾವು ಎಲ್ಲಿ ಏನು ಮಾತನಾಡಿದ್ದೀರಿ ಎಂಬ ಬಗ್ಗೆ ಬಹಳ ಆಸಕ್ತಿಯಿಂದ ನಾನು ಇದನ್ನು ಓದಿದೆ. ನಮ್ಮ ಅಧ್ಯಕ್ಷರು, ನಮ್ಮ ಬಗ್ಗೆ ಏನು ಮಾತನಾಡಿದರು ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ನಾನು ಈ ವರದಿಯನ್ನು ಓದಿದೆ. ಆದರೆ ಇದರಲ್ಲಿ ಏನೂ ಕಾಣಲಿಲ್ಲ. ನೀವು ಏನಾದರೂ ಮಾತನಾಡಿರಬಹುದು ಆದರೆ ಎಲ್ಲಾ ವರದಿಗಳನ್ನು ನೋಡಲು ನನಗೆ ಸಮಯ ಸಿಗಲಿಲ್ಲ. ಶಾಸಕರುಗಳಿಗೆ ತಮ್ಮದೇ ಆದ ಸಮಸ್ಯೆಗಳು ಇದ್ದು ಇವತ್ತು ಸಮಾಜದಲ್ಲಿ ಏನಾಗಿದೆ ಎಂದರೆ ಶಾಸಕ ಎಂದರೆ ಯಾವ ರೀತಿಯ ಭಾವನೆಗಳನ್ನು ಜನರಿಂದ ಕಾಣಬಹುದು ? ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಳಿಗೆ ಅನುಗುಣವಾಗಿ ಬಿಲೋ ಪಾವರ್ಟಿ ಲೈನ್ ಜನ ಹೆಚ್ಚಾಗುತ್ತಾ ಇದ್ದಾರೆ. ಶಾಸಕರನ್ನು ನೋಡಿದ ತಕ್ಷಣ ಹೇಟೆಡೆನೆಸ್ ಬೆಳೆಯುತ್ತಾ ಇದೆ. ದುರಾದೃಷ್ಟವಶತ್ ಇದು ನಮ್ಮ ಸಮಾಜದಲ್ಲಿ ಬೆಳೆಯುತ್ತಿದೆ. ಕೆಲವರಿಗೆ ಗೌರವ ತೋರಿಸುತ್ತಾರೆ. ಆದರೆ ಎಲ್ಲಾ ಕಡೆ ಇರುವ ವಾಸ್ತವಾಂಶವನ್ನು ನಾವು ಅರಿತು ಕೊಳ್ಳಬೇಕು. ಈ ಸಭಾಧ್ಯಕ್ಷರ ಸಮ್ಮೇಳನದಲ್ಲಿ ಹಲವಾರು ಜನ ಸಭಾಧ್ಯಕ್ಷರುಗಳು ಇದರ ಬಗ್ಗೆ ಮಾತನಾಡಿದ್ದಾರೆ ಇದಕ್ಕೆ ಹಲವಾರು ಕಾರಣಗಳು ಇದೆ ಶಾಸಕರುಗಳ ಸ್ಟೇಟಸ್ ಏತಕ್ಕೆ ಕಡಿಮೆಯಾಗುತ್ತದೆ ? ಅದಕ್ಕೆ ಕಾರಣ ಏನು ಎಂಬುದನ್ನು ಯೋಚನೆ ಮಾಡಬೇಕು. ಈ ಮನೆಯಲ್ಲಿ ನಾವು ಕುಳಿತು ಕೊಳ್ಳುತ್ತೇವೆ. ಈ ರಾಜ್ಯದ ಬಗ್ಗೆ ನಮ್ಮ ನಮ್ಮ ಕ್ಷೇತ್ರಗಳ ಬಗ್ಗೆ ಜನರ ಸಮಸ್ಯೆಗಳ ಬಗ್ಗೆ, ಹಲವಾರು ವಿಷಯಗಳನ್ನು ಇಲ್ಲಿ ಚರ್ಚೆ ಮಾಡಲು ನಾವು ಬಂದಿದ್ದೇವೆ. ಆದರೆ ದುರಾದೃಷ್ಟವಶತ್ ಮೂರು ವರ್ಷಗಳಲ್ಲಿ ಹೆಚ್ಚಿನ ಕಾರ್ಯಕಲಾಪಗಳು ನಡೆದಿಲ್ಲ. ಅದು ನಡೆಯಬೇಕು ನಡೆಯದೇ ಹೋದರೆ ಜನರ ದೃಷ್ಟಿಯಲ್ಲಿ ವಿಧಾನ ಸಭೆ ವಿಧಾನಪರಿಷತ್ತು, ಪಾರ್ಲಿಮೆಂಟ್‌ಗಳ ಬಗ್ಗೆ ಈ ದೇಶದ ಜನ ಬರಬರುತ್ತಾ, ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ ಆ ಒಂದು ಸ್ಟಾಂಡರ್ಸ್ ಅನ್ನು ಇಂಪ್ರೂವ್ ಮಾಡುವುದಕ್ಕೆ ಪಶ್ಚಿಮ ಬಂಗಾಳದ ಅಧ್ಯಕ್ಷರು, ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನು ಜಾರಿಗೆ ತರಬೇಕು. ಶಾಸಕರಿಗೆ ಟ್ರೈನಿಂಗನ್ನು ರೆಗ್ಯುಲರಾಗಿ ಕೊಡಬೇಕು. ಆ ಶಾಸಕರುಗಳಿಗೆ ರೆಮ್ಯುನರೇಷನ್ ಮತ್ತು ಅಲೋಯಿನ್ಸ್ ಜಾಸ್ತಿ ಮಾಡಿದ್ದಾರೆ. ಅದನ್ನು ಜಾಸ್ತಿ ಎಂದು ನಾನು ತಿಳಿದುಕೊಂಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ರೂಪಾಯಿಯ ಬೆಲೆ ೯ ಪೈಸೆಗೆ ಬಂದಿದೆ ಇನ್ನು ೧೦ ವರ್ಷಕ್ಕೆ ಹೋದರೆ ಅದು ಜೀರೋ ಆಗುತ್ತದೆ ಎಂದು ಹೇಳಿದರು. ಶಾಸಕರಾದವರು ಎಲ್ಲರೂ ಶ್ರೀಮಂತ ವರ್ಗದಿಂದ ಬಂದಿಲ್ಲ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದಿಂದ ಸರ್ಕಾರೀ ನೌಕರಿಯಲ್ಲಿದ್ದವರು ಗುಮಾಸ್ತಗಿರಿಗೆ ರಾಜೀನಾಮೆ ಕೊಟ್ಟು ಬಂದಿರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್ — ಪಶ್ಚಿಮ ಬಂಗಾಳದಲ್ಲಿ ವೇತನ ಇತರೆ ಸೌಲಭ್ಯಗಳು ಸೇರಿ ಒಟ್ಟು ಎಷ್ಟು ಮೊತ್ತ ಬರುತ್ತದೆ ಎಂಬುದನ್ನು ಭೂಪತಿಯವರು ಹೇಳಬೇಕು.

ಶ್ರೀ ಯು. ಭೂಪತಿ — ಒಟ್ಟು, ಎಲ್ಲಾ ಮೊತ್ತಗಳು ಸೇರಿ ಮೂರು ಸಾವಿರ ರೂಪಾಯಿಗಳು ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗ[illegible] ಹೇಳಿರುವುದು ಪಶ್ಚಿಮ ಬಂಗಾಳಕ್ಕೆ ಸಂಬಂಧಪಟ್ಟದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾತನಾಡಿದರೆ ಪಶ್ಚಿಮ ಬಂಗಾಳ ಎಂದು ಹೇಳುತ್ತಾರೆ. ನಾವು ಮಾತನಾಡಿದರೆ ಬಿಹಾರ ಎಂದು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಕೆಲವು ಸೂಚನೆಗಳನ್ನು ಶಾಸಕರ ಸ್ಥಾನ ಮಾನದ ಬಗ್ಗೆ ಮಾತನಾಡತಕ್ಕ ಸಮಯದಲ್ಲಿ ಹೇಳಿದ್ದಾರೆ. ಅದು ಸಫಲವಾಗುವ ರೀತಿಯಲ್ಲಿ ಕಾರ್ಯಾಚರಣೆಗಳನ್ನು ಮಾಡಬೇಕು. ಪಶ್ಚಿಮ ಬಂಗಾಳದ ವಿಧಾನ ಸಭಾಧ್ಯಕ್ಷರು, ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಸೂಚನೆ ಹಿನ್ನೆಲೆಯಲ್ಲಿ ಅವುಗಳನ್ನು ನಾನು ಅಂಗೀಕಾರ ಮಾಡಿದರೆ ನಮ್ಮ ಸದಸ್ಯರುಗಳ ಸ್ಥಾನ ಮಾನ ಹೆಚ್ಚಾಗುತ್ತದೆ, ಎನ್ನುವ ದೃಷ್ಟಿಯಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಪಶ್ಚಿಮ ಬಂಗಾಳದ ಶಾಸಕರುಗಳಿಗೆ ಬರತಕ್ಕ ಸಂಬಳ ಇತರೆ ಭತ್ಯಗಳು ಎಷ್ಟು ಎಂಬುದನ್ನು ಅವರು ತಿಳಿಸಬೇಕು.

ಶ್ರೀ ಯು. ಭೂಪತಿ.—ಅಧ್ಯಕ್ಷರೆ, ಪಶ್ಚಿಮ ಬಂಗಾಳದ ಸಿ.ಪಿ.ಎಂ. ಮತ್ತು ಸಿ.ಪಿ.ಐ. ಶಾಸಕರುಗಳಿಗೆ ಬರತಕ್ಕ ಸಂಬಳದ ವಿಚಾರ ಗೊತ್ತಿದೆ. ಕರ್ನಾಟಕದ ಶಾಸಕರುಗಳಿಗೆ ಬರತಕ್ಕ ಸಂಬಳದಕ್ಕಿಂತ ಅಲ್ಲಿ ಕಡಿಮೆ ಇದೆ. ಅಲ್ಲಿ ಒಂದು ಪದ್ಧತಿ ಇದೆ. ಕಮ್ಯುನಿಷ್ಟ ಪಕ್ಷದ ಶಾಸಕರುಗಳಿಗೆ ಬರತಕ್ಕ ಸಂಬಳ ಪಾರ್ಟಿ ಆಫೀಸಿಗೆ ಹೋಗುತ್ತದೆ. ಅಲ್ಲಿ ಪಾರ್ಟಿ ವತಿಯಿಂದ ಎಲ್ಲವನ್ನು ಹಿಡಿದುಕೊಂಡು ೮೦೦ ರೂಪಾಯಿಗಳನ್ನು ಮಾತ್ರ ಶಾಸಕರಿಗೆ ಕೊಡುತ್ತಾರೆ. ಇಲ್ಲಿ ನಿಮ್ಮ ಜನತಾ ಎಂ.ಎಲ್.ಎ.ಗಳಿಗೆ ಆ ರೀತಿ ಕೊಡುವುದಕ್ಕೆ ಆಗುತ್ತದೆಯೇ ? ಆ ರೀತಿ ಇಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ರೆಮ್ಯೂನರೇಷನ್ ಕಡಿಮೆ ಇದ್ದರೂ, ಮಹಾರಾಷ್ಟ್ರದಲ್ಲಿ ಒಬ್ಬೊಬ್ಬ ಶಾಸಕರಿಗೆ ಟೈಪಿಸ್ಟ್ ಕಂ-ಕ್ಲರ್ಕ್ ಕೊಡುತ್ತಾರೆ. ೮೦೦ ರೂಪಾಯಿಯ ಸಂಬಳವನ್ನು ಅವರಿಗೆ ಕೊಡುತ್ತಾರೆ. ಇಲ್ಲಿ ನಮಗೂ ಅಂತಹ ವ್ಯವಸ್ಥೆ ಮಾಡಿದರೆ ನಾವು ಒಂದು ಆಫೀಸ್ ಮಾಡಿಕೊಳ್ಳಬಹುದು. ಜನ ಬಂದಾಗ ಅವರ ಮನವಿ ಪತ್ರಗಳಿಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ ಅಲ್ಲದೆ ಮಹಾರಾಷ್ಟ್ರದಲ್ಲಿ ೮೦೦ ಕಿ.ಮೀ ದೂರದವರೆಗೆ ಸರ್ಕಾರೀ ವಾಹನವನ್ನು ತೆಗೆದುಕೊಂಡು ತಿರುಗಾಡಬಹುದು, ಹೊರಗಡೆಯೂ ಕೂಡ ಹೋಗಬಹುದು. ಇಲಾಖೆಯ ವಾಹನವನ್ನು ತಿಂಗಳಿಗೊಮ್ಮೆ ತಹಶೀಲ್ದಾರರು ಅಲಾಟ್ ಮಾಡಿ ಇಂತಹ ತಾರೀಖಿನಿಂದ ಇಂತ ತಾರೀಖಿನವರೆಗೆ ನಿಮಗೆ ವಾಹನವನ್ನು ಗೊತ್ತು ಮಾಡಲಾಗಿದೆ ಎಂದು ಡ್ರೈವರ್ ಕೊಟ್ಟು ಕಳುಹಿಸಿ ಕೊಡುತ್ತಾರೆ.

ಅಧ್ಯಕ್ಷರು.—ಇಲ್ಲಿಯೂ ತಿಂಗಳಲ್ಲಿ ೧೦ ದಿವಸ ಬಿ.ಡಿ.ಒ. ರವರು ತಮ್ಮ ವಾಹನವನ್ನು ಕೊಡಬೇಕೆಂದು ತಿಳಿಸಲಾಗಿದೆ.

ಶ್ರೀ ಯು. ಭೂಪತಿ.—ತಹಶೀಲ್ದಾರರಿಗೆ ಮತ್ತು ಬಿ.ಡಿ.ಓ.ರವರಿಗೆ, ಏನು ಸೂಚನೆ ಕೊಟ್ಟಿದ್ದೀರಿ, ಇದು ಬರೀ ಸೂಚನೆ ಆಗಬಾರದು. ಸರ್ಕಾರೀ ಆಜ್ಞೆ ಇದರ ಬಗ್ಗೆ ಆಗಬೇಕು.

ಈಗ ಜಿಲ್ಲಾ ಪರಿಷತ್ತು, ಮತ್ತು ಮಂಡಲ ಪಂಚಾಯತ್‌ಗಳು ಬಂದ ಮೇಲೆ ಬಿ. ಡಿ. ಒ, ರವರ ಜೀಪ್‌ಗೆ ಒಂದು ದಿವಸ ಕೂಡ ಬಿಡುವು ಇರುವುದಿಲ್ಲ. ಅವರು ಮಂಡಲ ಪಂಚಾಯಿತಿ ಕೆಲಸಕಾರ್ಯಗಳ ಸೂಪರ್‌ವಿಷನ್ ಮಾಡುವುದಕ್ಕೆ ಹೋಗಬೇಕು, ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ಸ್ ಇದ್ದರೆ ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು, ಸ್ಮಾಲ್ ಸೇವಿಂಗ್ಸ್ ಮೊಬಲೈಸೇಷನ್ ಕ್ಯಾಂಪಸ್‌ಗೆ ಹೋಗಿ ಬರಬೇಕು, ಇದರ ಜೊತೆಗೆ ಇವರು ಅಫಿಷಿಯಲ್ ಮೀಟಿಂಗ್ಸ್‌ಗೆ ಅಟೆಂಡ್ ಮಾಡಬೇಕು, ಹೀಗೆ ಅನೇಕ ರೀತಿಯ ಕೆಲಸಕಾರ್ಯಗಳಿರುತ್ತವೆ. ಒಂದೊಂದು ಸಾರಿ ಅವರ ಜೀಪು ಏನಾದರೂ ಕೆಟ್ಟು ಹೋದರೆ ಅವರೇ ಬಸ್‌ನಲ್ಲಿ ಹೋಗುತ್ತಾರೆ. ಅಂಥಾದ್ದರಲ್ಲಿ ಇನ್ನು ಅವರು ನಮಗೆ ಎಲ್ಲಿಂದ ಜೀಪನ್ನು ಕೊಡುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಮಹಾರಾಷ್ಟ್ರದಲ್ಲಿ ಇರುವಂಥ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲೂ ತಂದರೆ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತದೆ,

ಇನ್ನು ಶಾಸಕರಿಗೆ ಈಗಿರತಕ್ಕ ಮಾನಿಟರಿ ಬೆನಿಫಿಟ್ ಕಡಿಮೆ ಎಂದು ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಅದರೂ ಇನ್ನೂ ಸ್ವಲ್ಪ ಜಾಸ್ತಿ ಮಾಡಬೇಕು. ಇದರ ಜೊತೆಗೆ ಇನ್ನೊಂದು ಮಾತನ್ನು ಹೇಳುವುದಾದರೆ, ತಾವು ಸಮಿತಿಗಳನ್ನು ರಚನೆ ಮಾಡಿದಾಗ ಶಾಸಕರನ್ನು ಬೇರೆ ಬೇರೆ ಸಮಿತಿಗಳಿಗೆ ಹಾಕುತ್ತೀರಿ. ಇದರ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ, ಮನೆಯ[illegible]ಆರ್ಥಿಕವಾಗಿ ಏನೂ ಇಲ್ಲದೇ ಇರತಕ್ಕ ಶಾಸಕರನ್ನು ಈ ಸಮಿತಿಗಳಿಗೆ ಹಾಕಿದರೆ ಸ್ವಲ್ಪ ಮ[illegible]ರ ಹಣಕಾಸಿನ ಪರಿಸ್ಥಿತಿ

ಉತ್ತಮವಾಗುತ್ತದೆ, ಅದನ್ನು ತಾವು ಗಮನದಲ್ಲಿಟ್ಟುಕೊಂಡು ಅಂಥ ಮಾನ್ಯ ಸದಸ್ಯರನ್ನು ಈ ಸಮಿತಿಗಳಿಗೆ ನೇಮಕ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ಕಳೆದ ೪ ದಿವಸಗಳಿಂದ ಶಾಸಕರನ್ನು ಒಬ್ಬೊಬ್ಬರನ್ನಾಗಿ ಕರೆದು ಅವರವರ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದಾರೆ. ಅವರು ಬೇರೆ ವಿಷಯಗಳನ್ನು ಕೇಳ ಬೇಕೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸದಸ್ಯರ ಕ್ಷೇತ್ರಗಳ ಸಮಸ್ಯೆಗಳಿಗೆ ಸಂಬಂಧ ಪಟ್ಟಂತೆ ಕೇಳಬೇಕು. ಇದು ಕೇವಲ ಜನತಾ ಪಕ್ಷದ ಸದಸ್ಯರಿಗೆ ಮಾತ್ರ ಸೀಮಿತವಾಗಿರಬಾರದು. ಎಲ್ಲಾ ಶಾಸಕರನ್ನೂ ಕರೆಯಿಸಿಕೊಂಡು ಅವರವರ ಕ್ಷೇತ್ರದ ಸಮಸ್ಯೆಗಳ ಬಗ್ಗೆ ವಿಚಾರಿಸಬೇ ಕೆಂದು ಕೇಳಿಕೊಂಡು ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪುಟ್ಟಸ್ವಾಮಿ, (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಕೃಷಿ ಇಲಾಖೆಯ ಸಚಿವರಾದ ಮಾನ್ಯ ಲಕ್ಷ್ಮೀಸಾಗರ್‌ರವರು ಇಟ್ಟಿರತಕ್ಕ ಬೇಡಿಕೆಗಳನ್ನು ತಾತ್ವಿಕವಾಗಿ ನಾನು ವಿರೋಧಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ,

ಈಗಾಗಲೇ ಸ್ನೇಹಿತ ಸದಸ್ಯರಾದ ಮಾನ್ಯ ಭೂಪತಿಯವರು ನಮ್ಮ ವಿಧಾನ ಮಂಡಲದ ಕಾರ್ಯವಿಧಾನದ ಬಗ್ಗೆ ಮತ್ತು ವಿಧಾನ ಮಂಡಲದದಲ್ಲಿ ಕಾರ್ಯ ಕಲಾಪ ಗಳಲ್ಲಿ ನಮ್ಮ ಸದಸ್ಯರುಗಳು ಹೆಚ್ಚಿನ ರೀತಿಯಲ್ಲಿ ಭಾಗವಹಿಸಿ ಹೆಚ್ಚಿನ ಉಪಯೋಗ ವನ್ನು ಪಡೆಯತಕ್ಕ ರೀತಿಯಲ್ಲಿ ತರಬೇತಿಯನ್ನು ಕೊಡತಕ್ಕ ಬಗ್ಗೆ, ನಾವು ಈ ಸದನದ ಕಾರ್ಯಕಲಾಪ ಗಳಲ್ಲಿ ಭಾಗವಹಿಸಿದ ಅಥವಾ ಭಾಷಣ ಮಾಡಿದಂಥ ಭಾಷಣದ ಪ್ರತಿಗಳು ನಮಗೆ ವರ್ಷಗಟ್ಟಲೆ ಯಾದರೂ ಸಿಕ್ಕದೇ ಇರುವ ವ್ಯವಸ್ಥೆಯನ್ನು ತಪ್ಪಿಸಿ ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಆದಷ್ಟು ಬೇಗ ನಮ್ಮ ಭಾಷಣದ ಪ್ರತಿಗಳು ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿದಂಥ ಮಾತನ್ನು ನಾನು ಅನುಮೋದಿಸಿ ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಸೂಕ್ತ ಗಮನಹರಿಸ ಬೇಕೆಂದು ಹೇಳಬಯಸುತ್ತೇನೆ.

ಇನ್ನು ಈ ಸಂಸದೀಯ ಖಾತೆಗೆ ಸಂಬಂಧಪಟ್ಟಂತೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ವ್ಯಾಪ್ತಿಗೆ ಬರತಕ್ಕ ಶಾಸಕರ ಭವನದ ಬಗ್ಗೆ ನಾವು ವಿಚಾರ ಮಾಡುವುದು ಸೂಕ್ತವೆನಿಸುತ್ತದೆ. ನಾನು ಸುಮಾರು ೩-೪ ಬಾರಿ ಈ ಸದನದ ಸದಸ್ಯನಾಗಿ ಅನುಭವವಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನವು ನಡೆಯುವಾಗ ಶಾಸಕರ ಭವನಕ್ಕೆ ಮಾನ್ಯ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ, ಸಂಸದೀಯ ವ್ಯವಹಾರಗಳ ಖಾತೆಯ ಸಚಿವರಾಗಲಿ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಲಿ ಅಥವಾ ಮಾನ್ಯ ಮುಖ್ಯ ಮಂತ್ರಿಗಳಾಗಲಿ ಶಾಸಕರ ಭವನಕ್ಕೆ ಬಂದು ಶಾಸಕರಿಗೆ ಒದಗಿಸಿರತಕ್ಕ ಸೌಲಭ್ಯಗಳ ಬಗ್ಗೆ ಅಥವಾ ಉಪಹಾರ ಗೃಹದ ಬಗ್ಗೆ ಖುದ್ದಾಗಿ ಪರಿಶೀಲಿಸಿ ಏನಾದರೂ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿತ್ತು. ನಾನು ಈ ಮಾತನ್ನು ಹೇಳುವುದರಿಂದ ಮಾನ್ಯ ಅಧ್ಯಕ್ಷರಾಗಲಿ, ಮಾನ್ಯ ಮಂತ್ರಿಗಳಾಗಲಿ ತಪ್ಪು ತಿಳಿದುಕೊಳ್ಳಬಾರದೆಂದು ಹೇಳಬಯ ಸುತ್ತೇನೆ

ಈವೊತ್ತು ಶಾಸಕರ ಭವನದಲ್ಲಿ ನಮ್ಮ ಕೊಠಡಿಗಳಲ್ಲಿ ಕಸ ಗುಡಿಸಿ ಅದರ ಸ್ವಚ್ಛತೆಯನ್ನು ಕಾಪಾ ಡತಕ್ಕಂಥ ವ್ಯವಸ್ಥಿತವಾದ ಕೆಲಸ ನಡೆಯುತ್ತಿಲ್ಲ. ನಮಗೆ ಕೊಟ್ಟಿರತಕ್ಕಂಥ ರೂಮ್‌ಬಾಯ್ಸ್ ಮತ್ತು ಟೆಲಿಫೋನ್ ಇದರ ವ್ಯವಸ್ಥೆಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ೧೯೮೩ರಲ್ಲಿ ಚುನಾಯಿತನಾಗಿ ಬಂದರೆ, ಮತ್ತೆ ೧೯೮೫ ರಲ್ಲಿ ನಡೆದ ಚುನಾವಣೆಯಲ್ಲಿ ನನಗೆ ಗೆದ್ದು ಬರಲು ಅವಕಾಶ ಸಿಕ್ಕಿತು. ಈ ಐದು ವರ್ಷಗಳ ಅನುಭವದಲ್ಲಿ ನಾನು ಶಾಸಕರ ಭವನದಲ್ಲಿ ೧೩೭ ನೇ ನಂಬರ್ ಕೊಠಡಿಯಲ್ಲಿ ಇದ್ದೇನೆ. ನಾನು ಇಲ್ಲಿಗೆ ಬಂದಮೇಲೆ ಪ್ರತಿದಿವಸ ೨-೩ ಟೆಲಿಫೋನ್ ಕಾಲ್ ಮಾಡಬೇಕಾಗುತ್ತದೆ, ಮತ್ತು ಹೊರಗಿನಿಂದ ಹಲವಾರು ಕಾಲ್‌ಗಳು ಬರತಕ್ಕಂಥ ಸಂದರ್ಭದಲ್ಲಿ ರಿಸೀವ್ ಮಾಡುವುದಕ್ಕೆ ಅವಕಾಶವೇ ಇರುವುದಿಲ್ಲ. ಸಂಬಂಧಪಟ್ಟವರಿಗೆ ಹೇಳಿ ಹೇಳಿ ಯಾವ ಅನುಕೂಲವೂ ಆಗದಿರುವುದರಿಂದ ಈ ಟೆಲಿಫೋನ್ ತೆಗೆದುಬಿಟ್ಟರೆ ಒಳ್ಳೆಯದೆಂದು ಹೇಳುವ ಮಟ್ಟಕ್ಕೆ ಬಂದಿರುತ್ತೇವೆ. ಆದ್ದರಿಂದ ಅಧ್ಯಕ್ಷ

ರಾಗಲಿ ಸಮಿತಿಗೆ ಸಂಬಂಧಪಟ್ಟ ಚೇರ್‌ಮನ್‌ರವರಾಗಲಿ, ಉಪಾಧ್ಯಕ್ಷರಾಗಲಿ ಅವರ ಕಡೆ ಹೆಚ್ಚಿನ ಗಮನವನ್ನು ಕೊಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ಕೊನೆಯ ಪಕ್ಷ ಮಾನ್ಯ ಮುಖ್ಯಮಂತ್ರಿಗಳಾಗಲಿ ಸಂಬಂಧಪಟ್ಟ ಸಚಿವರಾಗಲಿ, ಈ ಸದನ ನಡೆಯುವಂಥ ಕಾಲದಲ್ಲಿಯಾದರೂ ಒಮ್ಮೆ ಅಲ್ಲಿಗೆ ಭೇಟಿಕೊಟ್ಟರೆ ಬಹಳ ಒಳ್ಳೆಯದು

ಇನ್ನು ಫಲಹಾರ ಮಂದಿರ, ಉಪಹಾರ ಮಂದಿರದ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಎಲ್ಲಾ ಶಾಸಕರಿಗೂ ಏನು ವ್ಯವಸ್ಥೆ ಇದೆಯೋ ಏನೋ ಗೊತ್ತಿಲ್ಲ ಅವರು ಏನು ಸ್ಪೆಷಲ್ ಆರ್ಡರ್ ಕೊಡುತ್ತಾರೆಯೋ ಏನೋ. ಕಾಫಿ ಟೀ, ಕೊಡುವ ಲೋಟೋಗಳು, ಮತ್ತು ಊಟಕ್ಕೆ ಕಳುಹಿಸುವ ಸಾರು, ಮೊಸರು ತುಂಬಿ ಕಳುಹಿಸುವ ಲೋಟೋಗಳನ್ನು ನೋಡಿದರೆ ಇದು ಶಾಸಕರ ಭವನದಲ್ಲಿ ಇರುವ ಫಲಹಾರ ಮಂದಿರಕ್ಕೆ ಯೋಗ್ಯವಾಗಿದೆಯೋ ಎನ್ನುವುದು ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಾಗಲಿ, ತಾವಾಗಲಿ ಒಮ್ಮೆ ಭೇಟಿಕೊಟ್ಟು ಏತಕ್ಕೆ ವಿಚಾರ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ ಇದರ ಬಗ್ಗೆ ನನಗೆ ಬಹಳಷ್ಟು ಅನುಭವವಾಗಿದೆ. ಶಾಸಕರಿಗೆ ಒದಗಿಸುತ್ತಿರುವ ಸಲಕರಣೆಗಳು ಶೇ ಕಡಾ 20 ಭಾಗವಾದರೂ ಒಳ್ಳೆಯದಿರುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ಊಟ ಮತ್ತು ಉಪಹಾರದ ಬಗ್ಗೆ ಹೇಳುತ್ತಿದ್ದಾರೆ. ನನಗನಿಸುತ್ತದೆ. ಒಳ್ಳೆಯ ರುಚಿ ರುಚಿಯಾದ ತಿನಿಸುಗಳನ್ನು ಕೊಟ್ಟಲ್ಲಿ ಶಾಸಕರು ಮನೆಗೆ ಹೋಗುವುದಿಲ್ಲ, ಮನೆ ಬಿಟ್ಟು ಇರುತ್ತಾರೆ ಆದ್ದರಿಂದ ಸ್ವಾಮಿಗಳಿಗೆ ಕೊಡುವಂಥ ಊಟವನ್ನು ಕೊಟ್ಟರೆ ಬಹಳ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಯು. ಭೂಪತಿ —ಅಲ್ಲಿ ಕೊಡತಕ್ಕಂಥದ್ದು ಎಲ್ಲಾ ಅನಾರೋಗ್ಯಕರವಾದ ಊಟವೇ ಆಗಿರುತ್ತದೆ. ನಿಮಗೆಲ್ಲಾ ಒಳ್ಳೆಯ ಊಟ ಸಿಗುತ್ತದೆಂದು ಕಾಣುತ್ತದೆ.

ಶ್ರೀ ಕೆ ಮಲ್ಲಪ್ಪ —ಸನ್ಯಾಸಿಗಳು, ಮಠಾಧಿಪತಿಗಳು ಸ್ವೀಕರಿಸುವ ಊಟ ತೆಗೆದುಕೊಂಡರೆ ಅವರು ಯಾವರೀತಿ ಒಳ್ಳೆಯವರಿರುತ್ತಾರೆ ಆ ರೀತಿಯಲ್ಲಿರುವುದಕ್ಕೆ ಸಾಧ್ಯವಾಗುತ್ತದೆನ್ನುವ ಭಾವನೆಯಿಂದ ಈ ರೀತಿಯಿಂದ ಊಟ ಕೊಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್. ಪುಟ್ಟಸ್ವಾಮಿ.—ವಿಧಾನ ಮಂಡಲದ ಎರಡು ಮನೆಯ ಸದಸ್ಯರುಗಳಲ್ಲಿ ಬಹಳಷ್ಟು ಮಂದಿ ಶಾಸಕರು ಶಾಸಕರ ಭವನದಲ್ಲಿರುವ ಉಪಹಾರ ಫಲಹಾರಮಂದಿರದಲ್ಲಿ ಉಪಹಾರ ಫಲಹಾರ ದಿಲ್ಲವೆಂದು ಕಾಣುತ್ತದೆ. ಹೊರಗಡೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ ಆದರೆ ನಮಗೆ ವಿಧಿಯಿಲ್ಲ. ನಾವು ಅಲ್ಲೇ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ.

ಮತ್ತೆ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಸರ್ಕಾರ ನಡೆಸುವ ಪಕ್ಷದ ಪರವಾಗಿ ಸರ್ಕಾರಿ ಚೀಫ್ ವಿಪ್ ಎಂದು ಇರುತ್ತಾರೆ. ಅವರಿಗೆ ಕೆಲವು ಸವಲತ್ತುಗಳನ್ನು ಸರ್ಕಾರದವರು ಒದಗಿಸಿ ಕೊಟ್ಟಿದ್ದಾರೆ ಅದೇರೀತಿಯಲ್ಲಿ ಪ್ರತಿಪಕ್ಷದ ಚೀಫ್ ವಿಪ್‌ಗೂ ಕೂಡ ಕೆಲವಾರು ಸಲಕರಣೆಗಳನ್ನು ಒದಗಿಸಿಕೊಡದಿದ್ದರೆ ನಮ್ಮ ಪಕ್ಷದವರಿಗೆ ಮಾರ್ಗದರ್ಶನ ಕೊಡುವುದಾದರೂ ಹೇಗೆ ? ಆದ್ದರಿಂದ ಸರ್ಕಾರಿ ಪಕ್ಷದ ಚೀಫ್‌ವಿಪ್‌ಗೆ ಕೊಟ್ಟಿರುವ ಸಲಕರಣೆಗಳಿಗೆ ಸಮನಾಗಿ ಪ್ರತಿಪಕ್ಷದ ಚೀಫ್‌ವಿಪ್‌ಗೂ ಸಲಕರಣೆಗಳನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡುವುದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ಸಲಹೆ ಒಳ್ಳೆಯ ಸಲಹೆಯಾಗಿರುತ್ತದೆ. ಅದನ್ನು ವಿಚಾರಮಾಡುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ಇನ್ನು ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಕೃಷಿ ಪ್ರಧಾನವಾದ ರೇಷ್ಮೆ ಬೆಳೆಯ ಬಗ್ಗೆ ಮಾನ್ಯ ಸದಸ್ಯರನೇಕರು ಭಾಷಣ ಮಾಡಿದ್ದಾರೆ. ಮಾನ್ಯ ಸ್ನೇಹಿತರಾದ ರಾಜು ಗೌಡರು ಬಹಳ ವಿಸ್ತಾರವಾಗಿ ಅನೇಕ ಅಂಶಗಳನ್ನು ಕೊಟ್ಟು ಭಾಷಣ ಮಾಡಿದ್ದಾರೆ. ನಾನು ಕೆಲವು ವಿಷಯಗಳ ಬಗ್ಗೆ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ರೇಷ್ಮೆ ಕೃಷಿ ಇವತ್ತು 30 ಲಕ್ಷ ಜನರಿಗೆ ಒಂದಲ್ಲ ಒಂದು ರೀತಿಯಲ್ಲಿ ಜೀವನದ ಮಾರ್ಗವನ್ನು ಕಲ್ಪಿಸಿಕೊಡತಕ್ಕ ಗೃಹ ಕೈಗಾರಿಕೆ ಅಥವಾ ಸಣ್ಣ ಕೈಗಾರಿಕೆಯಾಗಿ ಬೆಳೆದು ಬಂದಿದೆ.

ಸುಮಾರು ೬ ಲಕ್ಷ ಕುಟುಂಬಗಳಿಗೆ ಇದರಿಂದ ಸೌಲಭ್ಯ ದೊರಕುತ್ತಿದೆ ಎಂದು ಅಂಕಿಸಂಖ್ಯೆಗಳಿಂದ ಅರ್ಥವಾಗುತ್ತದೆ. ಕೃಷಿ ಆಧಾರಿತವಾದ, ಹೆಚ್ಚು ಜನರನ್ನು ತೊಡಗಿಸತಕ್ಕ ವ್ಯವಸ್ಥೆ ಇರತಕ್ಕ ಈ ಕೆಲಸದಲ್ಲಿ ನಾವು ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ನಾಲ್ಕೈದು ವರ್ಷಗಳಿಂದ ವಿಶ್ವಬ್ಯಾಂಕಿನಿಂದ ೧೦೦ ಕೋಟಿ ರೂಪಾಯಿಗಳ ಸಹಾಯ ಮತ್ತು ಸಾಲದ ವ್ಯವಸ್ಥೆಯಿಂದ ಏನು ಮಾಡಿದೆವು ಎಂಬುದನ್ನು ವರದಿಯಲ್ಲಿ ನೋಡುವುದಾದರೆ ಆ ಹಣ ಎಲ್ಲಾ ಮಾರುಕಟ್ಟೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಮತ್ತು ಮೊಟ್ಟೆ ತಯಾರು ಮಾಡತಕ್ಕ ಮಾದರಿ ಕಟ್ಟಡಗಳನ್ನು ಕಟ್ಟುವುದಕ್ಕೆ ವಾಹನಗಳನ್ನು ಕೊಂಡುಕೊಳ್ಳುವುದಕ್ಕೆ, ಚಾಕಿ ಸೆಂಟರ್‌ಸ್‌ಗೆ ಮತ್ತು ಸರ್ವೀಸ್ ಸೆಂಟರ್‌ಸ್‌ಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮುಕ್ಕಾಲು ಪಾಲು ಹಣವನ್ನು ಖರ್ಚು ಮಾಡಿ ಮೂಲಭೂತವಾದ ರೇಷ್ಮೆ ಕೃಷಿ ಮಾಡಿ ಏನು ಹಿಪ್ಪುನೇರಳೆ ಕಡ್ಡಿಯನ್ನು ಬೆಳೆಯುತ್ತೇವೆ ಅದಕ್ಕಾಗಲೀ ಹೊಸ ತಳಿಯನ್ನು ಪ್ರಾರಂಭ ಮಾಡಿ ಹೆಚ್ಚು ಹೆಚ್ಚು ಸೊಪ್ಪನ್ನು ಬೆಳೆಯತಕ್ಕ ವ್ಯವಸಾಯಕ್ಕಾಗಲೀ ಮಾಡಿಲ್ಲ. ಹಿಪ್ಪುನೇರಳೆ ಬೆಳೆಯನ್ನು ಬೆಳೆಯುವುದಕ್ಕೆ ಬೋರ್ ಬಾವಿಗಳನ್ನಾಗಲೀ ಓಪನ್ ಬಾವಿಗಳನ್ನಾಗಲೀ ಮಾಡುವುದಕ್ಕೆ ಖರ್ಚು ಮಾಡಿಲ್ಲ. ೧೦೦ ಕೋಟಿ ರೂಪಾಯಿಗಳ ರೇಷ್ಮೆ ಅಭಿವೃದ್ಧಿ ಯೋಜನೆಯನ್ನು ತಯಾರು ಮಾಡಿ ವಿಶ್ವ ಬ್ಯಾಂಕ್ ನೆರವು ಪಡೆದು ಏನು ಖರ್ಚುಮಾಡಿದ್ದೇವೆ ಅದರಲ್ಲಿ ಶೇಕಡ ೧೦ ಭಾಗದ ಹಣವನ್ನು ಖರ್ಚು ಮಾಡಿ ಸುಧಾರಿತ ತಳಿ ಸೊಪ್ಪನ್ನು ಬೆಳೆಯುವುದಕ್ಕೆ, ರೈತರ ಉತ್ಪನ್ನ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ ಎಂದರೂ ತಪ್ಪಾಗಲಾರದು. ಈಗ ಈ ಹಣ ಎಲ್ಲಾ ಮುಗಿದಿದೆ. ಮಾರುಕಟ್ಟೆಗಳನ್ನು ಕಟ್ಟುವುದಕ್ಕೆ ಮತ್ತು ಗೂಡುಗಳನ್ನು ತಯಾರು ಮಾಡುವುದಕ್ಕೆ ಖರ್ಚು ಮಾಡಿ ಮುಗಿಸಿದ್ದೇವೆ. ೧೦೦ ಕೋಟಿ ರೂಪಾಯಿಗಳ ಯೋಜನೆಯಿಂದ ನಮ್ಮ ರಾಜ್ಯದಲ್ಲಿ ೪,೮೦೦ ಮೆಟ್ರಿಕ್ ಟನ್ ರೇಷ್ಮೆ ಉತ್ಪನ್ನ ಮಾಡಬಹುದೆಂದು ಗುರಿ ಇಟ್ಟುಕೊಳ್ಳಲಾಗಿತ್ತು. ನೆರೆರಾಜ್ಯವಾದ ತಮಿಳುನಾಡಿನಲ್ಲಿ ವಿಶ್ವಬ್ಯಾಂಕ್ ನೆರವು ಪಡೆದು ರೇಷ್ಮೆ ಉತ್ಪನ್ನವನ್ನು ದ್ವಿಗುಣಗೊಳಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಅದೇರೀತಿ ಆಂಧ್ರ ಪ್ರದೇಶದಲ್ಲಿ ಮಾಡಿದ್ದಾರೆ ಆದರೆ ನಮ್ಮಲ್ಲಿ ೧೦೦ ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆ ಹಾಕಿ ಅಷ್ಟು ಹಣವನ್ನೂ ಖರ್ಚು ಮಾಡಿ ಮೂಲಭೂತವಾಗಿ ರೈತರಿಗೆ ಬೇಕಾದ ಹೊಸ ತಳಿಯ ಹಿಪ್ಪುನೇರಳೆ ವ್ಯವಸಾಯ ಮಾಡುವುದಕ್ಕೆ ಮತ್ತು ಅದಕ್ಕೆ ನೀರನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ. ಈಗ ಮತ್ತೆ ೨೫೦ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿ ವಿಶ್ವ ಬ್ಯಾಂಕಿಗೆ ಕಳುಹಿಸಿ ಮಂಜೂರು ಮಾಡಿಸಿಕೊಳ್ಳತಕ್ಕ ಕೆಲಸ ಸರ್ಕಾರ ಮತ್ತು ರೇಷ್ಮೆ ಕೃಷಿ ಇಲಾಖೆಯವರು ಮಾಡಿದ್ದಾರೆಂದು ತಿಳಿದುಬಂದಿದೆ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ ಈ ೧೦೦ ಕೋಟಿ ರೂಪಾಯಿಗಳ ಯೋಜನೆಯಲ್ಲಿ ಏನು ತಪ್ಪು ಮಾಡಿದ್ದೇವೆ, ಅನುಷ್ಠಾನ ಮಾಡತಕ್ಕ ಕಾಲದಲ್ಲಿ ಮೂಲಭೂತವಾಗಿ ಯಾವ ಯಾವ ಕ್ಷೇತ್ರಗಳನ್ನು ಬಿಟ್ಟಿದ್ದೇವೆ ಆ ಎಲ್ಲಾ ಕ್ಷೇತ್ರದ ಪ್ರತಿನಿಧಿಗಳನ್ನು, ರೇಷ್ಮೆ ಕೃಷಿಯಲ್ಲಿ ಹೆಚ್ಚು ಅನುಭವ ಇರುವವರನ್ನು, ನೂಲು ಬಿಚ್ಚತಕ್ಕವರನ್ನು ಮತ್ತು ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಅನುಭವ ಇರತಕ್ಕವರನ್ನು ಸೇರಿಸಿ ಸಮಾಲೋಚನೆ ಮಾಡಿ ಕೆಲಸ ಮಾಡುವುದು ಸೂಕ್ತ, ಹಾಗೆ ಮಾಡದೇಹೋದರೆ ಪ್ರಯೋಜನ ಆಗುವುದಿಲ್ಲ. ೫ ವರ್ಷಗಳಲ್ಲಿ ೧೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬೈವೋಲ್ಟೀನ್ ಸಿಲ್ಕನ್ನು ಹೆಚ್ಚು ಹೆಚ್ಚು ಉತ್ಪನ್ನ ಮಾಡಿ ಸಿಲ್ಕ್ ಉತ್ಪನ್ನ ಹೆಚ್ಚು ಮಾಡುವ ಕೆಲಸ, ಅದರ ಗುಣಮಟ್ಟವನ್ನು ಹೆಚ್ಚು ಮಾಡಿ ವಿಶ್ವ ಮಾರುಕಟ್ಟೆಯಲ್ಲಿ ಅವರ ಜೊತೆಯಲ್ಲಿ ಕಾಂಪೀಟ್ ಮಾಡತಕ್ಕ ಸನ್ನಿವೇಶ ನಮ್ಮಲ್ಲಿ ಆಗಲಿಲ್ಲ.

೧೯೮೬-೮೭ನೇ ಸಾಲಿನಲ್ಲಿ ಮತ್ತು ೧೯೮೭-೮೮ನೇ ಸಾಲಿನಲ್ಲಿ ೨೦೦ ಮೆಟ್ರಿಕ್ ಟನ್ ಬೈವೋಲ್ಟೀನ್ ಸಿಲ್ಕನ್ನು ಉತ್ಪಾದನೆ ಮಾಡಬೇಕೆಂದು ಇಲಾಖೆಯವರು ಗುರಿಯನ್ನು ಇಟ್ಟುಕೊಂಡಿದ್ದರು. ಆದರೆ ಅವರು ಕೇವಲ ೬೦ ಮೆಟ್ರಿಕ್ ಟನ್ ಅಷ್ಟೇ ಉತ್ಪಾದನೆ ಮಾಡಿದ್ದಾರೆ. ನಮ್ಮ ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಕೇಂದ್ರದಲ್ಲಿ ನಮ್ಮ ಕರ್ನಾಟಕದಲ್ಲಿರತಕ್ಕ ವಾಯುಗುಣಕ್ಕೆ, ಕರ್ನಾಟಕದಲ್ಲಿರತಕ್ಕ ಸ್ಥಳದ ಸನ್ನಿವೇಶಕ್ಕೆ ಒಗ್ಗದೇ ಇರತಕ್ಕ ಬೈ-ವೋಲ್ಟೀನ್ ತಳಿಯ ಮೊಟ್ಟೆಯನ್ನು ಕೊಟ್ಟಿದ್ದರಿಂದ ನಾವು ಅದರಲ್ಲಿ ಸಫಲರಾಗಲಿಲ್ಲ ಇದರಿಂದಾಗಿ ನಾವು ಈ ಬೈ-ವೋಲ್ಟೀನ್ ಸಿಲ್ಕನ್ನು ಹೆಚ್ಚು ತಯಾರು ಮಾಡುವುದಕ್ಕಾಗಲಿಲ್ಲ ಎಂಬುದಾಗಿ ಅವರ ವರದಿಯಲ್ಲೇ ತಿಳಿಸಿದ್ದಾರೆ. ನನಗನ್ನಿಸುತ್ತದೆ, ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಕೇಂದ್ರದಲ್ಲಿ ನಡೆಯತಕ್ಕಂತಹ ಸುಮಾರು ಹೊಸ ಯೋಜನೆ ಆದರೆ ಅಭಿವೃದ್ಧಿ ತಳಿಗಳನ್ನು ತಯಾರು ಮಾಡುವುದಕ್ಕಾಗಿ ವಿಶ್ವ ಬ್ಯಾಂಕಿನಿಂದ ನೂರಾರು ಕೋಟಿ ರೂಪಾಯಿಗಳನ್ನು ಪಡೆದುಕೊಂಡು ಅದನ್ನು ಖರ್ಚು ಮಾಡತಕ್ಕಂತಹ ಸಂದರ್ಭದಲ್ಲಿ ಸಂಶೋಧನಾ ಕೇಂದ್ರ

ಮತ್ತು ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಕೇಂದ್ರದವರು ಆ ಬಗ್ಗೆ ವಿಚಾರ ಮಾಡಿರಲಿಲ್ಲವೆ? ಒಂದು ವೇಳೆ ವಿಚಾರ ಮಾಡಿದ್ದರೆ. ಅದನ್ನು ಏಕೆ ಅಳವಡಿಸಿಕೊಂಡು ಕೆಲಸ ಮಾಡಿಲ್ಲವೆಂದು ಸರ್ಕಾರದವರನ್ನು ಮತ್ತು ರೇಷ್ಮೆ ಕೃಷಿ ಇಲಾಖೆಯವರನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಆದ್ದರಿಂದ ದಯಮಾಡಿ ನಮ್ಮ ರಾಜ್ಯದಲ್ಲಿ ನಮ್ಮ ವಾಯುಗುಣಕ್ಕೆ ಒಗ್ಗತಕ್ಕ ತಳಿಯನ್ನು ಸೂಚಿಸಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ: ಒಂದು ವೇಳೆ ಆರೀತಿ ಮಾಡದಿದ್ದರೆ. ಅದನ್ನು ಈಗಲಾದರೂ ಸೂಚನೆ ಮಾಡಿ ಅದನ್ನು ಮುಂದೆ ಅನುಷ್ಠಾನಕ್ಕೆ ತರತಕ್ಕಂತಹ ವ್ಯವಸ್ಥೆಯನ್ನು ರೇಷ್ಮೆ ಕೃಷಿ ಇಲಾಖೆಯವರು ಮಾಡಿದ್ದಾರೆಯೋ ಎಂಬುದಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೆ ನಮ್ಮಲ್ಲಿ ಇವತ್ತು ವ್ಯವಸಾಯದ ಸಾಮಗ್ರಿಗಳನ್ನು ಮಾರಾಟ ಮಾಡುವುದಕ್ಕೆ ಕ್ರಮಪಡಿಸಿದ ಮಾರುಕಟ್ಟೆ ಸಮಿತಿಗಳ ವ್ಯವಸ್ಥೆಯನ್ನು ಮಾಡಿದ್ದೇವೆ. ಅದು ನಡೆದುಕೊಂಡು ಹೋಗುತ್ತಿದೆ, ಅದೇ ರೀತಿ ಸಿಲ್ಕನ್ನು ಮಾರಾಟ ಮಾಡತಕ್ಕಂತಹ ಹಂತದಲ್ಲಿ ರಾಜ್ಯಮಟ್ಟದಲ್ಲಿ ಸಿಲ್ಕ್ ಎಕ್ಸ್‌ಚೇಂಜ್‌ನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸಿಲ್ಕ್ ಎಕ್ಸೇಂಜ್ ಪೂರಕವಾಗಿ ಕೆಲಸ ಮಾಡುವುದಕ್ಕೆ ನಮ್ಮ ಸ್ಥಿರೀಕರಣ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೋಸ್ಕರ ಸಿಲ್ಕ್ ಎಕ್ಸೇಂಜನ್ನು ವ್ಯವಸ್ಥೆ ಮಾಡಿದ್ದು ಕಳೆದ ೪-೫ ವರ್ಷಗಳಿಂದಲೂ ಅದು ಕೆಲಸ ಮಾಡುತ್ತಿದೆ. ಅದು ಹೇಗೆ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ನಿನ್ನೆ ಮಾನ್ಯ ಸದಸ್ಯರಾದ ರಾಜುಗೌಡರವರು ಅವರ ಕಾರ್ಯವೈಖರಿಯ ಬಗ್ಗೆ ಅದರ ಕೆಲಸಕಾರ್ಯಗಳ ಬಗ್ಗೆ ವಿವರವಾಗಿ ತಿಳಿಸಿದ್ದಾರೆ ಅದನ್ನು ನಾನು ಮತ್ತೊಮ್ಮೆ ಹೇಳುವುದಕ್ಕೆ ಹೋಗುವುದಿಲ್ಲ. ಸಿಲ್ಕ್ ಎಕ್ಸೇಂಜನ್ನು ಸ್ಥಾಪನೆ ಮಾಡತಕ್ಕ ಕಾಲದಲ್ಲಿ ಮೊದಲು ಮಾರುಕಟ್ಟೆಯ ಸಲುವಾಗಿಯೇ ರಾಜ್ಯ ಮಟ್ಟದಲ್ಲ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಎಂದು ಇತ್ತು. ಅದು ಕೂಡಾ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಿತ್ತು, ಫಿಲೇಚರ್‌ಗಳಿಂದ ಸಿಲ್ಕನ್ನು ಕೊಂಡುಕೊಳ್ಳುತ್ತಿತ್ತು. ಅದೇ ರೀತಿ ಖಾಸಗಿಯವರಿಂದಲೂ ಸಿಲ್ಕನ್ನು ಕೊಂಡುಕೊಳ್ಳುತ್ತಿತ್ತು. ಇವತ್ತು ಆ ಸಂಸ್ಥೆಯ ಗತಿ ಏನಾಗಿದೆ ಎಂದರೆ ಸಿಲ್ಕ್ ಎಕ್ಸೇಂಜನ್ನು ಸ್ಥಾಪನೆ ಮಾಡಿದ ಮೇಲೂ ಇದನ್ನು ಪ್ಯಾರಲಲ್ಲಾಗಿ ಉಳಿಸಿಕೊಳ್ಳತಕ್ಕ ಕೆಲಸ ಏಕೆ? ಅಂಥದ್ದು ಏನು? ಇವತ್ತು ಅದರ ಸ್ಥಿತಿ ಏನಾಗಿದೆ ಎಂದರೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ದುರುಪಯೋಗವಾಗಿದೆ. ಅದರ ಬಗ್ಗೆ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಅದನ್ನು ಇಂದಾದರೂ ನಿಲ್ಲಿಸಿ ಅದನ್ನು ಸಿಲ್ಕ್ ಎಕ್ಸೇಂಜಿನ ಜೊತೆಯಲ್ಲಿ ಸೇರಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಅಥವಾ ಇಲಾಖೆಯವರು ಮಾಡಿದ್ದಾರೆಯೋ ಎಂಬುದಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ವ್ಯವಸಾಯ ಇಲಾಖೆಯಲ್ಲಿ ರೇಷ್ಮೆ ಕೃಷಿ ಇಲಾಖೆಯಲ್ಲಿ ಅದೇ ರೀತಿ ಇನ್ನೂ ಬೇರೆ ಬೇರೆ ಇಲಾಖೆಗಳಲ್ಲಿ ತಾಂತ್ರಿಕ ಜ್ಞಾನ ಉಳ್ಳವರು ಬೇಕೆಂದರೂ ಐ. ಎ. ಎಸ್. ಅಧಿಕಾರಿಗಳನ್ನು ಸರ್ಕಾರ ಹಾಕುತ್ತಿದೆ. ಇದನ್ನು ಸರ್ಕಾರದ ನೀತಿಯೆಂದು ಒಪ್ಪಿಕೊಂಡಿದೆ. ಇದರೆ ಕೆಲವು ಜಾಗಗಳಿಗೆ ಅಂದರೆ ಸಿಲ್ಕ್ ಎಕ್ಸೇಂಜಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಐ. ಎ. ಎಸ್. ಅಥವಾ ಕೆ. ಎ. ಎಸ್. ಅಧಿಕಾರಿಗಳನ್ನು ಹಾಕುವುದಕ್ಕಿಂತ ಬದಲಾಗಿ ರೇಷ್ಮೆ ಕೃಷಿ ಇಲಾಖೆಯಲ್ಲಿ ಸರಿಯಾದ ಅನುಭವವನ್ನು ಪಡೆದುಕೊಂಡಿರತಕ್ಕ ಯಾರನ್ನಾದರೂ ಜಾಯಿಂಟ್ ಡೈರೆಕ್ಟರ್ ಅಥವಾ ಡೆಪ್ಯೂಟಿ ಡೈರೆಕ್ಟರ್ ಕೇಡರ್‌ನವರನ್ನು ಅಲ್ಲಿಗೆ ಹಾಕಿದರೆ ಅವರು ಇನ್ನೂ ಉತ್ತಮವಾಗಿ ಕೆಲಸ ಮಾಡುವುದಕ್ಕೆ ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಈಗಾಗಲೇ ಸುಮಾರು ಗೂಡಿನ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಿ ಅನೇಕ ವರ್ಷಗಳಾಯಿತು. ಇಷ್ಟೊಂದು ಪ್ರಮಾಣದಲ್ಲಿ ಗೂಡಿನ ಮಾರುಕಟ್ಟೆಗಳನ್ನು ಮಾಡಿದರೂ ಕೂಡ ೧೦೦ಕ್ಕೆ ೧೦೦ರಷ್ಟು ರೈತರು ತಾವು ಬೆಳೆದಂತಹ ಗೂಡನ್ನು ಮಾರುಕಟ್ಟೆಗೆ ತರತಕ್ಕಂಥದ್ದು ಇನ್ನೂ ಆಗಲಿಲ್ಲ. ಅವರಿಗೆ ಇದ್ದಂಥ ಅನಾನುಕೂಲತೆಯನ್ನು ಗಮನಿಸಿ ಅನೇಕ ರೀತಿಯ ಕಾನೂನುಗಳನ್ನು ಮಾಡಿ, ಮಧ್ಯವರ್ತಿಗಳನ್ನು ತಡೆಗಟ್ಟುವ ವ್ಯವಸ್ಥೆಯನ್ನು ಮಾಡಿದರೂ ಕೂಡ ೧೦೦ಕ್ಕೆ ೧೦೦ರಷ್ಟು ರೈತರು ತಾವು ಬೆಳೆದಂತಹ ಗೂಡನ್ನು ಗೂಡಿನ ಮಾರುಕಟ್ಟೆಗಳಿಗೇ ತಂದು ಮಾರಾಟಮಾಡತಕ್ಕ ವ್ಯವಸ್ಥೆಯನ್ನು ಪರಿಪೂರ್ಣವಾಗಿ ಮಾಡುವುದಕ್ಕಾಗಿಲ್ಲ.

೧-೦೦ ಪಿ. ಎಂ.

ಮಾರುಕಟ್ಟೆಗೆ ಬರತಕ್ಕಂತಹ ಗೂಡಿನ ಮೇಲೆ ಮಾರ್ಕೆಟ್ ಫೀ ಸುಮಾರು ೫ ಕೋಟಿ ರೂಪಾಯಿಗಳಷ್ಟು ವಸೂಲು ಮಾಡಿ ಇಟ್ಟುಕೊಂಡಿದ್ದಾರೆ. ಮಾರುಕಟ್ಟೆಗೆ ಬರತಕ್ಕ ರೈತರಿಗೆ ಬೇಕಾದ ಸೌಕರ್ಯಕ್ಕಾಗಲೀ ಅಥವಾ ಮಾರುಕಟ್ಟೆಗೆ ರೈತ ತಂದು ಮಾರಾಟ ಮಾಡುವ ಗೂಡಿನ ಪ್ರಮಾಣದ ಮೇಲೆ ರೈತನಿಗೆ ಬೋನಸ್ ಕೊಡುವ ವ್ಯವಸ್ಥೆಯಾಗಲೀ ಅಥವಾ ಬೇರೆ ಬೇರೆ ಸೌಕರ್ಯಗಳನ್ನು ಒದಗಿಸುವ ಕೆಲಸಕ್ಕೆ ಈ ಹಣವನ್ನು ಉಪಯೋಗ ಮಾಡದೇ ಬೇರೆ ಕೆಲಸಕ್ಕೆ ಉಪಯೋಗ ಮಾಡಿರಬಹುದು. ಈ ಹಣವನ್ನು ಆ ರೀತಿ ಮಾಡದೇ ಇದ್ದರೆ ಇನ್ನಾದರೂ ರಾಜ್ಯದಲ್ಲಿ ಯಾವ ಮಾರುಕಟ್ಟೆಯಲ್ಲಿ ಹೆಚ್ಚು ಗೂಡು ಮಾಡತಕ್ಕ ವ್ಯವಸ್ಥೆ ಇದೆ, ಕೊಂಡುಕೊಳ್ಳುವ ವ್ಯವಸ್ಥೆ ಇದೆ ಅಲ್ಲಿಯ ಕೆಲವು ಸೌಕರ್ಯಗಳಿಗೆ ಈ ಹಣವನ್ನು ಒದಗಿಸುವುದಕ್ಕೆ ಉಪಯೋಗ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆಯ ವಿಚಾರ ಹೇಳಬೇಕೆಂದರೆ ನಮ್ಮ ರಾಜ್ಯದಲ್ಲಿನ ಕರಾವಳಿ ಭಾಗದಲ್ಲಿ ಹೆಚ್ಚು ವಿಸ್ತಾರವಾಗಿ ಇದರ ಒಂದು ಕೆಲಸ ಬೆಳೆದಿದೆ. ಈ ಇಲಾಖೆಯವರು ಹೆಚ್ಚಿನ ಯೋಜನೆಗಳನ್ನು ಹಾಕಿ ಆ ಹೆಚ್ಚಿನ ಸೌಕರ್ಯಗಳನ್ನು ನಮ್ಮ ಭಾಗಕ್ಕೂ ವಿಸ್ತರಿಸಿದರೆ ನಮ್ಮಲ್ಲೂ ಕೂಡಾ ಇನ್ನೂ ಹೆಚ್ಚು ಮೀನುಗಾರಿಕಾ ಅಭಿವೃದ್ಧಿ ಮಾಡಿದಹಾಗೆ ಆಗುತ್ತದೆ. ಬಯಲುಸೀಮೆಯಲ್ಲಿ ನಾವು ಕಟ್ಟಿರತಕ್ಕ ಹಲವಾರು ಮಧ್ಯಮ ಮತ್ತು ದೊಡ್ಡ ನೀರಾವರಿ ಅಣೆಕಟ್ಟುಗಳು ಹಾಗೂ ಸಣ್ಣ ಸಣ್ಣ ಕೆರೆಗಳು ಏನಿವೆ ಅವುಗಳಲ್ಲಿ ವರ್ಷದ ಅನೇಕ ತಿಂಗಳು ನೀರು ಇರುವುದರಿಂದ ಅಲ್ಲೂ ಕೂಡಾ ಮೀನಿನ ಮರಿಗಳನ್ನು ಬೆಳೆಸಿ ಅದರಿಂದ ಬರುವ ಆದಾಯವನ್ನು ಮಂಡಲ ಪಂಚಾಯಿತಿಗಳು ಅಥವಾ ಜಿಲ್ಲಾ ಪರಿಷತ್ತುಗಳು ಉಪಯೋಗಿಸಿಕೊಳ್ಳುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಈಬಗ್ಗೆ ನಮ್ಮ ಮೀನುಗಾರಿಕಾ ಸಚಿವರು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ ಈ ಸಂದರ್ಭದಲ್ಲಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಪುಟ್ಟಸ್ವಾಮಿಯವರೇ, ಶಾಸಕರ ಭವನದಲ್ಲಿನ ಸೌಕರ್ಯಗಳ ಬಗ್ಗೆ ತಾವು ಹೇಳಿದ್ದೀರಿ. ಅಲ್ಲಿಯ ಸೌಕರ್ಯಗಳ ಬಗ್ಗೆ ನಾವೇ ನೇರವಾಗಿ ಅದರಲ್ಲಿ ಕೈಹಾಕುವುದು ಬೇಡ ಎಂದು ಹೇಳುತ್ತೇನೆ. ನಿಯಮಾವಳಿ ಪ್ರಕಾರ ಸೌಕರ್ಯಗಳನ್ನು ನೋಡಿಕೊಳ್ಳುವ ಸಲುವಾಗಿಯೇ ಹೌಸ್ ಕಮಿಟಿ ಎನ್ನುವುದು ಇದೆ. ಅದರಲ್ಲಿ ವಿಧಾನಸಭೆಯ ೮ ಶಾಸಕರು, ವಿಧಾನಪರಿಷತ್ತಿನ ೪ ಜನ ಶಾಸಕರು ಸದಸ್ಯರಿದ್ದಾರೆ. ಹೀಗೆ ಒಟ್ಟು ೧೨ ಜನ ಶಾಸಕರು ಆ ಸಮಿತಿಯ ಸದಸ್ಯರಿದ್ದು, ಅದರ ಅಧ್ಯಕ್ಷತೆಯನ್ನು ಒಂದು ವರ್ಷ ವಿಧಾನಸಭೆಯ ಉಪಾಧ್ಯಕ್ಷರು ನಿರ್ವಹಿಸಿದರೆ ಮತ್ತೊಂದು ವರ್ಷ ವಿಧಾನಪರಿಷತ್ತಿನ ಉಪಸಭಾಪತಿಯವರು.

ನಿರ್ವಹಿಸುತ್ತಾರೆ. ಹೋದ ಸಾರಿ ಎಂದರೆ ೧೯೮೭-೮೮ರಲ್ಲಿ ಈ ಸಮಿತಿಯ ಅಧ್ಯಕ್ಷತೆಯನ್ನು ವಿಧಾನ ಪರಿಷತ್ತಿನ ಉಪಸಭಾಪತಿಯವರು ನಿರ್ವಹಿಸಿದ್ದರು. ಈ ಸಮಿತಿಯಲ್ಲಿ ವಿಧಾನಸಭೆಯ ಸದಸ್ಯರಾದ ಎಂ. ಡಿ. ಬಿರಾದರ್. ಗೌಳಿ ಮಹದೇವಪ್ಪ, ಎಚ್. ಸಿ. ಮಹದೇವಪ್ಪ, ಕೆ. ಎಚ್. ರಾಮಕೃಷ್ಣಯ್ಯ, ಶಿವರಾಮರೆಡ್ಡಿ, ಎಂ. ರಾಮಪ್ಪ, ಸಿ. ಕಣ್ಣನ್, ಎಸ್. ಜಿ. ನಂಜಯ್ಯನಮಠ್ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಗುಂಡಿ ಸಾವಿತ್ರಮ್ಮ, ಬಿ. ಎಸ್. ಹೊರಟ್ಟಿ, ಎಂ. ವಿ. ಸೂರಾಚಾರಿ ಹಾಗೂ ಶಹಬುದ್ದೀನ್ ಫೌಜ್‌ದಾರ್‌ರವರು ಸದಸ್ಯರಾಗಿದ್ದರು. ನಿಮಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕೆನ್ನುವುದೇ ಈ ಸಮಿತಿಯ ಉದ್ದೇಶ. ಈ ಸಮಿತಿಯ ಸದಸ್ಯರಿಗೆ ಸಂಪೂರ್ಣ ಅಧಿಕಾರ ಇದೆ. ಅವರ ಯಾವುದೇ ಶಿಫಾರಸ್ಸನ್ನು ಟರ್ನ್‌ಡೌನ್ ಮಾಡುವುದಿಲ್ಲವೆಂದು ನಾನು ಹೇಳಿದ್ದೇನೆ. ಅವರು ೨೫ ದಿವಸ ಮೀಟಿಂಗ್ ಮಾಡಿದ್ದಾರೆ. ಈ ಸಮಿತಿ ಅಲ್ಲದೇ ಕೆಲವು ಸಬ್-ಕಮಿಟಿಗಳು ಸಹಾ ಇವೆ. ಉಪಹಾರದ ಬಗ್ಗೆ ಸಬ್-ಕಮಿಟಿ ಇದೆ. ಮಾಂಸಾಹಾರದ ಬಗ್ಗೆ ಉಪ-ಸಮಿತಿ ಇದೆ, ಸಾರಿಗೆ ವ್ಯವಸ್ಥೆ ಬಗ್ಗೆ ಆರೋಗ್ಯದ ಬಗ್ಗೆ, ಸಿವಿಲ್ ವರ್ಕ್ಸ್ ಬಗ್ಗೆ, ವಸ್ತುಗಳನ್ನು ಖರೀದಿಸುವ ಬಗ್ಗೆ ಉಪ-ಸಮಿತಿಗಳು ಇವೆ. ಹೀಗೆ ಜನರಲ್ಲಾಗಿ ೨೫ ದಿವಸ ಕುಳಿತು ಚರ್ಚೆ ಮಾಡಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ ಶಾಸಕರೇ ಸದಸ್ಯರಿದ್ದು ಏನು ಏನು ಅನುಕೂಲಗಳನ್ನು ಮಾಡಬೇಕೋ, ಏನೇನು ಕೆಲಸಗಳನ್ನು ಮಾಡಬೇಕೋ ಅದರ ಬಗ್ಗೆ ಸಲಹೆ ಸೂಚನೆ ಕೊಡತಕ್ಕದ್ದು ಸಮಿತಿಯ ಕೆಲಸ. ನೀವೂ ಕೂಡಾ ಶಾಸಕರ ಭವನದಲ್ಲೇ ಇರುತ್ತೀರಿ. ನೀವು ನಿಮ್ಮ

ಸಲಹೆ ಸೂಚನೆಗಳನ್ನೆಲ್ಲಾ ಆ ಸಮಿತಿಗೆ ಕೊಟ್ಟರೆ ಒಳ್ಳೆಯದು. ಹೋದಸಾರಿ ವಿಧಾನಪರಿಷತ್ತಿನ ಉಪ ಸಭಾಪತಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಾರಿ ವಿಧಾನಸಭೆಯ ಉಪಸಭಾಪತಿಯವರು ಅದರ ಅಧ್ಯಕ್ಷರಾಗಿರುತ್ತಾರೆ. ಮೇಲಿಂದ ಮೇಲೆ ಮೀಟಿಂಗ್ ಕರೆಯಿರಿ ಎಂದು ನಾನು ಹೇಳಿದ್ದೇನೆ. ನಾನು ೧೭೨ನೇ ಇಸವಿಯಲ್ಲಿ ಹೌಸ್ ಕಮಿಟಿಯ ಸದಸ್ಯನಾಗಿದ್ದೆ ಆಗ ವರ್ಷಕ್ಕೆ ಎರಡು ಮೂರು ಮೀಟಿಂಗ್ ನಡೆಸುವುದು ಕಷ್ಟವಾಗುತ್ತಿತ್ತು. ಈಗ ನಾನು ಆಗಿಂದಾಗ್ಗೆ ಮೀಟಿಂಗ್ ಕರೆದು ಏನು ಸಮಸ್ಯೆಗಳು ಇವೆ ಅವುಗಳ ಬಗ್ಗೆ ಚರ್ಚೆ ಮಾಡಿರಿ ಎಂದು ಹೇಳಿದ್ದೇನೆ. ನಿಮ್ಮದು ಏನೇ ತೊಂದರೆಗಳು ಇದ್ದರು ಹೌಸ್ ಕಮಿಟಿಗೆ ನೀವು ಹೇಳಬೇಕು.

ಶ್ರೀ ಎಸ್. ಪುಟ್ಟಸ್ವಾಮಿ.—ಬಹಳ ಸಂತೋಷ. ನಮ್ಮ ಕುಂದುಕೊರತೆಗಳನ್ನು ಹೌಸ್ ಕಮಿಟಿಗೆ ತಿಳಿಸುವ ವ್ಯವಸ್ಥೆ ಮಾಡಿರುವುದರ ಜೊತೆಗೆ ಅವರು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡುವಂತೆ ಹೆಚ್ಚಿನ ಗಮನಹರಿಸುವಂತೆ ತಾವು ಸೂಚನೆ ಕೊಡಬೇಕು.

ಅಧ್ಯಕ್ಷರು.—ಹೌಸ್ ಕಮಿಟಿಯವರು ಏನು ಶಿಫಾರಸ್ಸು ಮಾಡಿದ್ದಾರೆ ಅವುಗಳನ್ನು ತಳ್ಳಿ ಹಾಕಿಲ್ಲ. ಅವರು ಏನು ತೀರ್ಮಾನ ಮಾಡಿರುತ್ತಾರೆ ಅವುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಿಂದಾಗ್ಗೆ ಡೈರೆಕ್ಷನ್ ಕೊಡಲಾಗುತ್ತಿದೆ.

ಶ್ರೀ ಎಂ. ವೀರಯ್ಯಸ್ವಾಮಿ.—ನಾನು ಹೋದ ಸಲ ಹೌಸ್ ಕಮಿಟಿಯ ಸದಸ್ಯನಾಗಿದ್ದೆ. ಶಾಸಕರ ಭವನದಲ್ಲಿರತಕ್ಕ ಕ್ಯಾಂಟೀನ್ ಬೇನಾಮಿ ಹೆಸರಿನಲ್ಲಿ ನಡೆಯುತ್ತಿದೆ. ಅದನ್ನು ತೆಗೆಯಬೇಕೆಂದು ಇದ್ದರೂ ಅವರೇ ನಡೆಸುತ್ತಿದ್ದಾರೆ. ಕ್ಯಾಂಟೀನ್ ನಡೆಸಲಿಕ್ಕೆ ಅನುಮತಿ ತೆಗೆದುಕೊಂಡಿರುವವರು ಒಬ್ಬರು ನಡೆಸುತ್ತಿರವವರು ಒಬ್ಬರು ಸಬ್ ಲೀಸ್ ಕೊಟ್ಟಿದ್ದಾರೆ ಅದನ್ನು ಅಧಿಕಾರಿಗಳು ನೋಡಿಕೊಳ್ಳುತ್ತಾ ಕುಳಿತಿದ್ದಾರೆ. ತಾವು ಅದನ್ನು ಬೇಕಾದರೆ ನೋಡಬಹುದು.

ಅಧ್ಯಕ್ಷರು.—ಸಂಪೂರ್ಣವಾದ ಅಧಿಕಾರವನ್ನು ಹೌಸ್ ಕಮಿಟಿಗೆ ಕೊಟ್ಟಿದ್ದೇವೆ. ಕಂಪ್ಲೀಟ್ ಪವರ್ ಅನ್ನು ಹೌಸ್ ಕಮಿಟಿಗೆ ಕೊಟ್ಟಿದ್ದೇವೆ ತೀರ್ಮಾನವನ್ನು ಅವರು ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಯ್ಯಸ್ವಾಮಿ.—ಇಲ್ಲೀಗಲ್ ಆಗಿ ಕ್ಯಾಂಟೀನ್ ನಡೆಸುತ್ತಿದ್ದಾರೆ.

ಶ್ರೀ ವಿನಯಕುಮಾರ್ ಸೊರಕೆ.—ಹೌಸ್ ಕಮಿಟಿಯಲ್ಲಿ ನಾನು ಈ ವರ್ಷದ ವರೆಗೆ ಸದಸ್ಯನಾಗಿದ್ದೇನೆ. ಸಮಿತಿಯ ಅವಧಿ ಒಂದು ವರ್ಷಕ್ಕೆ ಸೀಮಿತವಾಗಿದೆ. ಹಿಂದಿನ ಹೌಸ್ ಕಮಿಟಿಯವರು ಏನೇನು ರೆಕಮೆಂಡೇಷನ್ ಮಾಡಿದ್ದಾರೆ ಅವುಗಳೆಲ್ಲ ಕಮಿಟಿಯ ಮುಂದೆ ಬಂದಿವೆ. ಹೊಸ ಹೌಸ್ ಕಮಿಟಿ ರಚನೆಯಾದ ಮೇಲೆ ಮೂರ್ನಾಲ್ಕು ಮೀಟಿಂಗ್‌ಗಳನ್ನು ನಡೆಸಿದ್ದೇವೆ. ಪ್ರತಿಯೊಂದು ವಿಚಾರದಲ್ಲೂ ಏನೇನು ನ್ಯೂನತೆಗಳಿವೆ, ಏನು ತೊಂದರೆಯಿದೆ ಎಂಬುದನ್ನು ನೋಡಿ ಒಳ್ಳೆಯ ರೀತಿ ಕೆಲಸ ಮಾಡಲಿಕ್ಕೆ ಮಾನ್ಯ ಉಪಾಧ್ಯಕ್ಷರಾದ ಯಾವಗಲ್‌ರವರ ಅಧ್ಯಕ್ಷತೆಯಲ್ಲಿ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಶಿವಣ್ಣ.—ಶಾಸಕರ ಭವನದಲ್ಲಿರತಕ್ಕ ಉಪಹಾರ ಮಂದಿರದಲ್ಲಿ ಒಂದು ದಿವಸ ಊಟ ಮಾಡುವ ಸಂದರ್ಭ ಒಂದು ಊಟ ಮಾಡಿದ ಮೇಲೆ ೧೫ ದಿವಸ ಹೊಟ್ಟೆ ನೋವು ಬಂತು ನನ್ನ ಆರೋಗ್ಯ ಕೆಟ್ಟು ಹೋಯಿತು. ಆ ಸಂದರ್ಭದಲ್ಲಿ ತಮಗೆ ಒಂದು ಪತ್ರ ಬರೆದಿದ್ದೇನೆ. ಅದೇರೀತಿ ಹೌಸ್ ಕಮಿಟಿಯವರಿಗೆ ಒಂದು ಪತ್ರ ಬರೆದಿದ್ದೇನೆ ತಮ್ಮಿಂದ ಹಾಗೂ ಅವರಿಂದ ಉತ್ತರ ಬರಲಿಲ್ಲ. ಅಲ್ಲಿಗೆ ಬರತಕ್ಕ ಸಾರ್ವಜನಿಕರು ಏನು ಹೇಳುತ್ತಾರೆಂದರೆ ಶಾಸಕರಿಗೆ ಇಂತಹ ಊಟ ಉಪಚಾರಗಳನ್ನು ಒದಗಿಸಿದರೆ, ಇಡೀ ರಾಜ್ಯದ ಜನತೆಯ ಗತಿಯೇನು ? ಇವರ ಆರೋಗ್ಯ ಸರಿಯಾಗಿ ನೋಡಿಕೊಳ್ಳದವರು ರಾಜ್ಯದ ಜನತೆಯ ಆರೋಗ್ಯವನ್ನು ಯಾವರೀತಿ ನೋಡಿಕೊಳ್ಳುತ್ತಾರೆಂದು ಕೇಳುತ್ತಿದ್ದಾರೆ. ಈ ಬಗ್ಗೆ ಸೂಕ್ತ ಬದಲಾವಣೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವರ್ಷ ಮಾನ್ಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಹೊಸ ಕಮಿಟಿಯನ್ನು ರಚಿಸಲಾಗಿದೆ. ಆ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರುಗಳು ಇದ್ದಾರೆ.

೧ ಶ್ರೀ ಬಿ. ಆರ್. ಯಾವಗಲ್, ಅಧ್ಯಕ್ಷರು ಹಾಗೂ ವಿಧಾನಸಭೆಯ ಉಪಾಧ್ಯಕ್ಷರು,

೨ ಶ್ರೀ ಎಸ್. ಮಲ್ಲಿಕಾರ್ಜುನಯ್ಯ, ವಿಧಾನ ಪರಿಷತ್‌ನ ಉಪಾಧ್ಯಕ್ಷರು,

೩ ಶ್ರೀ ಪಿ. . ಸಿದ್ದನಗೌಡರ್, ವಿಧಾನಸಭಾ ಸದಸ್ಯರು,
೪ ಶ್ರೀ ಕಲ್ಲಪ್ಪ ಪರಿಸಮಗಣ್ಣನವರ್, –,,–
೫ ಶ್ರೀ ಸಿ. ಸಿ. ಕಲಕೋಟಿ –,,–
೬ ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡ. –,,–
೭ ಶ್ರೀ ಬಿ. ಬಿ. ನಿಂಗಯ್ಯ, –,,–
೮ ಶ್ರೀ ಮದನ ಗೋಪಾಲ ನಾಯಕ್, –,,–
೯ ಶ್ರೀ ವಿನಯಕುಮಾರ್ ಸೊರಕೆ –,,–
೧೦ ಶ್ರೀ ಪಿ. ಎಸ್. ರಾಣೆ, –,,–
೧೧ ಶ್ರೀಮತಿ ಗುಂಡಿ ಸಾವಿತ್ರಮ್ಮ, ವಿಧಾನ ಪರಿಷತ್ತಿನ ಸದಸ್ಯರು
೧೨ ಶ್ರೀ ಪಿ. ತಿಮ್ಮಯ್ಯ, –,,–
೧೩ ಶ್ರೀ ಬಿ. ಎಸ್. ಹೊರಟ್ಟಿ, –,,–
೧೪ ಶ್ರೀ ಶಹಬುದ್ದೀನ್ ಫೌಜ್‌ದಾರ್ –,,–

ಸಂಪೂರ್ಣವಾದ ಅಧಿಕಾರವನ್ನು ಕಮಿಟಿಗೆ ಡೆಲಿಗೇಟ್ ಮಾಡಿರುವುದರಿಂದ ಅವರು ಏನೇ ತೀರ್ಮಾನ ತೆಗೆದುಕೊಂಡರೂ ನಾವು ಅದನ್ನು ಮಾಡಿಕೊಡುತ್ತೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ —ತಾವು ಮಾತನಾಡಿ, ಸದಸ್ಯರು ಗೈರುಹಾಜರಿದ್ದಾರೆ. ಈಗ ಶ್ರೀ ಆರ್. ವೆಂಕಟರಾಮಯ್ಯನವರು ಮಾತನಾಡಿ.

† ಶ್ರೀ ಆರ್. ವೆಂಕಟರಾಮಯ್ಯ (ಮುಂಳಬಾಗಿಲು).— ಮಾನ್ಯ ಸಚಿವರು ಮುಂಡಿಸಿರತಕ್ಕ ಬೇಡಿಕೆಗಳ ಪೈಕಿ ಮೊದಲು ಲೆಜಿಸ್‌ಲೇಚರ್ ಡಿಮ್ಯಾಂಡ್‌ನ ಬಗ್ಗೆ ಮಾತನಾಡುತ್ತೇನೆ. ತಾವು ಅಧ್ಯಕ್ಷರಾದ ಮೇಲೆ ಲೆಜಿಸ್‌ಲೇಟರ್ ಬಗ್ಗೆ ಬಹಳ ಗಮನ ಕೊಟ್ಟಿದ್ದೀರಿ, ಅವರ ಹಕ್ಕುಗಳನ್ನು ಕಾಪಾಡುವುದಕ್ಕೆ ನಿಜವಾಗಿಯೂ ತಾವು ಯಾವರೀತಿಯ ಗಮನ ಕೊಡಬೇಕೋ ಅವನ್ನು ಕೊಟ್ಟಿದ್ದೀರಿ ಅವರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ದುರದೃಷ್ಟವಶಾತ್ ತಾವು ಕೊಟ್ಟ ಸುತ್ತೋಲೆಗಳನ್ನು ಸರಿಯಾಗಿ ಇದುವರೆಗೆ ನಿಮ್ಮ ಇತರೆ ಮಂತ್ರಿಗಳು ಪರಿಪಾಲಿಸುತ್ತಿಲ್ಲ. ಶಾಸಕರಿಗೆ ಯಾವ ಗೌರವ ಸಿಗಬೇಕೋ ಅದು ಸಿಗುತ್ತಿಲ್ಲ. ಅದಕ್ಕೊಂದು ಉದಾಹರಣೆ ಹೇಳುತ್ತೇನೆ, ಹಿಂದಿನ ಕಾಗದಪತ್ರಗಳ ಮಂಡನೆ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದ, ಆ ಸಮಿತಿಯು ಹಾಸನಕ್ಕೆ ಪ್ರವಾಸ ಹೋಗಿತ್ತು. ನಮ್ಮ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನಸ್ವಾಮಿಯವರು ಖಾಯಿಲೆ ಇದ್ದರು. ಆಗ ತಕ್ಷಣ ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ಸಮಿತಿಯ ಸದಸ್ಯರಿದ್ದಲ್ಲಿಗೆ ಬರಬೇಕೆಂದು ಫೋನ್ ಮೂಲಕ ಕಾಂಟ್ಯಾಕ್ಟ್ ಮಾಡಿದಾಗ ಅವರು ಬರಲಿಲ್ಲ. ಮತ್ತೊಬ್ಬರು ಆರ್. ಎಂ. ಓ. ಅವರಿಗೂ ಕೂಡ ಫೋನ್ ಮೂಲಕ ಕಾಂಟಕ್ಟ್ ಮಾಡಿದಾಗ ಅವರು ಬರಲಿಲ್ಲ. ಅಲ್ಲಿ ಆರ್. ಎಂ. ಓ. ಇದ್ದರು, ಅವರು ಕೂಡ ಬರಲಿಲ್ಲ. ನಾನು ಬರುವುದಿಲ್ಲ, ಬೇಕಾದರೆ ಇಲ್ಲಿಗೆ ಕರೆದುಕೊಂಡು ಬನ್ನಿ ಎಂದು ಹೇಳಿದರು. ನಾವು ಆಮೇಲೆ ಡಿ. ಸಿ. ಯವರನ್ನು ಕಾಂಟ್ಯಾಕ್ಟ್ ಮಾಡಿದೆವು. ಡಿ. ಸಿ.ಯವರು ಹೇಳಿದರೂ ಕೂಡ ಆ ಆರ್. ಎಂ. ಓ. ಬರಲಿಲ್ಲ. ಆಮೇಲೆ ಡಿ. ಸಿ. ಯವರು ಯಾರೂ ಪ್ರೈವೇಟ್‌ನರ್ಸಿಂಗ್ ಹೋಮ್‌ನಿಂದ ಡಾಕ್ಟರನ್ನು ಕರೆಯಿಸಿದರು. ನಾವು ಬೆಂಗಳೂರಿಗೆ ಬಂದ ಮೇಲೆ ತಕ್ಷಣ ಶ್ರೀ ರಾಚಯ್ಯನವರಿಗೆ ಒಂದು ಪತ್ರವನ್ನು ಕಮಿಟಿಯ ಪರವಾಗಿ ಕೊಟ್ಟೆವು. ಇಂತಹ ವೈದ್ಯಾಧಿಕಾರಿ ಇದ್ದಾರೆ. ನೀವು ಅವರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು. ಅದು ಈ ವೇಳೆಗೆ ಶ್ರೀ ರಾಚಯ್ಯನವರ ಗಮನಕ್ಕೆ ಬಂದಿದೆಯೋ ಗೊತ್ತಿಲ್ಲ. ಶ್ರೀ ರಾಚಯ್ಯನವರೇ ಈ ರೀತಿ ಶಾಸಕರ ಬಗ್ಗೆ ವರ್ತನೆ ಮಾಡಿದರೆ ನನಗೆ ನಿಜವಾಗಿಯೂ ಸಂಕಟ ವಾಯಿತು. ನಾವೆಲ್ಲಾ ಕಮಿಟಿಯವರು ಯೂನಾನಿಮಸ್ ಆಗಿ ತೀರ್ಮಾನ ಮಾಡಿ ಹೀಗೆ ನಿಮ್ಮ ಡಾಕ್ಟರ್ ಒಬ್ಬರು ಮಹಿಳಾ ಶಾಸಕಿ ಬಗ್ಗೆ ಮಿಸ್‌ಬಿಹೇವ್ ಮಾಡಿದ್ದಾರೆ. ನೀವು ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಅರ್ಜಿ ಕೊಟ್ಟು ಸುಮಾರು ಆರು ತಿಂಗಳಾಯಿತು. ಇವರು ಏನೂ ಮಾಡಲಿಲ್ಲ. ಹೆಲ್ತ್ ಡಿಪಾರ್ಟ್‌ಮೆಂಟಿನವರಿಗೆ ಶಾಸಕರ ಬಗ್ಗೆ ಏನು ಗೌರವ ಇದೆ ಎಂಬುದಕ್ಕೆ ಇದು ಒಂದೇ ಒಂದು ಉದಾಹರಣೆ. ಇದರ ಬಗ್ಗೆ ಏನಾಯಿತು ಎಂದು ಒಂದು ಎಂಡೋರ್ಸ್‌ಮೆಂಟ್ ಕೂಡ ಇಲ್ಲ. ಇದು ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ಇಂತಹ ಒಂದು

ಭಾವನೆ ನಮ್ಮ ಮಂತ್ರಿಗಳಿಂದ ಹೋಗಬೇಕು. ಈ ಮಂತ್ರಿಗಳಾಗುವುದಿಲ್ಲ ಶಾಸಕರಾದ ಮೇಲೆ. ಅವರೇನೂ ಸ್ವರ್ಗದಿಂದ ಇಳಿದು ಬಂದಿಲ್ಲ. ಶಾಸಕರೊಬ್ಬರು ಖಾಯಿಲೆ ಬಿದ್ದರೂ ಕೂಡ ಒಬ್ಬ ಡಾಕ್ಟರ್ ಬರಲಿಲ್ಲ. ಅದನ್ನು ಗಮನಿಸಿ ಆ ವೈದ್ಯಾಧಿಕಾರಿ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ತುರ್ತು ಕ್ರಮ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡುತ್ತೀರೆಂದು ತಿಳಿದಿದ್ದೆವು. ಆದರೆ ಅವರ ಹಿಂದೆ ಪ್ರತಿಷ್ಠಿತ ವ್ಯಕ್ತಿಗಳು ಯಾರು ಇದ್ದರೋ ಗೊತ್ತಿಲ್ಲ. ಇಲ್ಲದಿದ್ದರೆ ನಮ್ಮ ಮಾನ್ಯ ಮಂತ್ರಿಗಳಿಗೆ ನಾವು ಕಮಿಟಿಯಿಂದ ಬರೆದುಕೊಟ್ಟ ಕಾಗದವನ್ನು ಓದುವುದಕ್ಕೆ ಸ್ವಲ್ಪ ಸಮಾಧಾನ ಇಲ್ಲವೋ ಗೊತ್ತಿಲ್ಲ. ಅಂತು ಇಂತು ಏನೂ ಮಾಡಲಿಲ್ಲಸ್ವಾಮಿ, ಈ ರೀತಿ ಇದೆ. ಈ ರೀತಿ ಆಗಬಾರದು, ಶಾಸಕರಿಗೆ ಗೌರವ ಎಂದರೆ ಅದು ರಾಜ್ಯದ ಗೌರವ. ಶಾಸಕರಿಗೆ ಪೂರ್ತಾ ಗೌರವ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಎರಡನೇಯದ್ದು ತಾವು ಒಂದು ಸರ್ಕ್ಯುಲಾರ್ ಕಳಿಸಿದ್ದೀರಿ. ಏನೆಂದರೆ ಹತ್ತು ದಿವಸ ಬಿ.ಡಿ.ಓ ಜೀಪ್‌ನ್ನು ಸ್ಪೇರ್ ಮಾಡಬೇಕು ಎಂದು. ಬಿ. ಡಿ. ಓ ಜೀಪ್ ಬಗ್ಗೆ ತಮ್ಮ ಕಾನ್ಸಿಟ್ಯೂಯೆನ್ಸಿಯಲ್ಲಿ ಹೇಗೆ ಇದೆಯೋ ಗೊತ್ತಿಲ್ಲ, ಆದರೆ ನಮ್ಮಲ್ಲಿ......

ಶ್ರೀ ಬಿ. ರಾಚಯ್ಯ.—ಶಾಸಕರ ಭವನದಲ್ಲಿ ಇರತಕ್ಕಂಥ ಆಸ್ಪತ್ರೆಯಲ್ಲಿ ವರ್ಷಕ್ಕೆ ಎಷ್ಟು ಹಣ ಖರ್ಚು ಮಾಡಬೇಕಿತ್ತೋ ಅದರ ನಾಲ್ಕರಷ್ಟು ಖರ್ಚು ಮಾಡಿದ್ದೇವೆ ಎಂದು ತಮಗೆ ಕಾಗದ ಬರೆದಿದ್ದೇನೆ. ಬಹುಶ: ಕೊಟ್ಟಂಥ ಬಜೆಟಿನಲ್ಲಿ ಬಹಳ ಕಡಿಮೆ ಇದ್ದರೂ ಕೂಡ ಸುಮಾರು ೬ ಲಕ್ಷ ರೂಪಾಯಿಗಳಷ್ಟು ಔಷಧಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಡಾಕ್ಟರ್‌ಗಳನ್ನು......

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳಿದುದ್ದು. ಬೇರೆ ನಾವು ಕಮಿಟಿಯವರು ಹಾಸನಕ್ಕೆ ಹೋಗಿದ್ದೆವು. ಅಲ್ಲಿ ಶ್ರೀಮತಿ ಜಯಮ್ಮ ಮಲ್ಲಿಕಾರ್ಜುನ ಸ್ವಾಮಿಯವರು ಖಾಯಿಲೆ ಬಿದ್ದರು. ಅವರು ಕದಲುವ ಪರಿಸ್ಥಿತಿಯಲ್ಲಿ ಅವರು ಇರಲಿಲ್ಲ. ಆಗ ಡಿಸ್ಟ್ರಿಕ್ಟ್ ಸರ್ಜನ್ ಅವರಿಗೆ ಹೇಳಿಕಳುಹಿಸಿದೆವು. ಅವರು ಓಪನ್ ಆಗಿ ಬರುವುದಿಲ್ಲ ಎಂದು ಹೇಳಿದರು, ಆರ್. ಎಂ. ಓ ಅವರನ್ನು ಕೇಳಿದಾಗ ನಾನು ಬರುವುದಿಲ್ಲ, ಬೇಕಾದರೆ ಅವರನ್ನೇ ಕರೆದುಕೊಂಡು ಬನ್ನಿ ಎಂದು ಹೇಳಿದರು. ಆಮೇಲೆ Deputy Commissioner used his good offices; He sent a Mission Hospsital doctor and he attended. ನಾವು ಇಲ್ಲಿಗೆ ಬಂದ ಮೇಲೆ ಕಮಿಟಿಯಲ್ಲಿ ಒಂದು ಯುನಾನಿಮಸ್ ರೆಸ್ಯೊಲೇಷನ್ ಪಾಸ್ ಮಾಡಿ ಹೀಗೆ ಈ ವೈದ್ಯಾಧಿಕಾರಿ ಮಿಸ್‌ಬಿಹೇವ್ ಮಾಡಿದ್ದಾರೆ. ಶಾಸಕರ ಬಗ್ಗೆ ಗೌರವ ಕೊಡದೇ ಇದ್ದರೆ ಇನ್ನು ಬೇರೆಯವರ ಬಗ್ಗೆ ಹೇಗೆ ವರ್ತನೆ ಮಾಡಬಹುದು ಎಂದು ಪತ್ರ ಬರೆದಿದ್ದೇವೆ . ಅದನ್ನು ತಾವು ಗಮನಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ಅದನ್ನು ನಾನು ಹೇಳಿದ್ದುದು ಶಾಸಕರ ಗೌರವದ ಬಗ್ಗೆ ನಿರ್ಲಕ್ಷ್ಯ ಮಾಡಬಾರದು ಎಂದು ನಾನು ಹೇಳಿದ್ದುದು. We expected immediate action. From your side.

ಶ್ರೀ ಬಿ. ರಾಚಯ್ಯ.—ನಾನು ಯಾವಾಗಲೂ ಶಾಸಕರ ಬಗ್ಗೆ ಗೌರವಯುತವಾಗಿ ನಡೆದುಕೊಂಡಿದ್ದೇನೆ. ಯಾವ ಸಂದರ್ಭದಲ್ಲಿ ಅಗೌರವವನ್ನು ತೋರಿಸಿದ್ದೇನೋ ಗೊತ್ತಿಲ್ಲ. ಆದರೆ ಈ ವಿಷಯವನ್ನು ನಮ್ಮ ಆರೋಗ್ಯ ನಿರ್ದೇಶಕ ಅವರಿಗೆ ಕಳಿಸಿಕೊಟ್ಟು ಅದನ್ನು ಎನ್‌ಕ್ವೈರಿ ಮಾಡಬೇಕೆಂದು ಕೇಳಿದ್ದೇನೆ. ಎನ್‌ಕ್ವೈರಿ ಆದಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಕಂಪ್ಲೇಂಟ್ ಕೊಟ್ಟರೂ ನಾನು ಓದಿಲ್ಲ ಎಂದು ದಯವಿಟ್ಟು ಹೇಳಬೇಡಿ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಡಿ.ಸಿ. ಯವರನ್ನು ಬೇಕಾದರೆ ಕೇಳಿ. ಡಿ.ಸಿ.ಯವರು ಹೇಳಿದರೂ ಕೇಳಲಿಲ್ಲ. ಏನು ಪ್ರಯೋಜನ ? ಆರು ತಿಂಗಳಾಗಿದೆ, ನಾನು ಹೇಳುತ್ತಿರುವುದು ಶಾಸಕರ ಬಗ್ಗೆ ಇಂತಹ ನಿರ್ಲಕ್ಷ್ಯ ಮಾಡಬಾರದು ಎಂದು ಮಾನ್ಯ ಮಂತ್ರಿಗಳು ಶಾಸಕರು ಎಂದರೆ ನಾನು ಆಗಲೇ ಹೇಳಿದ ಹಾಗೆ ನಮ್ಮ ಪ್ರತಿನಿಧಿಗಳು ಎಂದು. ತಿಳಿದುಕೊಂಡು ನ್ಯಾಯವಾಗಿ ವರ್ತಿಸಬೇಕು.

ಮಾನ್ಯ ಅಧ್ಯಕ್ಷರೇ, ನಮಗೆ ೧೦ ದಿವಸ ಜೀಪು ಕೊಟ್ಟಿದ್ದಾರೆ. ಆ ಜೀಪಿಗೆ ಯಾವಾಗಲೂ ಪೆಟ್ರೋಲ್ ಇರುವುದಿಲ್ಲ, ಬಿ.ಡಿ.ಓ. ಕೇಳಿದರೆ, ಪೆಟ್ರೋಲ್ ಇಲ್ಲವೆಂದು ಹೇಳುತ್ತಾರೆ. ಅಲ್ಲದೆ ೩೧

ದಿವಸದಲ್ಲಿ ೧೫ ದಿವಸ ಕೆಟ್ಟು ಬಿದ್ದಿರುತ್ತದೆ. ಈ ಜೀಪುಗಳಿಂದ ನಮಗೆ ಯಾವುದೇ ಉಪಯೋಗವಾಗುವುದಿಲ್ಲ. ಅದಕ್ಕೋಸ್ಕರ ನಾನು ಒಂದು ಸಲಹೆ ಕೊಡುತ್ತೇನೆ, ಆಂಧ್ರಪ್ರದೇಶದಲ್ಲಿ ಒಂದು ಪದ್ಧತಿ ಇದೆ. ನಮ್ಮ ಮಾನ್ಯ ಸ್ನೇಹಿತರು ಕೂಡ ಹೇಳುತ್ತಿದ್ದರು. ಅಲ್ಲಿ ೭ ದಿವಸ ಒಂದು ಸರ್ಕಾರಿ ವೆಹಿಕಲ್‌ನ್ನು ಎಂ.ಎಲ್.ಎ. ಮನೆ ಹತ್ತಿರ ಕಳುಹಿಸುತ್ತಾರೆ. ಅವರು ೭ ದಿವಸಗಳ ಕಾಲ ಉಪಯೋಗಿಸಬಹುದು. ಆದರೆ ಒಂದು ಕಂಡೀಷನ್ ಹಾಕಿರುತ್ತಾರೆ. ಒಂದು ಮೂವ್‌ಮೆಂಟ್ ರಿಜಿಸ್ಟರ್ ಇಟ್ಟಿರುತ್ತಾರೆ. ಅದರಲ್ಲಿ ಎಲ್ಲವನ್ನೂ ನಮೂದು ಮಾಡಬೇಕು. ಸುಮಾರು ೪೦೦ ಕಿಲೋಮೀಟರ್ ಟೂರ್ ಮಾಡಬಹುದು. ಸಾಧಾರಣವಾಗಿ, ಅವರ ಕ್ಷೇತ್ರದಲ್ಲಿ ಎಲ್ಲವನ್ನೂ ನೋಡಬಹುದು. ಅವರು ಹಾಕಿರುವ ಕಂಡೀಷನ್ ಏನೆಂದರೆ, ವೆಹಿಕಲ್‌ನಲ್ಲಿ ಹೋದ ಎಂ.ಎಲ್.ಎ. ಮೂವ್‌ಮೆಂಟ್‌ನ್ನು ಪೂರ್ತಿಯಾಗಿ ನೋಟ್ ಮಾಡಬೇಕೆಂದು ಹೇಳಿದ್ದಾರೆ. ನೀವೂ ಕೂಡ ದಯವಿಟ್ಟು ಅಂತಹ ಸಿಸ್ಟಂ ಮಾಡಬೇಕು. ಇದರಿಂದ ಶಾಸಕರಿಗೆ ಸಹಾಯವಾಗುತ್ತದೆ. ಈಗ ನಿಮ್ಮ ಸರ್ಕ್ಯುಲರ್ ಏನೋ ಒಳ್ಳೆಯದಿದೆ, ಆದರೆ ಅದು ಸರಿಯಾಗಿ ಇಂಪ್ಲಿಮೆಂಟ್ ಆಗುತ್ತಿಲ್ಲ. ತಾವು ಬಿ.ಡಿ.ಒ.ಗಳಿಗೆ ಕೊಟ್ಟಿರತಕ್ಕ ಜೀಪುಗಳು ಪೂರ್ತಿಯಾಗಿ ಕಂಡಂ ಮಾಡಿ ಭದ್ರಾವತಿಗೆ ಕಳುಹಿಸಕೊಡಬೇಕಾಗಿದೆ. ದಯಮಾಡಿ, ಈ ವ್ಯವಸ್ಥೆಯನ್ನು ತಪ್ಪಿಸಿ, ಆಂಧ್ರದಲ್ಲಿರುವ ರೀತಿ ವ್ಯವಸ್ಥೆ ಮಾಡಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ,

ಮಾನ್ಯ ಅಧ್ಯಕ್ಷರೇ, ಇನ್ನೊಂದು ಡಿಮ್ಯಾಂಡ್ ಬಗ್ಗೆ ಹೇಳಬೇಕಾದರೆ, ಮಾನ್ಯ ಲಕ್ಷ್ಮೀಸಾಗರ್ ಸ್ಪಷ್ಟವಾಗಿ ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ವೆಸ್ಟ್ ಬಂಗಾಳದಲ್ಲಿ ಯಾವ ರೀತಿ ಶಾಸಕರಿಗೆ ಸಂಬಳ ಕೊಡುತ್ತಾರೆಂದು ಪ್ರಶ್ನೆ ಕೇಳಿದರು. ನಾವು ಅವರಿಗೆ ಮಾನಿಟರಿ ಬೆನಿಫಿಟ್ ಕೇಳುವುದಿಲ್ಲ. ಅವರು ಕೊಡುವ ೩ ಸಾವಿರದಲ್ಲಿ ೫೦೦–೬೦೦ ರೂಪಾಯಿಗಳು ಟೆಲಿಫೋನ್ ಬಿಲ್ಲಿಗೆ ಹೋಗುತ್ತದೆ. ನನಗೆ ಈ ಸಾರಿ ೯೫೦ ರೂಪಾಯಿ ಟೆಲಿಫೋನ್ ಬಿಲ್ ಬಂದಿದೆ. ನೀವು ಸುಮ್ಮನೆ ೩ ಸಾವಿರ ಎಂದು ಹೇಳಬಹುದು. ನಾವು, ನಮ್ಮ ಕ್ಷೇತ್ರದಲ್ಲಿ ಪ್ರತಿಯೊಂದು ಭಾಗಕ್ಕೂ ಹೋಗಬೇಕಾಗುತ್ತದೆ. ವೆಸ್ಟ್ ಬಂಗಾಳದಲ್ಲಿ ಕಡಿಮೆ ಕೊಡುತ್ತಾರೆಂದು ಹೇಳಿದ್ದಾರೆ. ಅಲ್ಲಿ ಚುನಾವಣೆಯಲ್ಲಿ ಖರ್ಚು ಮಾಡುವುದು ಅಭ್ಯರ್ಥಿಗಳಲ್ಲ, ಪಾರ್ಟಿಯೇ ಖರ್ಚು ಮಾಡುತ್ತದೆ ಆನಂತರ ಅವನು ಶಾಸಕನಾಗಿ ಬಂದಮೇಲೆ, ಪಾರ್ಟಿಯವರು, ಆಯಾ ಶಾಸಕನ ಸಂಬಳದಲ್ಲಿ ೮೦೦–೯೦೦ ರೂಪಾಯಿಗಳನ್ನು ಮಾತ್ರ ಹಾನರರಿಯಾಗಿ ಕೊಡುತ್ತಾರೆ. ಉಳಿದುದನ್ನು ಪಾರ್ಟಿಗೆ ಹಾಕಿಕೊಳ್ಳುತ್ತಾರೆ ಈ ಸಿಸ್ಟಂ ವೆಸ್ಟ್ ಬಂಗಾಳದಲ್ಲಿ ಇದೆ. ಇಲ್ಲಿ ಎಲ್ಲಾ ಸದಸ್ಯರು ಹೇಳದೇ ಹೋದರೂ, ನಾನು ಹೇಳಲೇಬೇಕಾಗುತ್ತದೆ. ಜನಗಳ ಹಿತದೃಷ್ಟಿಯಿಂದ ಖರ್ಚು ಮಾಡಬೇಕೆಂದು ಹೇಳಿದ್ದಾರಲ್ಲ,

ಶ್ರೀ ಎ, ಲಕ್ಷ್ಮೀಸಾಗರ್.—ಬೇರೆಯವರು ಖರ್ಚು ಮಾಡದೇ ಹೋದರೆ, ಹೋಗಲಿ. ನಮ್ಮ ಮಾನ್ಯ ವೆಂಕಟರಾಮಯ್ಯನವರು ಆ ರೀತಿ ನಡೆದುಕೊಳ್ಳುವುದಕ್ಕೆ ಏನೂ ತೊಂದರೆ ಇಲ್ಲ......

ಶ್ರೀ ಆರ್. ವೆಂಕಟರಾಮಯ್ಯ.—ನಾವು, ನಮ್ಮ ಪಾರ್ಟಿಗೆ ಒಟ್ಟು ೮೦೦ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ರಾಜ್ಯ ಮಟ್ಟಕ್ಕೆ ೫೦೦ ರೂಪಾಯಿಗಳು, ಜಿಲ್ಲಾ ಮಟ್ಟದ ಪಾರ್ಟಿಗೆ ೨೦೦ ರೂಪಾಯಿಗಳು, ತಾಲ್ಲೂಕು ಮಟ್ಟದ ಪಾರ್ಟಿಗೆ ೧೦೦ ರೂಪಾಯಿಗಳು—ಈ ರೀತಿ ತಾವು ಕೊಡುವ ಸಂಭಾವನೆಯಲ್ಲಿ ಕೊಡಬೇಕಾಗಿದೆ. ನಮಗೆ ಇದರಲ್ಲಿ ಮಿಗುವುದು ಏನೂ ಇಲ್ಲ, ನಾನು ಖರ್ಚುಗಳು ಎಷ್ಟು ಬರುತ್ತದೆ ಎಂಬುದಕ್ಕೆ ಹೇಳುತ್ತಿದ್ದೇನೆ. ಇನ್ನು ಮಾಜಿ ಎಂ.ಎಲ್.ಎ.ಗಳು ಒಂದು ಡಿಮ್ಯಾಂಡ್ ಇಟ್ಟಿದ್ದಾರೆ. ಒಬ್ಬರಿಗೆ ಒಂದು ಬಸ್ ಪಾಸ್ ಕೊಡಿ ಎಂದು. ಇದು ಬಹಳ ಅಗತ್ಯ. ಮಾಜಿ ಶಾಸಕರಿಗೆ ಬಸ್ ಪಾಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಿವೃತ್ತಿ ವೇತನ ೩೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಇದನ್ನು ೫೦೦ ರೂಪಾಯಿಗಳಿಗೆ ಏರಿಸಬೇಕೆಂದು ಹೇಳಿದ್ದಾರೆ. ಈ ಎರಡನ್ನೂ ಮಾನ್ಯ ಲಕ್ಷ್ಮೀಸಾಗರ್ ಅವರು ಸಿಂಪಥೆಟಿಕ್ ಆಗಿ ವ್ಯೂ ಮಾಡಿ, ಈ ಎರಡು ಬೇಡಿಕೆಗಳನ್ನು ಈಡೇರಿಸಿ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇನ್ನು ಅವರು ವೆಹಿಕಲ್ ಕೇಳುತ್ತಿದ್ದಾರೆ, ಅದು ಸ್ವಲ್ಪ ಜಾಸ್ತಿಯಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬಸ್ ಪಾಸ್ ಕೊಡುವುದರ ಜೊತೆಗೆ, ಮೆಡಿಕಲ್ ಫೆಸಿಲಿಟಿ ಕೊಡುವ ವ್ಯವಸ್ಥೆಯೂ ಆಗಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಈಗ ನಾಗಾಲ್ಯಾಂಡ್ ರಾಜ್ಯದಲ್ಲಿ ೬೦ ಜನ ಎಂ.ಎಲ್.ಎ.ಗಳು ಇದ್ದಾರೆ. ಅಲ್ಲಿ ಪ್ರತಿಯೊಬ್ಬ ಶಾಸಕರಿಗೂ ಒಂದೊಂದು ಕಾರು ಕೊಟ್ಟು, ೨,೫೦೦ ರೂಪಾಯಿಗಳ

ಅಲೋಯನ್ಸ್ ಕೊಡುತ್ತಿದ್ದಾರೆ. ಜೊತೆಗೆ ಡ್ರೈವರ್‌ನ್ನೂ ಕೊಡುತ್ತಾರೆ. ಪೂರ್ತಿ ಪೀರಿಯಡ್ ಕೊಡುತ್ತಾರೆ. ತಾವು ಒಂದು ಸರ್ಕ್ಯುಲರ್ ಕಳುಹಿಸಿದ್ದೀರಿ. ಶಾಸಕರಿಗೋಸ್ಕರ ಒಂದು ಟೈಪಿಂಗ್ ಪೂಲ್ ಇದೆ, ಅಲ್ಲಿ ಹೋಗಿ ಟೈಪ್ ಮಾಡಿಸಿಕೊಳ್ಳುವುದಿದ್ದರೆ ಅದನ್ನು ಉಪಯೋಗಿಸಿಕೊಳ್ಳಿ ಎಂದು ಹೇಳಿದ್ದೀರಿ. ಇರತಕ್ಕಂಥ ೨೨೫ ಜನ ಶಾಸಕರಲ್ಲಿ ಎಲ್ಲೋ ೨೫ ಜನ ಮಾತ್ರ ಇದನ್ನು ಉಪಯೋಗಿಸಿಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ. ನಾನಂತೂ ಉಪಯೋಗಿಸಿಕೊಂಡಿಲ್ಲ. ಇರುವ ಟೈಪಿಂಗ್ ಪೂಲ್‌ನ್ನು ಜಾಸ್ತಿ ಜನ ಉಪಯೋಗಿಸಿಕೊಳ್ಳದೇ ಇದ್ದರೂ ಬೆಳಿಗ್ಗೆ ೮ ಗಂಟೆ ಹೊತ್ತಿಗೆ, ೨೦ ಜನ ಎಂ.ಎಲ್.ಎ.ಗಳಿಗೆ ಒಬ್ಬ ಸ್ಟೆನೋ ಟೈಪಿಸ್ಟ್ ಬಂದರೆ ನಮ್ಮ ಕೆಲಸ ಸುಗಮವಾಗಿ ಜರುಗುತ್ತದೆ. ಅವರನ್ನು ಉಪಯೋಗಿಸಿಕೊಳ್ಳಬಹುದು. ಇಲ್ಲದೇ ಹೋದರೆ ನಾವು ದಿನವೂ ಬರೆಯಬೇಕಾಗುತ್ತದೆ. ಬರೆದೂ ಬರದೂ ತಮಗೆ ಕೊಡಬೇಕಾಗುತ್ತದೆ. ಆದುದರಿಂದ ಬೆಳಿಗ್ಗೆ ೮ ಗಂಟೆ ಹೊತ್ತಿಗೆ ನಾವು ಇರುವ ಕಡೆಗೆ ಒಬ್ಬರು ಸ್ಟೆನೋ ಟೈಪಿಸ್ಟ್ ಬಂದರೆ, ೨೦ ಜನ ಎಂ.ಎಲ್.ಎ.ಗೆ ಒಬ್ಬರಂತೆ ತಾವು ಅವರನ್ನು ಅಲಾಟ್ ಮಾಡಿದರೆ ನಮ್ಮ ಕೆಲಸ ಸುಗಮವಾಗಿ ಜರುಗುತ್ತದೆ. ಇದರ ಬಗ್ಗೆ ಬಹಳ ಸೀರಿಯಸ್ ಆಗಿ ತಾವು ಯೋಚನೆ ಮಾಡಿ ಸಹಾಯ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಹಾರಾಷ್ಟ್ರದಲ್ಲಿ ಶಾಸಕರಿಗೆ ಪಿ.ಎ.ಗಳು ಇದ್ದಾರೆ, ಅಲ್ಲಿ ಒಬ್ಬ ಸ್ಟೆನೋ ಟೈಪಿಸ್ಟ್ ಕೊಟ್ಟಿದ್ದಾರೆ ಎಂದು ಅವರು ಹೇಳಿದರು. ನಾನು ಅದನ್ನು ಮಾಡಿ ಎಂದು ಹೇಳುವುದಿಲ್ಲ, ನಮಗೆ ಅದು ಬೇಕಾಗಿಲ್ಲ. ಕೊನೆ ಪಕ್ಷ ಇಷ್ಟಾದರೂ ಅನುಕೂಲ ಮಾಡಿಕೊಟ್ಟರೆ, ಆ ಅನುಕೂಲವನ್ನು ನಾವು ಉಪಯೋಗಿಸಿಕೊಳ್ಳಬಹುದೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಲೆಜಿಸ್ಲೇಟರ್ಸ್ ಹಕ್ಕುಗಳ ಬಗ್ಗೆ ಹೇಳಬೇಕಾದರೆ, ತಾವು ನಮ್ಮ ಹಕ್ಕುಗಳನ್ನು ಸಂರಕ್ಷಣೆ ಮಾಡಬೇಕು. ಲೆಜಿಸ್ಲೇಟರ್ಸ್ ಬಗ್ಗೆ ಅಧಿಕಾರಿಗಳು ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಈ ವೇಳೆಗಾಗಲೇ ಅನೇಕ ಸಾರಿ ತಾವು ಸರ್ಕ್ಯುಲರ್ ಕೊಟ್ಟಿದ್ದೀರಿ. ಅದನ್ನು ಪೂರ್ತಿಯಾಗಿ ನಮಗೆ ಅನುಕೂಲವಾಗುವ ಹಾಗೆ ಜಾರಿಯಾಗುವಂತೆ ನೋಡಿಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ.

ಇನ್ನು ಲೆಜಿಸ್ಲೇಟರ್ಸ್ ಹೋಮ್ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಊಟ ಮಾಡಿ ಕಳೆದ ಮೂರು ವರ್ಷದಲ್ಲಿ ನನ್ನ ಆರೋಗ್ಯ ಕಂಪ್ಲೀಟ್ ಆಗಿ ಹೋಗಿದೆ, ಮೊದಲು ನನ್ನ ಆರೋಗ್ಯ ಬಹಳ ಚೆನ್ನಾಗಿತ್ತು. ಈಗ ಅಲ್ಲೇ ಊಟ ಮಾಡಬೇಕು ವಿಧಿ ಇಲ್ಲ.

ಅಧ್ಯಕ್ಷರು.— ನಿಮ್ಮ ಆರೋಗ್ಯ ಕೆಡಬಾರದು ಎಂಬ ದೃಷ್ಟಿಯಿಂದಲೇ ಹೌಸ್ ಕಮಿಟಿ ಇರುವುದು. ಹೋದ ಸಲ ಅದಕ್ಕೆ ಡೆಪ್ಯೂಟಿ ಚೇರ್ಮೆನ್‌ರವರು ಅಧ್ಯಕ್ಷರಾಗಿದ್ದರು. ಈ ಸಲ ಡೆಪ್ಯುಟಿ ಸ್ಪೀಕರ್‌ರವರು ಅಧ್ಯಕ್ಷರಾಗಿದ್ದಾರೆ. ಈ ಕಮಿಟಿಗೆ ಈ ಸಭೆಯಿಂದ ಎಂಟು ಜನ, ಆ ಸಭೆಯಿಂದ ೪ ಜನ ಸದಸ್ಯರು ಇದ್ದಾರೆ. ಹೋದ ವರ್ಷ ನನಗೆ ಮಾಹಿತಿ ಬಂದ ಪ್ರಕಾರ ಮೇನ್ ಕಮಿಟಿಯವರು ೨೦ ದಿವಸ ಮೀಟಿಂಗ್ ಮಾಡಿರುತ್ತಾರೆ. ಸಬ್ ಕಮಿಟಿಯವರು ೨೯ ದಿವಸ ಮೀಟಿಂಗ್ ಮಾಡಿರುತ್ತಾರೆ. ಒಟ್ಟು ೪೯ ದಿವಸ ಮೀಟಿಂಗ್ ಮಾಡಿರುತ್ತಾರೆ. ಇದು ನಿಮ್ಮ ಸಲುವಾಗಿ, ಆರೋಗ್ಯ ಕೆಡಿಸುವುದು, ಚೆನ್ನಾಗಿ ಇಟ್ಟುಕೊಳ್ಳುವುದು ನಿಮ್ಮ ಕೈಯಲ್ಲಿ ಇದೆ. ನಿಮಗೇ ಅಧಿಕಾರ ಕೊಟ್ಟಿದ್ದೇವೆ. ನೀವು ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಇರುತ್ತೀರಿ, ಹೌಸ್ ಕಮಿಟಿ ಮೆಂಬರ್ಸ್ ಸಹ ಅಲ್ಲೇ ಇರುತ್ತಾರೆ. ಅವರ ಹತ್ತಿರ ಹೇಳಿರಿ. ಕಮಿಟಿಯಲ್ಲಿ ಆಗಲಿಲ್ಲ ಎಂದರೆ ನಾನು ಆ ಮೇಲೆ ನೋಡುತ್ತೇನೆ. ನಿಮಗೇ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಸೊರಕೆಯವರು ಏನೋ ಹೇಳಿದರು. ನಿಜವಾಗಿಯೂ ಅವರು ಯುವಕರು ಅಂತಹವರಾದರೂ ಬಂದು ನಮ್ಮ ರೂಮುಗಳನ್ನು ನೋಡಲಿ; ರೂಮ್ ಬಾಯ್ಸ್ ಬರುತ್ತಾರೋ ಇಲ್ಲವೋ ನೋಡಲಿ.

ಅಧ್ಯಕ್ಷರು.— ಹೊಸ ಹೌಸ್ ಕಮಿಟಿ ಮೆಂಬರ್ಸ್ ಏನೋ ಹೇಳುತ್ತಾರೆ ನೋಡಿ.

ಶ್ರೀ ವಿನಯಕುಮಾರ್ ಸೊರಕೆ.— ಆರೋಗ್ಯದ ವಿಚಾರದಲ್ಲಿ, ವೈದ್ಯಾಧಿಕಾರಿಗಳ ಮಟ್ಟಿಗೆ ಮೆಡಿಸಿನ್ಸ್ ಸಿಗುವುದಿಲ್ಲ ಎಂಬುದರ ಬಗ್ಗೆ ಹಾಗೂ ಇನ್ನೂ ಕೆಲವೊಂದು ಲೋಪ ದೋಷಗಳ ಬಗ್ಗೆ ಮೊನ್ನೆ ನಾವು ಹೆಲ್ತ್ ಸೆಕ್ರೆಟರಿಯವರನ್ನು ಕರೆಯಿಸಿ ಚರ್ಚೆ ಮಾಡಿದ್ದೇವೆ. ಸಂಬಂಧಪಟ್ಟ ಡಿ.ಹೆಚ್.ಓ. ಅವರನ್ನು ಕರೆಯಿಸಿ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಇದೇ ರೀತಿ ಪ್ರತಿಯೊಂದು ಹಂತದಲ್ಲೂ ಕೂಡಾ ಒಂದೊಂದು ಮೀಟಿಂಗ್‌ನಲ್ಲಿ ಒಂದೊಂದು ವಿಚಾರ

ತೆಗೆದುಕೊಳ್ಳುತ್ತೇವೆ. ಲಘು ಉಪಾಹಾರ ಮಂದಿರಗಳ ಬಗ್ಗೆ ಹೋಟೆಲ್‌ಗಳ ಬಗ್ಗೆ ಈ ರೀತಿ ಒಂದೊಂದಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.— ಈ ವಿಚಾರ ಬಿಟ್ಟು ಬೇರೆ ಏನಾದರೂ ಮಾತನಾಡಿ, ನೀವು ೧೩ ಮಂದಿ ಕೂಡಿ ಕೊಂಡು ಮಾತನಾಡಿ.

ಶ್ರೀ ಐ. ಬಿ. ಶಂಕರ್.— ರೂಮ್ ಬಾಯ್ಸ್ ಇಲ್ಲದೇ ಹೋದರೆ ನಮಗೆ ಅನುಕೂಲ ವಾಗುತ್ತದೆ, ನಾವೇ ಯಾರಾದರೂ ಹುಡುಗರನ್ನು ಇಟ್ಟುಕೊಳ್ಳುತ್ತೇವೆ.

ಅಧ್ಯಕ್ಷರು.— ಆಮೇಲೆ ನಿಮಗೆ ಕೊಡುತ್ತೇನೆ. ತಾಳಿ

ಶ್ರೀ ಆರ್. ವೆಂಕಟರಾಮಯ್ಯ.— ಇನ್ನು ಶಾಸಕರಿಗೆ ಡಿಸ್ಕ್ರಿಷನರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ, ಒಬ್ಬೊಬ್ಬ ಶಾಸಕರಿಗೆ ಒಂದು ವರ್ಷಕ್ಕೆ ೧೦ ಲಕ್ಷ ರೂಪಾಯಿನಂತೆ, ಅವರ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಖರ್ಚು ಮಾಡುವುದಕ್ಕೆ ಒಂದು ಅಮೌಂಟನ್ನು ಕೊಡಬೇಕೆಂದು ಮೊದಲಿನಿಂದಲೂ ನಾನು ಹೇಳುತ್ತಿದ್ದೇನೆ. ನಾನು ಹೇಳುತ್ತಿರುವುದು ನಮಗೋಸ್ಕರ ಅಲ್ಲ. ನಾವು ಎಲ್ಲೋ ಒಂದು ಕಡೆ ಹೋಗುತ್ತೇವೆ.

ಅಧ್ಯಕ್ಷರು.— ಚೀಫ್ ಮಿನಿಸ್ಟರ್ ಫಂಡ್ ತರಹ ಎಂ.ಎಲ್.ಎ. ಫಂಡ್ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.— ಇದರಲ್ಲಿ ನಮಗೆ ಒಂದು ರೂಪಾಯಿ ಕೊಡಬೇಡಿ.

ಶ್ರೀ ಎ. ಲಕ್ಷ್ಮೀಸಾಗರ್.— ಇವತ್ತು ಹತ್ತು ಲಕ್ಷ ರೂಪಾಯಿ. ನಾಳೆ ೧೫ ಲಕ್ಷ ರೂಪಾಯಿ. ಆಮೇಲೆ ೫೦ ಲಕ್ಷ ರೂಪಾಯಿ ಡಿಸ್ಕ್ರಿಷನರಿಯಾಗಿ ಕೊಡಿ ಎಂದು ಕೇಳುತ್ತೀರಿ, ಅದಕ್ಕೆ ನೋ ಆಡಿಟ್, ನೋ ಅಬ್ಜೆಕ್ಷನ್, ನೋ ಅಕೌಂಟಿಂಗ್.

SRI. R. VENKATARAMAIAH.— With all accounts, audit and subject to all rules of the Government only, ನಾನು ಹೇಳುವುದು ಒಂದು ಕಡೆ ನಾವು ಹೋಗುತ್ತೇವೆ. ಅಲ್ಲಿ ಒಂದು ಕೆರೆ ಒಡೆದು ಹೋಗಿದೆ ಎಂದು ಹೇಳುತ್ತಾರೆ ಆಗ ನಾವು ಅದನ್ನು ಸರಿ ಮಾಡಿ ಕೊಡಿ ಎಂದೂ ಎಗ್ಸಿಕ್ಯೂಟೀವ್ ಇಂಜಿನೀಯರ್‌ರವರಿಗೆ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಡಿಸ್‌ಕ್ರಿಶನರಿಯಾಗಿ ಖರ್ಚು ಮಾಡುವುದಕ್ಕೆ ಮಂತ್ರಿಗಳಿಗೆ ಇಲ್ಲ, ತಮಗಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೂ ಅವಕಾಶ ಇಲ್ಲ, ಯಾರಿಗೂ ಇಲ್ಲ...

ಶ್ರೀ ಆರ್. ವೆಂಕಟರಾಮಯ್ಯ.— ನಾನು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು... ನಮಗೆ ಡಿಸ್‌ಕ್ರಿಶನರಿ ಫಂಡ್ ಕೊಡಿ ಎಂದು ಹೇಳುತ್ತಿಲ್ಲ. ನಮಗೆ ಅದು ಬೇಡ. ಈಗ ಒಂದು ರಸ್ತೆ ಕೆಟ್ಟಿರುತ್ತದೆ. ನಮಗೆ ಒಂದು ರೂಪಾಯಿ ಅದರಿಂದ ಬೇಡ ಒಂದು ಪೈಸೆ ಸಹ ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.— ಈಗ ಹೇಳಿದಿರಿ ಡಿಸ್‌ಕ್ರಿಶನರಿ ಫಂಡ್ ಕೊಡಬೇಕೆಂದು.

ಶ್ರೀ ಆರ್ ವೆಂಕಟರಾಮಯ್ಯ.— ನಾನು ಹೇಳುವುದನ್ನು ಸ್ವಲ್ಪ ಕೇಳಿ ಸ್ವಾಮಿ ಅವಸರ ಏತಕ್ಕೆ ಮಾಡುತ್ತೀರಿ ?

ಅಧ್ಯಕ್ಷರು.— ನೀವೇತಕ್ಕೆ ತೆಗೆದುಕೊಳ್ಳುತ್ತೀರಿ ? ಎಲ್ಲಾ ಹಳ್ಳಿಗಳಿಂದ ಜನ ಬರುತ್ತಾರೆ ನಮಗೆ ಕೊಡಿ ನಮಗೆ ಕೊಡಿ ಎಂದು ದಿನವಿಡೀ ಜಗಳ ಮಾಡಬೇಕಾಗುತ್ತದೆ, ನಿಮಗೆ ಬೇಡ ಬಿಡಿ.

ಶ್ರೀ ಆರ್. ವೆಂಕಟರಾಮಯ್ಯ.— ಸ್ವಲ್ಪ ಹಣ ಕೊಟ್ಟರೆ ಒಂದು ಕಡೆ ಒಂದು ಕೆರೆ ಒಡೆದು ಹೋಗಿರುತ್ತದೆ ಅದನ್ನು ರಿಪೇರಿ ಮಾಡುವುದಕ್ಕೆ ಎರಡೂವರೆ ವರ್ಷವಾಗುತ್ತದೆ. ಅದಕ್ಕೆ ದಯ ಮಾಡಿ ಸ್ವಲ್ಪ ಹಣ ಕೊಟ್ಟರೆ ನಮ್ಮ ಕ್ಷೇತ್ರದಲ್ಲಿ ಖರ್ಚು ಮಾಡಬಹುದು, ನಮ್ಮ ಸ್ವಂತಕ್ಕೆ ಬೇಡ ಸ್ವಾಮಿ, ಒಂದು ಪೈಸೆ ಕೊಡಬೇಡಿ. Only subject to all rules and conditions ನಾನು ಕೇಳುವುದು. ನನಗೆ ಕೊಡಿ ಎಂದು ನಾನೇತಕ್ಕೆ ಕೇಳಲಿ. ಆ ಪಾಪದ ಕೆಲಸ ನಮಗೆ ಬೇಡ. ನಾನು ಹೇಳಿದ್ದಕ್ಕೆ ಅವರು ತಪ್ಪು ತಿಳಿದುಕೊಂಡಿದ್ದಾರೆ. ಇನ್ನು ನಾನು ರೇಷ್ಮೆ ವ್ಯವಸಾಯದ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಹಾಗೂ ಬೆಂಗಳೂರು ಜಿಲ್ಲೆಯಲ್ಲಿ ಇದು ವ್ಯಾಪಕವಾಗಿ ಹರಡಿದೆ.

ಈಗೀಗ ತುಮಕೂರು ಜಿಲ್ಲೆಗೂ ಹಬ್ಬಿದೆ. ಈ ಇಲಾಖೆ ಮಂತ್ರಿಗಳು ಮಾನ್ಯ ಲಕ್ಷ್ಮೀಸಾಗರ್ ಅವರು ಆಗಿರುವುದು ತುಂಬಾ ಸಂತೋಷ. ನಾನಿಲ್ಲಿ ಒಂದು ದೊಡ್ಡ ಹಗರಣ ಹೇಳುತ್ತೇನೆ. ಆ ಹಗರಣ ಬಿಡಿಸುವುದಕ್ಕೆ ಅವಕಾಶ ಇದೆ. ಅವರು ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮಗೆ ಇದರ ಬಿತ್ತನೆ ಬಹಳ ಮುಖ್ಯ ಸ್ವಾಮಿ. ಇಲ್ಲಿ ಏನಾಗಿದೆ ನಮಗೆ ಕೆಟ್ಟ ಕಳಪೆ ಬಿತ್ತನೆ ಕೊಟ್ಟು ರೈತರನ್ನು ಹಾಳು ಮಾಡುತ್ತಿದ್ದಾರೆ, ಈ ಬಿತ್ತನೆ ಕೋಠಿಗಳಲ್ಲಿ ಏರ್ ಕಂಡೀಷನ್ ಮಾಡಬೇಕೆಂದು ಒಂದು ಪ್ಲಾನ್ ಮಾಡಿದರು. ಇದಕ್ಕೆ ಮೂರು ಫರ್ಮುಗಳವರು ಅಪ್ಲೈ ಮಾಡಿದರು. ಒಂದು ಬ್ಲೂಸ್ಟಾರ್ ಇನ್ನೊಂದು ಮೆರುಬನಿ ಎಂದು ಇನ್ನೊಂದು ಕಂಪನಿ ಬೇರೆಯದು. ಈ ಮರುಬನಿ ಕಂಪನಿಯವರು ೧೦ ಕೋಟಿ ರೂಪಾಯಿಗಳಿಗೆ ಅಪ್ಲೈ ಮಾಡಿದರು, ೧೨ ಕೋಟಿ ರೂಪಾಯಿಗಳಿಗೊಂದು ೧೪.೪೦ ಕೋಟಿ ರೂಪಾಯಿಗಳಿಗೊಂದು ಕಂಪನಿಯವರು ಅಪ್ಲೈ ಮಾಡಿಕೊಂಡರು. ಅದೀಗ ೧೪.೪೦ ಕೋಟಿ ರೂಪಾಯಿಗಳಿಗೆ ಅಪ್ರೂವ್ ಆಯಿತು. ಅದು against dollor ಅದು ೧೪.೪೦ ಕೋಟಿ ರೂಪಾಯಿಗಳು ಅದು against dollor ಆಯಿತು. ಮಾನ್ಯ ಅಧ್ಯಕ್ಷರೆ ತಮಗೆ ಆಶ್ಚರ್ಯವಾಗಬಹುದು. ಈ ವೇಳೆಗೆ ಅದು ಇಂಪ್ಲಿಮೆಂಟ್ ಆಗಿಲ್ಲ. ಈಗ ಆ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ೨೫ ಕೋಟಿ ರೂಪಾಯಿಗಳಾಗುತ್ತದೆ. ಈ ಮೋಸಕ್ಕೆ ಯಾರು ಕಾರಣರು ? ಇಲ್ಲಿ ಏನೋ ಜರುಗಿದೆ. ದುರಾದೃಷ್ಟವಶಾತ್ ಈ ರೇಷ್ಮೆ ಇಲಾಖೆಗೆ. ಮೊದಲು ಕೃಷ್ಣಾ ರೆಡ್ಡಿಯವರು ಮಂತ್ರಿಗಳಾಗಿದ್ದರು, ವೈ.ಕೆ. ರಾಮಯ್ಯನವರು ಮಂತ್ರಿಗಳಾಗಿದ್ದರು, ಆ ಮೇಲೆ ಮುನಿಯಪ್ಪನವರು ಮಂತ್ರಿಗಳಾಗಿದ್ದರು, ಈಗ ಮಾನ್ಯ ಸಾಗರ್‌ರವರ ಮೇಲೆ ಬಿದ್ದಿದೆ. ಮಾನ್ಯ ಮಂತ್ರಿಗಳು ಧೈರ್ಯ ಮನಸ್ಸು ಮಾಡಿ ಈ ಬಗ್ಗೆ ತನಿಖೆ ಮಾಡಬೇಕು ? ಆಗ ಇಲ್ಲಿ ನಡೆದಿರುವ ಭ್ರಷ್ಟಾಚಾರ ಸ್ಪಷ್ಟವಾಗಿ ಗೊತ್ತಾಗಿದೆ ನಾನು ಈ ಬಗ್ಗೆ ಆಪಾದನೆ ಮಾಡುತ್ತಿದ್ದೇನೆ. ದಯಮಾಡಿ ಎನ್‌ಕ್ವೈರಿ ಮಾಡಿ. ೧೪.೪೦ ಕೋಟಿ ಇರುವುದು ಈಗ ೨೫ ಕೋಟಿ ರೂಪಾಯಿಗಳಾಗಿದೆ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇದಕ್ಕೆ ಯಾರು ಕಾರಣರು ? ಇಲ್ಲಿ ಸುಮಾರು ೧೫ ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗುತ್ತದೆ. ಇದರ ಬಗ್ಗೆ ಪೂರ್ಣ ತನಿಖೆ ಮಾಡಿಸಬೇಕು. ತಪ್ಪಿತಸ್ಥರನ್ನು ಬಲಿ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾನು ನಿನ್ನೆಯ ದಿವಸ ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಬಗ್ಗೆ ಮಾತನಾಡಿದ್ದೇನೆ. ಆದ್ದರಿಂದ ಈಗ ಮಾತನಾಡುವುದಿಲ್ಲ. ಇನ್ನು ಈ ಇಲಾಖೆಯಲ್ಲಿ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಇಲ್ಲಿ ತಮಗೆಲ್ಲಾ ತಿಳಿದ ಹಾಗೆ ೨೦೦–೮೦೦ ರೂಪಾಯಿಗಳಿಗೆ ಮಾರಾಟ ಮಾಡಬೇಕಾಗಿದ್ದನ್ನು ೩೦೦–೪೦೦ ರೂಪಾಯಿಗಳಿಗೆ ಮಾರಾಟ ಮಾಡಿ ಸರ್ಕಾರಕ್ಕೆ ನಷ್ಟ ಮಾಡಿದ್ದಾರೆ. ದಯಮಾಡಿ ಇದರ ಬಗ್ಗೆ ಸ್ವಲ್ಪ ತಾವು ಆಕ್ಷನ್ ತೆಗೆದುಕೊಳ್ಳಬೇಕು. ಇಲ್ಲಿ ಓಪನ್ ಫ್ರಾಡ್ ನಡೆಯುತ್ತಿದೆ. ಇದರಿಂದ ಸರ್ಕಾರಕ್ಕೆ ೩–೪ ಕೋಟಿ ರೂಪಾಯಿಗಳು ನಷ್ಟವಾಗಿದೆ,

೧–೩೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ವಕೀಲರಿದ್ದಾರೆ. ಯಾವುದಾದರೂ ಸ್ಪೆಸಿಫಿಕ್ ಆಗಿದ್ದರೆ ಹೇಳಿ ನನಗೆ ಸಹಾಯ ಮಾಡಬೇಕೆಂದು ಕೇಳುತ್ತೇನೆ. ಅವರು ಏನಾದರೂ ಹೇಳಿದರೆ ಅದು ಕ್ಲಿಪ್ತವಾಗಿ ನಿರ್ದಿಷ್ಟವಾಗಿ ಇರಬೇಕು. It is not just a passing reference. ಎಲ್ಲಿ ಏನಾಗಿದೆ ಎಂಬುದನ್ನು ಹೇಳಿ ತಪ್ಪು ಮಾಡಿ ಯಾರೂ ತಪ್ಪಿಸಿಕೊಂಡು ಹೋಗುವ ಹಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಸ್ಪೆಸಿಫಿಕ್ ಆಗಿ ಹೇಳುತ್ತಿದ್ದೇನೆ. ಎನ್‌ಕ್ವೈರಿ ಮಾಡಲಿ ಎಲ್ಲಾ ಗೊತ್ತಾಗುತ್ತದೆ. ಕೋಲ್ಡ್ ಸ್ಟೋರೇಜ್ ಕೋಠಿಯನ್ನು ಮಾಡುವುದಕ್ಕೆ ಕರೆದಿದ್ದ ಟೆಂಡರ್‌ಗೆ ''ಲಕ್ಕಿ ಗೋಲ್ಡ್ ಸ್ಟಾರ್ ಕಂಪನಿ''ಯವರು ೧೦ಕೋಟಿ ರೂಪಾಯಿಗಳಿಗೆ ಮಾಡುತ್ತೇವೆಂದು ವೆಂದು ಹೇಳಿದ್ದರು. ''ಬ್ಲೂ ಸ್ಟಾರ್ ಕಂಪನಿ 'ಯವರು ೧೨.೩೦ ಕೋಟಿರೂಪಾಯಿಗಳಿಗೆ ಮಾಡುತ್ತೇ ಹೇಳಿದ್ದರು ''ಮೆರು ಬಾನಿ'' ಕಂಪನಿಯವರು ೧೪.೪೦ ಕೋಟಿ ರೂಪಾಯಿಗಳಿಗೆ ಮಾಡುತ್ತೇವೆಂದು ಹೇಳಿದ್ದರು. ಮೆರುಬಾನಿ ಕಂಪನಿಯವರ ಟೆಂಡರ್ ಬೆಲೆ ಜಾಸ್ತಿ ಇದ್ದರೂ ಅದನ್ನು ಒಪ್ಪಿಕೊಂಡಿದ್ದರು, ಆದರೆ, ಕೆಲಸವನ್ನು ಮಾಡುವುದಕ್ಕೆ ಅನುಮತಿಯನ್ನು ಕೊಡಲಿಲ್ಲ. ಈಗ ಅದೇ ರೇಷ್ಮೆ ಕೋಠಿಯನ್ನು ಮಾಡಿಸಬೇಕಾದರೆ ೨೫ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಮೊದಲೇ ಈ

ಕೆಲಸವನ್ನು ಮಾಡಿಸಿದ್ದಿದ್ದರೆ ಈಗ ೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಅವಶ್ಯಕತೆ ಇರಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಯಾವ ಅಧಿಕಾರಿ ಇದಕ್ಕೆ ಕಾರಣವಾಗಿದ್ದಾರೆಂದು ಅವರ ಹೆಸರು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಈ ವ್ಯವಹಾರವನ್ನು ಯಾವ ಅಧಿಕಾರಿ ನಡೆಸುತ್ತಾರೋ ಅವರೇ ಈ ಕೆಲಸವನ್ನು ಮಾಡಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳೇ ಆಗಲೀ, ಅಧಿಕಾರಿಗಳೇ ಆಗಲೀ ಅಥವಾ ಬೇರೆ ಯಾರೇ ಆಗಲೀ ತಪ್ಪು ಮಾಡಿದ್ದರೆ, ಇಂಥ ತಪ್ಪುಗಳನ್ನು ಇಂಥವರು ಮಾಡಿದ್ದಾರೆಂದು ಸ್ಪಷ್ಟವಾಗಿ ಹೆಸರು ಹೇಳಿದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ವ್ಯವಹಾರವನ್ನು ಯಾವ ಅಧಿಕಾರಿಗಳು ನಡೆಸುತ್ತಾರೋ ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳಿ. ನೀವು ಬುದ್ಧಿವಂತರು. ನಿಮಗೆ ಎಲ್ಲಾ ಗೊತ್ತಿದೆ.

ಅಧ್ಯಕ್ಷರು.—ಸುಮ್ಮನೆ ವೇಗ್ ಆಗಿ ಹೇಳಿದರೆ ಅವರು ಏನು ಮಾಡುವುದಕ್ಕಾಗುತ್ತದೆ. ಸ್ಪಷ್ಟವಾಗಿ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಧಿಕಾರಿಗಳು ಈ ನಷ್ಟಕ್ಕೆ ಕಾರಣರಾಗಿದ್ದಾರೆ, ಅಧಿಕಾರಿಗಳು ಲಂಚ ಹೊಡೆದಿದ್ದಾರೆ ಎಂದು ಹೇಳಿದರೆ ನಾನು ಯಾವ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಲಿ ? ಸ್ಪೆಸಿಫಿಕ್ ಆಗಿ ಇಂಥ ಅಧಿಕಾರಿ ಲಂಚ ಹೊಡೆದಿದ್ದಾನೆಂದು ಹೇಳಿದರೆ ನಾವು ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾನು ಇವರಲ್ಲಿ ವಿಶೇಷವಾಗಿ ಭಿನ್ನವಿಸಿಕೊಳ್ಳುವುದೇನೆಂದರೆ ಸುಮ್ಮನೆ ಜನರಲ್ ಆಗಿ ಅಧಿಕಾರಿಗಳು ಲಂಚ ತಿನ್ನುತ್ತಾರೆಂದು ಹಣ ಸೋರಿ ಹೋಗುತ್ತಿದೆ ಎಂದು ಹೇಳಿದರೆ ಆಗುವುದಿಲ್ಲ, ಹಣ ಸೋರಿ ಹೋಗುತ್ತಿದೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಮಾನ್ಯ ಸದಸ್ಯರಿಗೆ ಗೊತ್ತಿರುವ ಮಾಹಿತಿಗಳನ್ನು ನನಗೆ ಹೇಳಿದರೆ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಒಂದು ಪಕ್ಷ ಮಾನ್ಯ ಸದಸ್ಯರಿಗೆ ಈ ಸದನದಲ್ಲಿ ಅವರ ಹೆಸರು ಹೇಳುವುದಕ್ಕೆ ಇಷ್ಟ ಇಲ್ಲದಿದ್ದರೆ ಅವರು ಒಂದು ಪತ್ರದಲ್ಲಿ ಎಲ್ಲಾ ವಿವರಗಳನ್ನು ಬರೆದು ನನ್ನ ಗಮನಕ್ಕೆ ತಂದರೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.—ನಿಮಗೆ ಧೈರ್ಯ ಇದ್ದರೆ ಇದರ ಬಗ್ಗೆ ತನಿಖೆ ಮಾಡಿಸಿ. ಮೆರು ಬಾನಿ ಕಂಪನಿಯವರು ೧೪.೪೦ ಕೋಟಿ ರೂಪಾಯಿಗಳಿಗೆ ಕೊಟ್ಟಿದ್ದ ಟೆಂಡರನ್ನು ಒಪ್ಪಿಕೊಂಡ ಮೇಲೂ ಅವರಿಗೆ ಕೆಲಸವನ್ನು ಏಕೆ ಮಾಡಿಸಲಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ಕೋಲ್ಡ್ ಸ್ಟೋರೇಜ್ ಕೋರಿ ಮಾಡುವ ವ್ಯವಹಾರದಲ್ಲಿ ಬೋರ್ಡ್ ಅಧಿಕಾರಿಗಳು ಹಣವನ್ನು ತಿಂದಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಲೇ ಇದ್ದಾರೆ ಅವರ ಹೆಸರನ್ನು ಹೇಳಲಿ ನಾನು ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರ ಹೆಸರುಗಳನ್ನು ನಾನು ಹೇಳಬೇಕೇ ? ಸಂಬಂಧಪಟ್ಟ ಫೈಲನ್ನು ತರಿಸಿ ನೋಡಿ ನಿಮಗೇ ಗೊತ್ತಾಗುತ್ತದೆ.

ಅಧ್ಯಕ್ಷರು.—ಸದಸ್ಯರುಗಳು ಜವಾಬ್ದಾರಿಯಿಂದ ಹೇಳಬೇಕು, ಇಂಥವರು ಹಣವನ್ನು ತಿಂದಿದ್ದಾರೆಂದು ಡೆಫನೆಟ್ ಆಗಿ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಕೆಲಸಕ್ಕೆ ಒಬ್ಬರು ೧೦ ಕೋಟಿಗೆ ಟೆಂಡರ್ ಹಾಕಿದ್ದಾರೆ, ಇನ್ನೊಬ್ಬರು ೧೨.೫೦ ಕೋಟಿಗೆ ಹಾಕಿದ್ದಾರೆ ಮತ್ತೊಬ್ಬರು ೧೪.೪೦ ಕೋಟಿ ರೂಪಾಯಿಗಳಿಗೆ ಹಾಕಿದ್ದಾರೆ. ೧೦ ಕೋಟಿಗೆ ಟೆಂಡರ್ ಕೊಟ್ಟವರನ್ನು ಬಿಟ್ಟು ೧೪.೪೦ ಕೋಟಿ ರೂಪಾಯಿಗಳಿಗೆ ಟೆಂಡರ್ ಹಾಕಿದವರಿಗೆ ಕೊಟ್ಟರೆ ೪.೪೦ ಕೋಟಿ ನಷ್ಟ ಆದ ಹಾಗೆ ಆಯಿತು. ಈ ನಷ್ಟಕ್ಕೆ ಕಾರಣ ಯಾರು ? ೧೪.೪೦ ಕೋಟಿ ಟೆಂಡರ್ ಹಾಕಿದವರಿಗೇ ಕೆಲಸ ಕೊಟ್ಟು ಮಾಡಿಸಲೂ ಇಲ್ಲ. ಈಗ ಅದೇ ಕೆಲಸವನ್ನು ಮಾಡಿಸಲು ೨೫ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಂದರೆ, ಈಗ ಕೆಲಸ ಮಾಡಿಸಿದರೆ ೧೩ ಕೋಟಿ ರೂಪಾಯಿ ತಗಲುವ ಕಡೆ ೨೫ ಕೋಟಿ ರೂಪಾಯಿ

ತಗಲುತ್ತದೆ. ಸುಮಾರು ೧೫ ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗುವುದಕ್ಕೆ ಯಾರು ಕಾರಣರಾಗಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆ ಮೇಲೆ, ಮಾನ್ಯ ಅಧ್ಯಕ್ಷರೇ, ರೇಷ್ಮೆ ಬೆಳೆಗೆ ಹಾನಿ ಮಾಡುವ ಊಜಿ ನೊಣದ ಹಾವಳಿಯನ್ನು ಇನ್ನೂ ತಡೆಗಟ್ಟುವುದಕ್ಕೆ ಆಗಿಲ್ಲ. ಇದರ ಜೊತೆಗೆ ಸಪ್ಪೆ ರೋಗ, ಸುಣ್ಣಕಟ್ಟು ರೋಗಗಳು ರೇಷ್ಮೆ ಬೆಳೆಗೆ ಹಾನಿಕಾರಕವಾಗಿವೆ. ಈ ರೋಗಗಳನ್ನು ತಡೆಗಟ್ಟುವುದಕ್ಕೆ ಸರಿಯಾದ ಔಷಧಿಗಳನ್ನು ಇನ್ನೂ ಕಂಡುಹಿಡಿದಿಲ್ಲ. ಆದಷ್ಟು ಬೇಗ ಈ ರೋಗಗಳಿಗೆ ಔಷಧಗಳನ್ನು ಕಂಡುಹಿಡಿಯುವುದಕ್ಕೆ ಸರ್ಕಾರ ಏರ್ಪಾಡು ಮಾಡಬೇಕು. ರೇಷ್ಮೆ ಬೆಳೆಯುವ ಬಗ್ಗೆ ಎಕ್ಸ್‌ಪರ್ಟ್ಸ್‌ಗಳು ಇದ್ದಾರೆ. ಅವರುಗಳನ್ನು ಕರೆಯಿಸಿ ಯಾವ ರೀತಿ ಈ ರೋಗಗಳನ್ನು ತಡೆಗಟ್ಟಬಹುದೆಂಬ ವಿಚಾರ ಮಾಡಿ ರೇಷ್ಮೆ ಬೆಳೆಗಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು ಆ ಮೇಲೆ ನ್ಯಾಯಾಂಗದ ಬಗ್ಗೆ ಒಂದೈದು ನಿಮಿಷ ಮಾತನಾಡುತ್ತೇನೆ. ಇದರ ಬಗ್ಗೆ ಹೇಳಬೇಕಾದರೆ, Justice delayed is Justice denied.

SRI A LAKSHMISAGAR.—Justice hurried is justice burried.

ಶ್ರೀ ವೆಂಕಟರಾಮಯ್ಯ,—ಈಗ ಬರಿಯೂ ಇಲ್ಲ ಹರಿಯೂ ಇಲ್ಲದಂತಾಗಿದೆ. ಅವರು ಕೊಟ್ಟ ಲೆಕ್ಕಗಳನ್ನು ನಾನು ಈಗ ಓದುತ್ತೇನೆ ಅದರ ಪ್ರಕಾರ ಸೆಷನ್ ಕೋರ್ಟ್‌ಗಳಲ್ಲಿ ಸಿವಿಲ್ ಮೊಕದ್ದಮೆಗಳು ಇರುವುದು ೨೦,೫೫೦, ಕ್ರಿಮಿನಲ್ ಮೊಕದ್ದಮೆಗಳು ಜಿಲ್ಲಾ ಕೋರ್ಟಿಗಳಲ್ಲಿ ಇರುವುದು, ೨೧೧೦ ಕ್ರಿಮಿನಲ್ ಮೊಕದ್ದಮೆಗಳು ಎಂದರೆ, ಮರ್ಡರ್ ಮುಂತಾದ ದೊಡ್ಡ ಕೇಸ್‌ಗಳು ಸಿವಿಲ್ ನ್ಯಾಯಾಲಯಗಳಲ್ಲಿ ೪ ೪೧೦ ಈ ರೀತಿಯಾಗಿ ಕೊಟ್ಟಿದ್ದಾರೆ, ಹೆಚ್ಚಿಗೆ ನಾನು ಓದುವುದಕ್ಕೆ ಹೋಗುವುದಿಲ್ಲ. ರಾಜ್ಯದಲ್ಲಿರುವ ಹೈಕೋರ್ಟ್ ಜಡ್ಜಸ್‌ಗಳನ್ನು ಜಾಸ್ತಿ ಮಾಡಿ ಪೂರ್ತಿ ಕೋಟಾ ಏನಿದೆ ಅದನ್ನು ಭರ್ತಿ ಮಾಡಿಕೊಳ್ಳಿ ಎಂದು ಹೇಳುತ್ತಾ ಬಂದಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ನಮ್ಮ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು ಲಿಟಿಗೆಂಟ್ಸ್‌ಗಳ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. ಈಗ ಏನಾಗಿದೆ ಅಂದರೆ ೧೦ ವರ್ಷಗಳಿಂದಲೂ ಒಂದು ಆರ್‌ಎಸ್‌ಎ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಒಂದು ಲಿಸ್ಟ್‌ನಲ್ಲಿರುವುದನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ ಎಂ.ಇ ಎಸ್. ಕೇಸ್‌ಗಳೂ ಐದು ವರ್ಷಗಳಿಂದ ಆಗಿಲ್ಲ. ನಾನು ಏನು ಅಂದುಕೊಂಡಿದ್ದೇನೆ ಅಂದರೆ, ಈ ನಮ್ಮ ಆಡಳಿತ ನ್ಯಾಯ ಮಂಡಳಿ ಬಂದ ಮೇಲೆ ಹೈಕೋರ್ಟಿಗೆ ಸ್ವಲ್ಪ ಒತ್ತಡ ಕಡಿಮೆಯಾದಾಗಬಹುದು ಆದರೆ ಹಾಗೆ ಆಗಲಿಲ್ಲ. ಅದೇ ರೀತಿಯಲ್ಲಿ ಲ್ಯಾಂಡ್ ಟ್ರಿಬ್ಯುನಲ್ ಸ್ಥಾಪನೆಯಾಗುವುದರಿಂದಲೂ ಒತ್ತಡ ಕಡಿಮೆಯಾಗಬಹುದೆಂದು ಅಂದುಕೊಂಡಿದ್ದೂ ಕೂಡ ಹಾಗೆ ಆಗಲಿಲ್ಲ. ಆದುದರಿಂದ ದಯಮಾಡಿ ತಾವು ತಮ್ಮ ಪ್ರಭಾವವನ್ನು ಉಪಯೋಗಿಸಿಕೊಂಡು ಕೇಂದ್ರ ಸರಕಾರದವರ ಮೇಲೆ ಒತ್ತಡ ಹಾಕಿ ಈ ಒಂದು ಕೆಲಸವನ್ನು ಮಾಡಿಸಬೇಕು. ನನಗೆ ಗೊತ್ತಿರುವ ಹಾಗೆ ಇದಕ್ಕೆ ಕೇಂದ್ರ ಸರಕಾರದವರ ಪರ್ಮಿಶನ್ ಬೇಕಾಗುತ್ತದೆ, ತಮಗೆ ಈ ದಿಸೆಯಲ್ಲಿ ತೊಂದರೆ ಇದೆ. ಹೇಗಿದ್ದರೂ ಹೈಕೋರ್ಟ್ ಜಡ್ಜಸ್‌ಗಳನ್ನು ನೇಮಕ ಮಾಡುವಲ್ಲಿ ಒತ್ತಡ ತಂದು ಆ ಕೆಲಸವನ್ನು ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಈ ಒಂದು ಅನುಕೂಲವನ್ನು ಮಾಡಿಕೊಳ್ಳದಿದ್ದಲ್ಲಿ ತುಂಬಾ ತೊಂದರೆಯಾಗುತ್ತದೆ. ನಾನು ಹಾಕಿದ ಕೇಸ್‌ಗಳಲ್ಲಿ ವಿಳಂಬದಿಂದಾಗಿ ಅನೇಕ ಕಕ್ಷಿದಾರರು ಈಗಾಗಲೇ ಸತ್ತು ಹೋಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ನ್ಯಾಯಾಧೀಶರುಗಳ ನೇಮಕದ ಬಗ್ಗೆ ಮಾತನಾಡಿದ್ದಾರೆ. ಅವರು ಸಂವಿಧಾನದ ತಿಳುವಳಿಕೆಯ ಆಧಾರದ ಮೇಲೆ ಮಾತನಾಡುತ್ತಾ ಇದ್ದಾರೆ ಎಂದು ನಾನು ನಂಬಿದ್ದೇನೆ ಯಾರು ಈ ನೇಮಕಾತಿಗಳನ್ನು ಮಾಡಬೇಕೋ ಅವರು ಇದನ್ನು ಮಾಡಲಿಲ್ಲ ಎಂದು ಹೇಳುತ್ತೇನೆ. ಸಂಸದೀಯ ಮಟ್ಟದಲ್ಲಿ ಹೇಳಿದ್ದಾರೆ ಸಂಸತ್ತಿನಲ್ಲಿ ಹೇಳಿದ್ದಾರೆ. ಅದನ್ನು ಬಿಟ್ಟು ಮಾನ್ಯ ಸದಸ್ಯರು ನನಗೆ ಹೇಳಿದರೆ ನಾನು ಏನು ಮಾಡಲಿಕ್ಕೆ ಸಾಧ್ಯ ? ಸಂವಿಧಾನದ ಪ್ರಕಾರ ನಾನು ಏನು ಮಾಡಲಿ ? ವೆಂಕಟರಾಮಯ್ಯನವರು ಈ ಬಗ್ಗೆ ನನಗೆ ತಿಳುವಳಿಕೆಯನ್ನು ಕೊಟ್ಟರೆ ನಾಳೆಯೇ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುವುದು ತಾವುಗಳು ಸ್ವಲ್ಪ ಡೆಲ್ಲಿಗೆ ಹೋಗಿ ಅಲ್ಲಿ ಮಂತ್ರಿಗಳನ್ನು ಕಂಡು ಮಾತನಾಡಿ ಹೇಳಿದರೆ ಒಳ್ಳೆಯದಾದೀತು ಈ ಜಾಗಗಳನ್ನು ತುಂಬಿಕೊಂಡರೆ ಕೇಸ್‌ಗಳು ಇತ್ಯರ್ಥವಾಗಲು ಅನುಕೂಲವಾಗುತ್ತದೆ. ಇನ್ನು ಬಿಲ್ಡಿಂಗ್‌ಗಳ ವಿಚಾರ. ಅದರಲ್ಲಿಯೂ ಮೊಫ್ಯುಸಲ್ ಪಾರ್ಟ್ಸ್‌ಗಳಲ್ಲಿ ಒಳ್ಳೆಯ ರೀತಿಯಲ್ಲಿ ಬಿಲ್ಡಿಂಗ್‌ಗಳು ಇಲ್ಲ ದಯಮಾಡಿ ಅಲ್ಲಿ ಒಳ್ಳೆಯ ಬಿಲ್ಡಿಂಗ್‌ಗಳನ್ನು ಕೊಡಿ. ಏಕೆಂದರೆ ಜನತೆಯು ಈ ಕೋರ್ಟ್‌ಗಳ ಮೇಲೆ ಒಳ್ಳೆಯ ಗೌರವ ಭಾವನೆ

ಯನ್ನು ಇಟ್ಟುಕೊಂಡಿರುತ್ತಾರೆ. ಅವರಿಗೆ ಅದರ ನಂಬಿಕೆ ಉಳಿಯಬೇಕು. ಆ ದಿಸೆಯಲ್ಲಿ ಗಂಭೀರವಾಗಿ ವಿಚಾರ ಮಾಡಬೇಕು. ಇನ್ನು ನಮ್ಮ ಹೈಕೋರ್ಟ್ ಬಿಲ್ಡಿಂಗ್‌ನ್ನು ರಿಪೇರಿ ಮಾಡಿಸುತ್ತಾ ಇದ್ದಾರೆ. ಅದು ಇನ್ನೂ ಮುಗಿದಿಲ್ಲ. ಮುದುಕಿಗೆ ಆಭರಣಗಳನ್ನು ಹಾಕಿ ಶೃಂಗಾರ ಮಾಡಿದ ಹಾಗೆ ಬಹಳ ವರ್ಷಗಳಿಂದ ಇದನ್ನು ಮಾಡುತ್ತಾ ಇದ್ದಾರೆ. ನಾನು ಬಂದಾಗಿನಿಂದಲೂ ನೋಡುತ್ತಾ ಇದ್ದೇನೆ. ಇನ್ನು ಇದರ ರಿಪೇರಿ ಕಾರ್ಯ ಮುಗಿದಿಲ್ಲ, ಅದನ್ನು ಬೇಗನೇ ಮಾಡಿ ಮುಗಿಸಿ. ಆ ಮೇಲೆ ನಮ್ಮ ಮೇಯರ್ ಕೋರ್ಟ್ ಬಿಲ್ಡಿಂಗ್ಸ್ ಮತ್ತು ಇತರ ಕೆಲವು ಕೋರ್ಟ್ ಬಿಲ್ಡಿಂಗ್ಸ್‌ಗಳಲ್ಲಿನ ವ್ಯವಸ್ಥೆಯು ಚೆನ್ನಾಗಿ ಇಲ್ಲ. ಆ ಕೋರ್ಟ್ ಆವರಣಗಳಲ್ಲಿ ದುರ್ವಾಸನೆಯಿಂದಾಗಿ ನಿಲ್ಲುವುದಕ್ಕೆ ಆಗುತ್ತಾ ಇಲ್ಲ. ಅಂತಹ ಕಡೆಗಳಲ್ಲಿ ಶುಚಿತ್ವ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿಕೊಡುವುದರ ಜೊತೆಗೆ ಇತರ ಅವಶ್ಯಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಕೆಲವು ಕೋರ್ಟ್ ಬಿಲ್ಡಿಂಗ್‌ಗಳನ್ನು ಚೆನ್ನಾಗಿ ಇಟ್ಟಿದ್ದಾರೆ. ಹಾಗೆಯೇ ಅನೇಕ ಸಿವಿಲ್ ಜಡ್ಜಸ್ ಹುದ್ದೆಗಳು ಖಾಲಿ ಇವೆ, ಮೊನ್ನೆ ಇತ್ತೀಚೆಗೆ ಕೆಲವು ಮುನ್ಸಿಫ್ ಹುದ್ದೆಗಳನ್ನು ಎಂದರೆ ಸುಮಾರು ೨೦ ಹುದ್ದೆಗಳನ್ನು ಭರ್ತಿ ಮಾಡಿದಂತೆ ಕಾಣುತ್ತದೆ. ಅಂತೆಯೇ ತಾಲ್ಲೂಕಿಗೆ ಒಂದು ಕೋರ್ಟ್ ಕೊಡುವ ವಿಚಾರಕ್ಕೆ ತಾವುಗಳು ಒಪ್ಪಿಕೊಂಡಿದ್ದೀರಿ. ನಮ್ಮ ಕ್ಷೇತ್ರದ ಶ್ರೀನಿವಾಸಪುರ ತಾಲ್ಲೂಕು ದೊಡ್ಡ ತಾಲ್ಲೂಕು ಆಗಿದ್ದರೂ ಕೂಡ ಅಲ್ಲಿಗೆ ಕೋರ್ಟ್‌ನ್ನು ಕೊಟ್ಟಿಲ್ಲ. ಅದೇ ನಮ್ಮ ಗುಡಿಬಂಡೆ ತಾಲ್ಲೂಕಿಗೆ ಬೇಡ ಎಂದು ಹೇಳಬೇಕಾಗುತ್ತದೆ ಏಕೆಂದರೆ ಅಲ್ಲಿ ಕೇವಲ ಎರಡು ಹೋಬಳಿಗಳು ಮಾತ್ರ ಇರುವಂಥಾದ್ದು ತಾವುಗಳು ತಾಲ್ಲೂಕಿಗೆ ಒಂದು ಕೋರ್ಟ್ ಕೊಡುತ್ತೇವೆ ಎಂದು ಹಿಂದೆ ಸ್ಪೆಸಿಫಿಕ್ ಆಗಿ ಹೇಳಿದ್ದೀರಿ. ಆದುದರಿಂದ ಸಿವಿಲ್ ಜಡ್ಜಸ್ ಕೋರ್ಟ್‌ಗಳನ್ನು ಹೆಚ್ಚಿಗೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಇನ್ನೊಂದು ವಿಚಾರ ಏನೆಂದರೆ, ನಮ್ಮ ಜ್ಯುಡಿಶಿಯರಿಯಲ್ಲಿ ಮೊದಲಿದ್ದ ಎಫಿಶಿಯನ್ಸಿ ಈಗ ಹೋಗುತ್ತಾ ಇದೆ ಎಂದು ನಾನು ಅಂದುಕೊಂಡಿದ್ದೇನೆ, ಏಕೆಂದರೆ ಅವರಿಗೆ ಕೊಡುವ ಸಂಬಳ ಕಡಿಮೆ, ಅದನ್ನು ಜಾಸ್ತಿ ಮಾಡಿ ಎಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ, ಈಗಲೂ ಅದೇ ಮಾತನ್ನು ಹೇಳುತ್ತೇನೆ. ಹೀಗೆ ಸಿವಿಲ್ ಜಡ್ಜಸ್ ಮತ್ತು ಮುನ್ಸೀಫರಿಗೆ ಸಂಬಳ ಹೆಚ್ಚಿಗೆ ಕೊಡದಿದ್ದರೆ, ಒಳ್ಳೆಯವರು ಆ ಸ್ಥಾನಗಳಿಗೆ ಬರುವುದಿಲ್ಲ ಅಥವಾ ಅಲ್ಲಿಯೂ ಕೂಡ ಲಂಚ ಪ್ರಾರಂಭವಾಗಬಹುದು. ಇದುವರೆಗೆ ನ್ಯಾಯಾಂಗದಲ್ಲಿ ಮಾತ್ರ ಯಾವುದೇ ಲಂಚರುಷುವತ್ತುಗಳು ಇಲ್ಲ, ಅದಕ್ಕೆ ಮುಂಚೆ ಹೀಗಾದಂತೆ ನಿಗಾವಹಿಸಿ. ಸೂಕ್ತ ಸಂಬಳವನ್ನು ಅವರಿಗೆ ಕೊಟ್ಟು ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಅಂತಹ ನ್ಯಾಯಾಧೀಶರುಗಳಿಗೆ ಹೆಚ್ಚಿನ ಒಂದು ಸಂಬಳ ಇಲ್ಲದಿದ್ದರೆ ಎಫಿಶಿಯೆಂಟ್ ಲಾಯರ್ಸ್ ಮುನ್ಸೀಫ್ ಕೆಲಸಕ್ಕೆ ಬರುವುದಕ್ಕೆ ಮುಂದಾಗುವುದಿಲ್ಲ. ಏಕೆಂದರೆ ಇವರು ಕೊಡುವ ೦೦೦ ರೂಪಾಯಿಗಳ ಸಂಬಳಕ್ಕೆ ಮತ್ತು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ವರ್ಗಾವಣೆ ಮಾಡುತ್ತಿರುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಒಬ್ಬ ಮುನ್ಸೀಫನನ್ನು ಬೆಂಗಳೂರಿನಿಂದ ಚಿಕ್ಕೋಡಿಗೆ ವರ್ಗಾವಣೆ ಮಾಡುತ್ತಾರೆ. ಅವನಿಗಿರುವ ಈ ಸಂಬಳದಲ್ಲಿ ಈ ಒಂದು ಅನಾನುಕೂಲತೆಗಳು ಕೂಡ ಇದ್ದರೆ ಯಾರು ಮುಂದೆ ಬರುತ್ತಾರೆ ? ಅದಕ್ಕಾಗಿ ಅವರಿಗೆ ಸಂಬಳವನ್ನು ಹೆಚ್ಚಿಗೆ ಮಾಡಬೇಕು. ಹಾಗೆಯೇ ಅವರಿಗೆ ಇತರ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ.ಎಚ್. ಪಾಟೀಲ್ (ಗದಗ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರುಗಳು ಈ ವಿಷಯಗಳನ್ನು ಕುರಿತು ಮಾತನಾಡಿರುವುದರಿಂದ ನಾನು ಮತ್ತೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಈ ನಿವೃತ್ತಿಯಾದಂಥ ಎಂ.ಎಲ್.ಎ.ಗಳು ಏನಿದ್ದಾರೆ, ಅವರಿಗೆ ಕೊಡತಕ್ಕಂಥ ಸೌಲಭ್ಯಗಳು ತೀರಾ ಕಡಿಮೆಯಾಗಿದೆ ಅವರು ನಿವೃತ್ತರಾಗಿದ್ದರೂ ಕೂಡ ಅವರು ತಮ್ಮ ಮತದಾರ ಕ್ಷೇತ್ರದಲ್ಲಿ ಮುತುವರ್ಜಿ ವಹಿಸಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕಾಗುತ್ತದೆ, ಹೀಗೆ ಜನಪರ ಕೆಲಸಗಳನ್ನು ಮಾಡುವವರು ಅನೇಕ ಜನರಿದ್ದಾರೆ. ಅಂತಹವರಿಗೆ ಯೋಗ್ಯವಾದಂಥ ಪ್ರೋತ್ಸಾಹವನ್ನು ಕೊಡುವುದು ಅತ್ಯಂತ ಅವಶ್ಯಕವಾಗಿದೆ. ಆ ದೃಷ್ಟಿಯಿಂದ ಈಗ ಅವರಿಗೆ ಇರುವಂಥ ಬಸ್ ಪಾಸ್ ಏನಿದೆ ಅದನ್ನು ಕಂಟಿನ್ಯೂ ಮಾಡಬೇಕು. ಮತ್ತು ಅವರು ಇಲ್ಲಿಗೆ ಬಂದಾಗ ಇಳಿದುಕೊಳ್ಳುವುದಕ್ಕೆ

ವಸತಿ ಗೃಹವನ್ನು ಕಟ್ಟಿಸಿಕೊಡಬೇಕು. ಮತ್ತು ಅವರಿಗೆ ಯಾವುದೇ ಔಷಧಿ ಸೌಲಭ್ಯಗಳು ಕಡಿಮೆಯಾಗದ ಹಾಗೆ ನೋಡಿಕೊಳ್ಳಬೇಕು ಎಲ್ಲರಿಗೂ ಔಷಧಿ ಸೌಲಭ್ಯ ಕೊಡುವಾಗ ಎರಡು ಸಾವಿರ ರೂಪಾಯಿಗಳ ಉತ್ಪನ್ನ ಇದ್ದವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಅವರಿಗೆ ಸಿಗುವ ೫೦೦ ರೂಪಾಯಿಗಳ ಪಗಾರವನ್ನು ಲೆಕ್ಕ ಹಾಕಿದ್ದೆ ಆದರೆ ಅವರಿಗೆ ಯಾವ ಸೌಲಭ್ಯವೂ ಸಿಗುವಂತಿಲ್ಲ. ಆದುದರಿಂದ ಅವರಿಗೆ ಪುಕ್ಕಟೆಯಾಗಿ ಔಷಧಿಗಳನ್ನು ಕೊಡುವ ಒಂದು ವ್ಯವಸೆಯನ್ನು ಮಾಡಬೇಕು, ಪಾರ್ಲಿಮೆಂಟ್‌ನಲ್ಲಿ ಈ ಒಂದು ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದಾರೆ. ಕೇಂದ್ರ ಸರಕಾರದ ದವಾಖಾನೆಗಳಲ್ಲಿ ಅವರಿಗೆ ಈ ಒಂದು ವ್ಯವಸ್ಥೆ ಇದೆ. ಹಾಗೆಯೇ ಇಲ್ಲಿಯೂ ಮಾಡಬೇಕು. ಬಸ್ ಪಾಸ್ ಮತ್ತು ವಸತಿಸೌಲಭ್ಯ ಹಾಗೂ ಔಷಧಿಗಳ ವ್ಯವಸ್ಥೆಯು ಅವರಿಗೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಅವರಿಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಿ ಎಂದೇನೂ ಕೇಳಿಕೊಳ್ಳುವುದಿಲ್ಲ. ಯಾವುದೇ ಮಂತ್ರಿಗಳು ತಮ್ಮ ಕ್ಷೇತ್ರಕ್ಕೆ ಬಂದಾಗ ಅವರೂ ಕೂಡ ತಮ್ಮ ಒಂದು ಸಲಹೆ ಸೂಚನೆಗಳನ್ನು ಕೊಡಲು ಅನುಕೂಲವಾಗುವಂತೆ ನೋಡಿಕೊಳ್ಳಬೇಕು. ನಾಳೆಯ ದಿವಸಗಳಲ್ಲಿ ಯಾರೇ ನಿವೃತ್ತಿಯಾದರೂ ಕೂಡ ನಂತರದ ಅವಧಿಯಲ್ಲಿಯೂ ಸಾರ್ವಜನಿಕ ಹಿತದೃಷ್ಟಿಯಿಂದ ಅವರು ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕಾಗುತ್ತದೆ. ಆದಕ್ಕಾಗಿ ಅವರಿಗೆ ಈ ಸೌಲಭ್ಯಗಳು ಬೇಕಾಗುತ್ತದೆ. ಇಲ್ಲದಿದ್ದರೆ ಅವರಿಗೆ ಕೆಲಸ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ. ನೀವು ಇತ್ತೀಚೆಗೆ ಯಾರು ಹಾಡುತ್ತಾರೆ, ಯಾರು ಕುಣಿಯುತ್ತಾರೆ ಎಂದು ತಿಳಿದುಕೊಂಡು ಅವರಿಗೆಲ್ಲಾ ಸೌಕರ್ಯಗಳನ್ನು ಮಾಡಿಕೊಡುತ್ತಿದ್ದೀರಿ. ಆದೇ ನಮ್ಮ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವವರಿಗೆ ಯಾವುದೇ ಸೌಕರ್ಯಗಳನ್ನು ಕೊಡಲಿಲ್ಲ ಅಂದರೆ ಅದು ಸೂಕ್ತವೆನಿಸುವುದಿಲ್ಲ ಎಂದು ಹೇಳ ಬಯಸುತ್ತೇನೆ.

ಅಧ್ಯಕ್ಷರೆ, ತಾವುಗಳು ಅಧ್ಯಕ್ಷರಾದ ನಂತರ ಬಹಳ ಉತ್ತಮವಾದಂಥ ಕೆಲಸಗಳನ್ನು ಮಾಡಿದ್ದೀರಿ. ಪ್ರಶ್ನೆಗಳ ವಿಚಾರದಲ್ಲಾಗಲೀ, ಸದಸ್ಯರುಗಳನ್ನು ಚುರುಕುಗೊಳಿಸುವಂಥ ವಿಚಾರದಲ್ಲಾಗಲಿ ಹೀಗೆ ಅನೇಕ ಉತ್ತಮ ಕೆಲಸಗಳನ್ನು ಕೈಗೊಂಡಿದ್ದೀರಿ ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ, ಇವೊತ್ತು ಅನೇಕ ಪ್ರಶ್ನೆಗಳು ಬಾರದೇ ಹೋಗುತ್ತವೆ. ಅದಕ್ಕಾಗಿ ನಿಮ್ಮ ಸೆಕ್ರೆಟರಿಯೇಟ್‌ನ್ನು ಇನ್ನೂ ಚುರುಕು ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ತಾವುಗಳು ಇನ್ನೂ ಚುರುಕು ಮಾಡುವಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು ನಂಬಿದ್ದೇನೆ. ಅಥವಾ ಇದ್ದ ಕಾರ್ಯಾಲಯವನ್ನೇ ಇನ್ನೂ ಚುರುಕುಗೊಳಿಸುತ್ತೀರೋ ಎಂಬ ಬಗ್ಗೆ ತಮಗೆ ಬಿಟ್ಟು ಬಿಡುತ್ತೇನೆ. ಈ ಬಗ್ಗೆ ಇಷ್ಟು ಸಲಹೆಗಳನ್ನು ಕೊಟ್ಟು, ಅವಕಾಶವನ್ನು ಕೊಟ್ಟ ತಮಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೆ, ತಮಗೆ ಸಂಬಂಧಪಟ್ಟಂಥ ಬೇಡಿಕೆಗಳ ಬಗ್ಗೆ ನಾನು ಅವಕಾಶ ತೆಗೆದುಕೊಂಡು ಮಾತನಾಡಬೇಕೆಂಬ ಉದ್ದೇಶದಿಂದ ನಿಂತಿದ್ದೇನೆ. ಪ್ರಥಮವಾಗಿ ನಮ್ಮ ಹಿರಿಯ ಸದಸ್ಯರು ಆದಂಥ ಮಾನ್ಯ ಕೆ.ಎಚ್. ಪಾಟೀಲ್‌ರವರು ಹೇಳಿದ ಪ್ರಕಾರ ತಾವು ಅಧ್ಯಕ್ಷರಾಗಿ ಬಂದಮೇಲೆ ಶಾಸಕಾಂಗವು ತುಂಬಾ ಚುರುಕಾಗಿದೆ. ಆದರೆ ಶಾಸಕಾಂಗಕ್ಕೆ ಆಟಾನಮಿ, ಎಂದರೆ ಏನು ಸ್ವತಂತ್ರವನ್ನು ಕೊಡಬೇಕಾಗಿತ್ತು ಅದು ಮಾತ್ರ ಸಾಕಾಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ಇದು ಹೆಸರಿಗೆ ಮಾತ್ರ ಆಟಾನಮಿಯೇ ಹೊರತು ಪಾರ್ಲಿಮೆಂಟ್‌ನಲ್ಲಿ ಯಾವ ರೀತಿ ಇದೆ ಆ ಪ್ರಕಾರ ಇದೂ ಸ್ವತಂತ್ರದಿಂದ ಕೆಲಸ ಮಾಡುವುದಕ್ಕೆ ಈ ಸರಕಾರ ಅಧಿಕಾರದಲ್ಲಿ ಬಂದಂಥ ಹೊಸದರಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆಯೋ ಅದನ್ನು ಅನುಷ್ಠಾನಕ್ಕೆ ತರಲಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಇನ್ನು ನ್ಯಾಯಾಂಗ ವಿಚಾರದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇತ್ತೀಚೆಗೆ ಜಿಲ್ಲಾ ನ್ಯಾಯಾಧೀಶರ ಮತ್ತು ಮುನ್ಸೀಫ್‌ರುಗಳ ಆಯ್ಕೆ ಏನು ಆಗಿದೆ ಇದರಲ್ಲಿ ರಿಸರ್ವೇಷನ್ ಪಾಲಿಸಿ ಸರಿಯಾಗಿ ಅನುಷ್ಠಾನವಾಗಲಿಲ್ಲ. ಇದರಿಂದ ಬಹಳ ಅನ್ಯಾಯವಾಗಿದೆ. ಇದರ ಬಗ್ಗೆ ಕಾನೂನು ಸಚಿವರು ಏನು ಹೇಳುತ್ತಾರೆಯೋ ಹೇಳಬೇಕು. ಸ್ಪೆಷಲ್ ಡೆಕ್ರೂಟ್‌ಮೆಂಟ್ ಅನ್ನಾದರೂ ಮಾಡಿ ಏನು ಪರಿಶಿಷ್ಟ ಜಾತಿಯ ಪರಿಶಿಷ್ಟ ವರ್ಗದ ಮತ್ತು ಹಿಂದುಳಿದವರಿಗೆ ಅನ್ಯಾಯವಾಗಿದೆ ಅದನ್ನು ತಪ್ಪಿಸಿ ಅವರಿಗೆ ನ್ಯಾಯ ದೊರಕಿಸಿಕೊಡತಕ್ಕಂಥ ಸರಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೇರೆ ಬೇರೆ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಬಾರ್ ಅಸೋಸಿಯೇಷನ್‌ಗಳು ಏನು ಇವೆ ಇವುಗಳಿಗೆ

ಹಿಂದೆ ಪುಸ್ತಕಗಳನ್ನು ಖರೀದಿ ಮಾಡಲಿಕ್ಕೆ ಅನುದಾನವನ್ನು ಕೊಡುತ್ತಿದ್ದೆವು. ಆದರೆ ಈಗ ಬೇರೆ ಪುಸ್ತಕಗಳನ್ನು ಕೊಳ್ಳಲಿಕ್ಕೆ ಅನುದಾನ ಕೊಡುವುದು ಇರಲಿ ಆಲ್ ಇಂಡಿಯಾ ರಿಪೋರ್ಟ್ ಏನು ಬರುತ್ತದೆ ಅದರ ವೆಚ್ಚ ಅಂದರೆ ಆ ವರ್ಷದ ಕಂತನ್ನು ಕೊಡಲಿಕ್ಕೆ ಅನುದಾನವನ್ನು ತಾಲ್ಲೂಕು ಮಟ್ಟದಲ್ಲಿರತಕ್ಕಂತಹ ಬಾರ್ ಅಸೋಸಿಯೇಷನ್‌ಗೆ ಸರಕಾರ ಕೊಡುತ್ತಿಲ್ಲ. ಕೋಣೆ ಅಥವಾ ಕಟ್ಟಡಗಳ ವಿಚಾರ ಒಂದು ಕಡೆಯಾದರೆ ಇನ್ನೊಂದು ಕಡೆ ಅನುದಾನದ ಪ್ರಶ್ನೆ ಇದೆ. ೫ ವರ್ಷದ ಹಿಂದೆ ಮಂಜೂರಾತಿಯಾದ ಕಟ್ಟಡ ಈಗಲೂ ಪೂರ್ಣವಾಗದೇ ನಿಂತಿದೆ. ಇದಕ್ಕೆ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಬೆಂಗಳೂರಿನಲ್ಲಿ ಮುನ್ಸೀಫ್‌ಗಳು ಸಿವಿಲ್ ಜಡ್ಜ್‌ಗಳು ಏನು ಇದ್ದಾರೆ ಅವರು ಹೆಚ್ಚಾಗಿ ಮನೆ ಮಾಲೀಕರ ದಾಕ್ಷಿಣ್ಯಕ್ಕೆ ಒಳಗಾಗತಕ್ಕಂತಹ ಪರಿಸ್ಥಿತಿ ಇವತ್ತು ಇದೆ. ಹುಡ್ಕೋದಿಂದ ಇಲ್ಲವೇ ಬೇರೆ ಯೋಜನೆಯನ್ನು ತೆಗೆದುಕೊಂಡು ಅದರ ಅಡಿಯಲ್ಲಿ ನ್ಯಾಯಾಧೀಶರಿಗೆ ಹೆಚ್ಚು ವಸತಿಗಳನ್ನು ಒದಗಿಸತಕ್ಕಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳದಿದ್ದರೆ ಅವರಿಗೆ ತೊಂದರೆಯಾಗುತ್ತದೆ. ಅನೇಕ ಸಮಯದಿಂದ ಈ ಬಗ್ಗೆ ತೀವ್ರವಾದ ಕೊರತೆ ಇದೆ ಇದನ್ನು ನಿವಾರಿಸತಕ್ಕಂತಹ ಪ್ರಯತ್ನವನ್ನು ಖಂಡಿತ ಮಾಡಬೇಕು.

ಈಗಿರುವ ಹೈಕೋರ್ಟ್ ಕಟ್ಟಡವೇನು ಇದೆ ಅದನ್ನು ಕೆಡವಬಾರದೆಂದು ಆಕ್ಷೇಪಣೆ ಮಾಡಿದವರಲ್ಲಿ ನಾನೂ ಕೂಡ ಒಬ್ಬ. ಒಬ್ಬ ಫ್ರೆಂಚ್ ಆರ್ಕಿಟೆಕ್ಟ್ ಒಂದು ಆರ್ಟಿಕಲ್ ಅನ್ನು ಬರೆದಿದ್ದಾನೆ. ಈ ಕಟ್ಟಡ ಇನ್ನೂ ನೂರು ವರ್ಷ ಬಾಳಲಿಕ್ಕೆ ಸಾಧ್ಯವಿದೆ ಎಂದು. ಅದಕ್ಕೇ ನಾವು ಹೇಳಿದ್ದು ಇದನ್ನು ಕೆಡವಬೇಡಿ, ಮಾನ್ಯುಮೆಂಟ್ ಆಗಿ ಇದು ಉಳಿಯುತ್ತದೆ ಎಂದು. ವ್ಯವಹಾರಿಕವಾಗಿ ಇದನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ರಿಪೇರಿ ಮಾಡತಕ್ಕಂತಹ ಕಾರ್ಯಕ್ರಮವನ್ನು ನೋಡಿದರೆ ಇನ್ನೂ ಒಂದೆರಡು ವರ್ಷದಲ್ಲಿ ದುರಸ್ತಿ ಮಾಡಿ ಸಕ್ರಮ ಗೊಳಿಸತಕ್ಕಂತಹ ಪ್ರಯತ್ನ ನಮಗೆ ಕಾಣುತ್ತಿಲ್ಲ. ಇದಕ್ಕೆ ಸಾಕಷ್ಟು ಹಣ ಒದಗಿಸತಕ್ಕಂತಹ ಅವಶ್ಯಕತೆ ಇದೆ.

ಇನ್ನು ಕರಾವಳಿ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ರಾಜ್ಯ ಪುನರ್ ವಿಂಗಡಣೆಯಾಗುವ ಮೊದಲು ಫಿಷರೀಸ್ ಡಿಪಾರ್ಟ್‌ಮೆಂಟ್ ಇರಲಿಲ್ಲ ಅನಿಮಲ್ ಹಸ್ಬೆಂಡರಿ ಇಲಾಖೆಯೆಂದು ಇತ್ತು. ಇದಕ್ಕೆ ಯಾವುದೇ ರೀತಿಯಿಂದ ಪ್ರಾಮುಖ್ಯತೆಯನ್ನು ಕೊಟ್ಟಿರಲಿಲ್ಲ. ಕೆಲವು ವರ್ಷಗಳಿಂದ ಈ ಮೀನುಗಾರಿಕಾ ಇಲಾಖೆಯನ್ನು ಯಾವ ರೀತಿ ನೋಡುತ್ತಿದ್ದೀರಿ ಇದೇ ರೀತಿ ನೀವು ವರ್ತಿಸಿದರೆ ಇದೇ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡರೆ ಪುನಃ ಇದು ಪಶುಸಂಗೋಪನಾ ಇಲಾಖೆಯಲ್ಲಿ ಸೇರಿಕೊಳ್ಳತಕ್ಕಂತಹ ಪರಿಸ್ಥಿತಿಯನ್ನು ನೀವು ತರುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಂತಹ ಅನುಮಾನ ನಮಗೆ ಇದೆ. ಅದರ ಅಭಿವೃದ್ಧಿ ಕೆಲಸಕ್ಕೆ ಸರಿಯಾಗಿ ಹಣ ಒದಗಿಸದೇ ಇದ್ದುದರಿಂದಾಗಿ ಇದು ಸಂಪೂರ್ಣವಾಗಿ ನಿಂತು ಹೋಗಿದೆ ಇದರ ಕಾರ್ಯಕ್ರಮ ನಿಂತು ಹೋಗಿದೆಯೆಂದು ಹೇಳಿದರೆ ಅದು ಉತ್ಪ್ರೇಕ್ಷೆ ಯಾಗಲಿಕ್ಕಿಲ್ಲವೆಂದು ನನ್ನ ಭಾವನೆ. ಇನ್ನು ಹೊಸ ಕಾನ್‌ಸೆಪ್ಟ್ ಎಂದು ಇನ್‌ಲ್ಯಾಂಡ್ ಫಿಷರೀಸ್ ಅನ್ನು ಏನು ತಂದಿದ್ದೀರಿ ಆದರ ಟ್ಯಾಂಕ್ ಅನ್ನು ಸರಿಪಡಿಸಲಿಕ್ಕೆ ಈವರೆಗೂ ಕ್ರಮ ತೆಗೆದುಕೊಂಡಿಲ್ಲ. ಇವತ್ತಿನವರೆಗೂ ಅದನ್ನು ಉಪಯೋಗ ಮಾಡಿಲ್ಲ. ನಾನು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಸದಸ್ಯನಾಗಿದ್ದು ಸಮಿತಿಯ ವರದಿಯನ್ನು ಕೂಡ ಸರಕಾರಕ್ಕೆ ಕೊಟ್ಟಿದೆ. ಅಲ್ಲಿ ಕಟ್ಟಿದಂತಹ ಟ್ಯಾಂಕ್ ಅನ್ನು ಸರಿಪಡಿಸಲಿಕ್ಕೆ ಇವತ್ತಿನವರೆಗೂ ತಾವು ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಂ. ರಘುಪತಿ.—ದುರಸ್ತಿ ಮಾಡುವುದಕ್ಕೂ ಹಣ ಮಂಜೂರು ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಬಜೆಟ್ಟಿನಲ್ಲಿ ಹಣವನ್ನು ಇದಕ್ಕೆ ಇಟ್ಟ ಹಾಗೆ ಕಾಣುತ್ತಿಲ್ಲ.

ಶ್ರೀ ಎಂ. ರಘುಪತಿ.—ಇಟ್ಟಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದಕ್ಕೆ ಯಾರು ಜವಾಬ್ದಾರರು ಲೋಕೋಪಯೋಗಿ ಇಲಾಖೆ ಇದಕ್ಕೆ ಜವಾಬ್ದಾರಿಯೇ ಅಥವಾ ಮೀನುಗಾರಿಕಾ ಇಲಾಖೆ ಜವಾಬ್ದಾರಿಯೇ? ಇದಕ್ಕೆ ತಾವು ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು ಇದನ್ನು ದುರಸ್ತಿ ಮಾಡತಕ್ಕಂತಹ ಪರಿಸ್ಥಿತಿ ಕೂಡ ಕಾಣುತ್ತಿಲ್ಲ. ತಾವು ಮೀನುಗಾರಿಕೆಯ ವಿಚಾರದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು. ಹಿಂದೆ ತಾವು ಸಣ್ಣ ಮೆಕನೈಸ್ಡ್ ಬೋಟ್ ಸಬ್ಸಿಡಿ ಕೊಡತಕ್ಕಂತಹದ್ದು ಇತ್ತು, ಮೆಕನೈಸೇಷನ್ ಆಗ ಪ್ರಾರಂಭವಾದದ್ದು South Karara has been the pioneer in this mechani-

sation. ಅಲ್ಲಿಂದಲೇ ಇಡೀ ದೇಶದಲ್ಲಿ ಇನ್ನೊವೇಷನ್. ಮೆಕನೈಸೇಷನ್ ಪ್ರಾರಂಭವಾಯಿತು. ೧೯೭೦ ರಲ್ಲಿ ಪರ್ಸಿಯನ್ ಬೋಟ್ ಬಂತು ಆದರೆ ಇದು ಒಂದು ದಶಕಗಳ ಕಾಲವಾದರೂ ಇದಕ್ಕಿಂತ ಮೇಲೆ ಅಂದರೆ ಮುಂದೆ ಹೋಗಲಿಲ್ಲ. ಪರ್ಸಿಯನ್ ಬೋಟ್ ಅನ್ನು ಇಂಟ್ರಡ್ಯೂಸ್ ಮಾಡಿದ ಮೇಲೆ ನಾವು ಇದಕ್ಕೆ ಸಾಕಷ್ಟು ಸಬ್ಸಿಡಿಯನ್ನು ಕೊಟ್ಟೆವು. ಎಲ್ಲಾ ಸೇರಿದರೆ ಅಂದರೆ ಬ್ಯಾಂಕ್‌ಗಳೂ ಸೇರಿ ೨೮ ಕೊಟ್ಟಿಯಷ್ಟನ್ನು ಕೊಟ್ಟಿರಬಹುದು, ಬ್ಯಾಂಕ್‌ಗಳು ಸಾಲ ಕೊಟ್ಟಿರಬಹುದು. ಈಗ ಮಂಗಳೂರಿನಲ್ಲಿ ಫರ್ಟಿಲೈಸರ್ ಕಂಪನಿ ಇದೆ. ಅಲ್ಲಿ ಇನ್‌ವೆಸ್ಟ್‌ಮೆಂಟ್ ಈಗಾಗಲೇ ೩೦೦-೩೫೦ ಕೋಟಿ ರೂಪಾಯಿವರೆಗೆ ಆಗಿದೆ. ಅಲ್ಲಿ ಎಂಪ್ಲಾಯ್‌ಮೆಂಟ್ ಎಷ್ಟು ಎಂದರೆ ಎರಡು ಸಾವಿರ ಮಾತ್ರ ೨೮ ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡಿ ಒಂದೂವರೆ ಲಕ್ಷ ಮೀನುಗಾರರಿಗೆ ಕೆಲಸ ಕೊಟ್ಟಿರತಕ್ಕಂಥದ್ದು ನೋಡಿದರೆ ಎಷ್ಟೊಂದು ವ್ಯತ್ಯಾಸ ಇದೆ ಎನ್ನುವುದನ್ನು ನೋಡಬೇಕಾಗುತ್ತದೆ. ಒಂದೊಂದು ಪರ್-ಸೀನ್ ಬೋಟ್ ಇವತ್ತು ನೀರಿನಲ್ಲಿ ಬಿಟ್ಟರೆ ಒಂದು ಕ್ಯಾಚ್ ಎಂದು ಹೇಳಿದರೆ ಎರಡು ಲಕ್ಷ ರೂಪಾಯಿ ಸಂಪಾದನೆ ಮಾಡಬಹುದು. ಒಂದೊಂದು ಸಾರಿ ಕ್ಯಾಚ್ ಇಲ್ಲದೇ ಹೋಗಬಹುದು. ಎರಡು ಲಕ್ಷ ರೂಪಾಯಿಯನ್ನು ಒಂದು ಕ್ಯಾಚ್‌ನಲ್ಲಿ ಒಂದು ದಿವಸ ಮಾಡಲಿಕ್ಕೆ ಸಾಧ್ಯ ಇದೆ. ಇಷ್ಟು ಉತ್ಪಾದನೆಗೆ ಕಾರಣವಾದಂಥ ಮೀನುಗಾರಿಕಾ ಇಲಾಖೆಗೆ ತಾವು ಕೊಟ್ಟಂಥ ದೃಷ್ಟಿಕೋನ ಏನು ಇದೆ, ಇದನ್ನು ಸಂಪೂರ್ಣವಾಗಿ ಸರ್ಕಾರ ನಿರ್ಲಕ್ಷ್ಯ ಮಾಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದು ಎಲ್ಲಿಂದ ಪ್ರಾರಂಭವಾಗಿದೆ ಎಂದು ಹೇಳಿದರೆ ತಾವು ದಯವಿಟ್ಟು dig out these things. ಫಿಷರೀಸ್ ಡಿಪಾರ್ಟ್‌ಮೆಂಟ್ ಇವತ್ತು ಎಷ್ಟು ಮಾಡ್ರನೈಜೇಷನ್ ಆಗಿದೆ, ಇಡೀ ದೇಶಕ್ಕೇ ಒಂದು ಮುಂದಾಳುತನವನ್ನು ಕೊಟ್ಟಿದ್ದರೆ because this Fisheries Department had enjoyed the professional management ಉನ್ನತವಾದಂಥ. ಆದರ್ಶವಾದ ಇಡೀ ರಾಷ್ಟ್ರಕ್ಕೆ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವವನ್ನು ಕೊಟ್ಟಂಥ ಡೈರೆಕ್ಟರ್ ಆಫ್ ಫಿಷರೀಸ್ ಅದರಲ್ಲಿ ಇದ್ದರು. Dr. Kalyani, ಲಕ್ಷ್ಮೀನಾರಾಯಣ್‌ರಾವ್ ಎನ್ನುವವರು ಇದ್ದರು, Jayaraj ಐ. ಎ. ಎಸ್. ಅವರನ್ನು ಅಲ್ಲಿಗೆ ತೆಗೆದುಕೊಂಡಿದ್ದೀರಿ. ಬಹಳ ಉನ್ನತವಾದಂಥ ಒಂದು ಅಧಿಕಾರವಾಣಿಯಿಂದ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಇದ್ದರು ಇದರಲ್ಲಿ ತಾವು ಇವತ್ತು ಐ. ಎ. ಎಸ್. ಆಫೀಸರ್‌ಗಳನ್ನು ಹಾಕಿದ್ದೀರಿ ೩-೪ ವರ್ಷದಿಂದಲೂ ಐ. ಎ. ಎಸ್. ಆಫೀಸರ್ಸ್ ಇದ್ದಾರೆ. ಯಾವುದಕ್ಕೆ ಈ ಐ. ಎ. ಎಸ್. ಆಫೀಸರ್ಸ್ ಒಳ್ಳೆಯ ಅಧಿಕಾರಿಗಳು ಇದ್ದಾರೆ, ಆದರೆ ಪ್ರೊಫೆಷನಲ್ ಮ್ಯಾನೇಜ್‌ಮೆಂಟನ್ನು ಏತಕ್ಕೆ ಬದಲಾವಣೆ ಮಾಡುತ್ತೀರಿ ? ಫಿಸರೀಸ್‌ಗೆ ಸಂಬಂಧಪಟ್ಟಿದ್ದರಲ್ಲಿ ತಾಂತ್ರಿಕ ಜ್ಞಾನದಲ್ಲಿ ಸರಿಯಾಗಿ ನಿರ್ವಹಿಸಬೇಕಾದಂಥವರನ್ನು ಅಲ್ಲಿ ಹಾಕದೆ ಈ ರೀತಿ ಹಾಕತಕ್ಕಂಥದ್ದು ಇದರಿಂದ ಅದು ಬೆಳವಣಿಗೆಯಾಗುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ ಇದರಿಂದ ಇಲಾಖೆಗೆ ಸರಿಯಾದಂಥ ನ್ಯಾಯ ಇವೊತ್ತಿಗೂ ಸಿಕ್ಕಿಲ್ಲ. ಇವತ್ತು ಮತ್ತೊಬ್ಬರಿಗೆ ಪ್ರೊಮೋಷನ್ ಕೊಡುವ ಬಗ್ಗೆ ಆ ವಿಚಾರ ಮಾಡುತ್ತಿಲ್ಲ. ಆದರೆ ಏನು ಪ್ರೊಫೆಷನಲ್ ಮ್ಯಾನೇಜ್‌ಮೆಂಟ್ ಅದರ ಬಗ್ಗೆ ವಿಚಾರ ಮಾಡಿ ನೋಡಿ, ಅದರ ಇತಿಹಾಸ

ಯಾವ ರೀತಿಯಲ್ಲಿ ಮೀನುಗಾರಿಕಾ ಇಲಾಖೆ ನಡೆದುಕೊಂಡು ಬಂದಿದೆ ಎನ್ನತಕ್ಕಂಥ ಇತಿಹಾಸವನ್ನು ನೋಡಿದರೆ ಖಂಡಿತವಾಗಿ the professional lead and management which was given by seme of these veteran Director of Fisheries really stands in the history of fisheries development in Karnataka. ಅದನ್ನು ಏತಕ್ಕೆ ಆಲೋಚನೆ ಮಾಡಬಾರದು ? ಏತಕ್ಕೆ ಮೆಕಾನಿಕಲ್ ಆಗಿ ಜನಗಳನ್ನು ಪೋಸ್ಟ್ ಮಾಡುತ್ತಾ ಹೋಗುತ್ತೀರೋ ನನಗಂತೂ ಅರ್ಥವಾಗುತ್ತಿಲ್ಲ. Taiwan ಎಂದು ಒಂದು ಸಣ್ಣ ರಾಷ್ಟ್ರ. ಅಲ್ಲಿ ೧,೨೦೦ ಟ್ರಾಲರ್ಸ್ ಇದೆ. They are very much advanced.. ನಮ್ಮ ದೇಶದಲ್ಲಿ ಬಹುಶ: ೬೦ ರಿಂದ ೭೦ಕ್ಕೂ ಹೆಚ್ಚು ಟ್ರಾಲರ್ಸ್ ಇಲ್ಲ. ಕರ್ನಾಟಕದಲ್ಲಿ ಎಷ್ಟು ಇದೆ, ಏಕೆಂದರೆ That is the development. ನಬಾರ್ಡ್‌ನವರು ಏನು ಹೇಳುತ್ತಾರೆಂದರೆ ಇಂಪೋರ್ಟೆಡ್ ಎಂಜಿನ್ ಏನು ಇದೆ. ಅದನ್ನು ಹಾಕಿದರೆ it will cost more than a crore. ನಮ್ಮ ಜಿಲ್ಲೆಯಲ್ಲಿ ಕೆಲವರು ತಾಂತ್ರಿಕ ತಜ್ಞರು They have innovated a Rs. 40 lakh trawler. ೪೦ ಲಕ್ಷ ರೂಪಾಯಿಯಲ್ಲಿಯೇ ಟ್ರಾಲರ್ಸ್ ಮಾಡುವುದಕ್ಕೆ ಸಾಧ್ಯ ಇದೆ, ಸೇವಿಂಗ್ ಕೆಪಾಸಿಟಿ, it can remain in the sea for 21 days. You have to take upwith the Government of India. ನಬಾರ್ಡ್ ಹತ್ತಿರ ಕೂಡಾ ಇವನ್ನು ತೆಗೆದುಕೊಳ್ಳಬೇಕಾಗುತ್ತದೆ This venture will have to be

encouraged because many ventures have been started from our distr ct. ಸೌತ್ ಕೆನರಾ ಡಿಸ್ಟ್ರಿಕ್ಟ್ ಇದನ್ನು ನಾವು ಏತಕ್ಕೆ ತೆಗೆದುಕೊಳ್ಳುವುದಿಲ್ಲ. ಒಂದು ವೇಳೆ ನಬಾರ್ಡ್ ಮಾಡಿದ್ದನ್ನು ಸಂಪೂರ್ಣವಾಗಿ ತೆಗೆದುಕೊಳ್ಳದಿದ್ದರೆ ನೀವು ನಿಮ್ಮ ಸರ್ಕಾರದಿಂದ ಇದಕ್ಕೆ ಸಬ್ಸಿಡಿ ಕಾರ್ಯಕ್ರಮ ಮಾಡಿ. It is worth spending. You declare it right today if you have any concern for the fisheries. ಏಕೆಂದರೆ ಇದಕ್ಕೆ ಯಾವ ರೀತಿಯಾದಂಥ ಒಂದು ಇನಿಸಿಯೇಟನ್ನು ತೆಗೆದುಕೊಳ್ಳತಕ್ಕಂಥ ಶಕ್ತಿ ನಿಮ್ಮ ಇಲಾಖೆ ಅಥವಾ ಸರ್ಕಾರ ಕೊಡದಿದ್ದರೆ ಏನು ಪ್ರಯೋಜನವಾಗುತ್ತದೆ? ಆದ್ದರಿಂದ ನಬಾರ್ಡ್‌ನವರು ಏನು ನಿರ್ಣಯವನ್ನು ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ಯಾವಾಗಲೂ ನಾವು ಕೇಂದ್ರ ಸರ್ಕಾರವನ್ನೇ ಕಾದು ಕೊಂಡಿಲ್ಲ ಅದು ತಮಗೂ ಗೊತ್ತಿರಬಹುದು. ೧೯೮೭ರಲ್ಲಿ ಎಲ್ಲಾ ಬ್ಯಾಂಕ್‌ನವರು ಹೇಳಿದರು, ಪರ್-ಸೀನ್ ಬೋಟ್‌ಗೆ ಓವರ್ ಎಕ್ಸ್‌ಪ್ಲಾಯ್‌ಟೇಷನ್ ಆಗುತ್ತದೆ ಎಂದು? ಅದನ್ನು ಲೆಂಡ್ ಮಾಡು ವುದಕ್ಕಾಗುವುದಿಲ್ಲ, ಏಕೆಂದರೆ ಕೆಲವು ಕಮಿಟಿಗಳು ಇರುತ್ತವೆ, ಅವರಿಗೆ ಕಷ್ಟವಾಗುತ್ತದೆ. ತಾವು ದಯವಿಟ್ಟು ಹೇಳಬೇಕು, ಈಗ ಪರ್ಸಿಯನ್ ಬೋಟ್‌ಗೆ ಒಂದು ವರ್ಷಕ್ಕೆ ಸುಮಾರು ೩೧ ಬೋಟ್‌ಗೆ ಸಬ್ಸಿಡಿಯನ್ನು ಕೊಟ್ಟಿದ್ದೀರಿ. I still rsmember Rs. 50 to 60 lakhs, you must give subsidy to them. ಅವರು ಮುಂದೆ ಬರುತ್ತಾರೆ ಇವೊತ್ತು. ಇಂತಹ ಸಬ್ಸಿಡಿಯನ್ನು ೪೦ ಲಕ್ಷ ಟ್ರಾವಲರ್ಸ್ ಒಂದು ಇನ್ನೋವೇಷನ್ ಮಾಡಿದ್ದಾರೆ, ಅದಕ್ಕೆ ಸಬ್ಸಿಡಿಯನ್ನು ಕೊಡಿ. ಅವರು ಮುಂದೆ ಬರುತ್ತಾರೆ, you prevail upon the bank...... ಎಲ್ಲಾ ಮಾಡಿ. ಬ್ಯಾಂಕ್‌ನವರು ಇದಕ್ಕೆ ಏನು ಹೇಳುತ್ತಾರೆ? ಯಾಕೆಂದರೆ ಇಲ್ಲಿ ಏನು ಆಗಿದೆ ಅಂದರೆ ಅನ್‌ಫಾರ್ಚುನೇಟ್ಲಿ ತಮಗೆ ಸಹಾನುಭೂತಿ ಇದೆಯೆಂದು ತಿಳಿದುಕೊಂಡಿದ್ದೇನೆ. ಕೆಲವು ಸಾರಿ ಹೇಳಬಾರದು. ಲಾ ಮಿನಿಸ್ಟರ್ ಬ್ರಹ್ಮ ಆಗುವುದಕ್ಕೆ ಸಾಧ್ಯವಿಲ್ಲ. All Ministers cannot be Brahmas, assume that act character like Brahma of a particular portfolio. ಹಿಂದೆ ಒಬ್ಬರು ಸಚಿವರು ಬಂದರು, ಅವರು ಬಂದ ಕೂಡಲೇ ಡಿಕ್ಲೇರ್ ಮಾಡಿದರು ಓವರ್ ಎಕ್ಸ್‌ಪ್ಲಾಯ್‌ಟೇಷನ್ ಆಗಿದೆ, ಎಂದು ಪರ್ಸ್‌ಯಿನ್ ಬೋಟ್ ಲೆಂಡಿಂಗ್ ಸ್ಟಾಪ್ ಮಾಡುತ್ತೇವೆ ಎಂದು ಹೇಳಿದ ಮೇಲೆ that is a lead statement for the bank.

ಶ್ರೀ ಎಂ. ರಘುಪತಿ.—ನಾನು ಬಂದ ಮೇಲೆ ಈ ಪರ್ಸಿಯನ್ ಬೋಟ್ ಇವರುಗಳಿಗೆ ಫೀಸಿಬಿಲಿಟಿ ಸರ್ಟಿಫಿಕೇಟ್, ಏನು ಹಿಂದೆ ಮಾಡಿದ್ದರು ಅದನ್ನು ಸರಳಗೊಳಿಸಿ ಡೈರೆಕ್ಟಾಗಿ ಕೊಡುವು ವುದಕ್ಕೆ ಏರ್ಪಾಡು ಮಾಡಿದ್ದೇನೆ. ಜಿಲ್ಲಾ ಪರಿಷತ್‌ಗೆ ಪವರ್ ಕೊಟ್ಟಿದ್ದೇನೆ, ಇಮ್ಮೀಡಿಯಟ್ ಆಗಿ ಇಷ್ಯೂ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದೇಶ ತಾವು ಕೊಟ್ಟಿರಬಹುದು, ಆ ಆದೇಶ ಇದುವರೆಗೆ ಬರಲಿಲ್ಲ. Banks are still reluctant because the Minister himself gave a statement in the House and outside that no more lending be given on pursuine boats. ಹೇಗೆ ಮುಂದೆ ಬರುತ್ತಾ ಫಿಷರೀಸ್ ಡಿಪಾರ್ಟ್‌ಮೆಂಟ್ ಯಾಕೆಂದರೆ ಇಲ್ಲಿ ವಿಚಾರವನ್ನು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಎಂ. ರಘುಪತಿ.—ರಿಲ್ಯಾಕ್ಸ್ ಮಾಡಿದ್ದೇವೆ. ದಯವಿಟ್ಟು ಫಿನಾನ್ಸ್ ಮಾಡಿ ಎಂದು ಅವರಿಗೆ ಹೇಳಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಫಿನಾನ್ಸ್ ಮಾಡಿ ಎಂದು ನೀವು ಹೇಳಿದರೂ ಅವರು ಹೇಳು ತ್ತಾರೆ, ರೆಕವರಿ ಆಗುವುದಿಲ್ಲ, ಯಾರದ್ದೂ ರೆಕವರಿ ಹಣ ಬಂದಿಲ್ಲ ಎಂದು. ಆದರೆ ನಿಜಸ್ಥಿತಿ ೨೦ ಕೋಟಿ ರೂಪಾಯಿ ಲೆಂಡ್ ಮಾಡಿದಿದ್ದಾಗ, ೨೪ ಕೋಟಿ ರೂಪಾಯಿ ವಾಪಸ್ ಕೊಟ್ಟಿದ್ದಾರೆ. More than 70% recovery from the pursuine boats. ಇದನ್ನು ಕೊಟ್ಟಿದ್ದಾರೆ, ಇಲ್ಲಿ ಫೇಲ್ ಆಗುತ್ತದೆ ಎಂದರೆ ರಿಫಾಲ್ಸಿಂಗ್ ಇಂಟರೆಸ್ಟ್ ಏನು ಇದೆ, ಅಲ್ಲಿ ಫೇಲಾಗುತ್ತದೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಎಷ್ಟು ಇಂಪಾರ್ಟೆಂಸೋ ಅಷ್ಟೇ ಇಂಪಾರ್ಟೆಂಟ್ ಫಿಷರೀಸ್ ಎನ್‌ಆರ್‌ಡಿಸಿ ಯವರು ಫಿನಾನ್ಸ್ ಮಾಡುತ್ತಾರೆ. ಮನಿ ಅಲಾಟ್ ಮಾಡಿದ್ದಾರೆ. But we are not in a position to draw it...... ಏಕೆಂದರೆ ನಿಮ್ಮಲ್ಲಿ ಪ್ರೋಗ್ರಾಂ ಇಲ್ಲ, ಕಾರ್ಯಕ್ರಮ ಇಲ್ಲ. ಫಿಷರೀಸ್‌ನವರು ಫೆಡರೇಷನ್ ಮಾಡುತ್ತಾರೆ.

ಶ್ರೀ ಎಂ. ರಘುಪತಿ.—ಇಲ್ಲ ಮಾನ್ಯ ಕೆ.ಹೆಚ್. ಪಾಟೀಲ್‌ರವರಿಗೆ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರನ್ನು ಕೇಳಿಯೇ ಮಾತನಾಡಿದ್ದೇವೆ. ಡ್ರಾ ಮಾಡುತ್ತಾರೆ. ದಯವಿಟ್ಟು ಅದನ್ನು ನೋಟ್ ಮಾಡಿ:

ಅಧ್ಯಕ್ಷರು.—ಮಾನ್ಯ ರಘುಪತಿಯವರೇ, ಅವರು ಪೂರ್ತಿಯಾಗಿ ಮಾತನಾಡಲಿ, ಮಧ್ಯೆ ಇಂಟರ್‌ಫಿಯರ್ ಮಾಡುವುದು ಬೇಡ, ಮೊಯಿಲಿಯವರು ಬೇಗ ಮುಗಿಸಲಿ.

SRI M. VEERAPPA MOILY.—It has been so much neglectedl,

.....ಫಿಷರೀಸ್ ಬಗ್ಗೆ ಯಾರೂ ಮಾತನಾಡುವುದೇ ಇಲ್ಲ. That is why I took initiative to seek your permission and I am speaking. ರೈತರ ವಿಷಯದಲ್ಲಿ ತಾವು ಇಂಟರೆಸ್ಟ್ ವೇವ್ ಮಾಡಲಿಕ್ಕೆ ಪಿ.ಎಲ್.ಡಿ. ಬ್ಯಾಂಕ್‌ನವರಿಗೆ ಕನ್‌ಸೀಷನ್ ಕೊಟ್ಟಿದ್ದೀರಿ. ಅದೇ ರೀತಿ ಯಾರು ಪ್ರಾಂಪ್ಟ್ ಆಗಿ ರಿಪೇಮೆಂಟ್ ಮಾಡುತ್ತಾರೆ the same concession you have to extend to the fishermen. ಇಂಟರೆಸ್ಟ್ ಅನ್ನು ವೇವ್ ಮಾಡುವುದಕ್ಕೆ ಡಿಸೆಂಬರ್ ೮೮ ರವರೆಗೆ ಕೊಡಿ. ಯಾರು ಪ್ರಾಂಪ್ಟ್ ಆಗಿ, ಪೇಮೆಂಟ್ ಮಾಡುತ್ತಾರೆ, ಫಿಷರೀಸ್ ಬೋಟ್‌ಗೆ ಸಂಬಂಧಪಟ್ಟಂತೆ, ಪರ್ಸೀನ್ ಬೋಟ್‌ಗೆ ಸಂಬಂಧಪಟ್ಟಂತೆ ಅವರಿಗೆ ಆದೇ ಕನ್‌ಸೀಷನ್ ಅನ್ನು ಕೊಡಿ same concession you have given to the agriculturists because they are weaker sections. ಅಗ್ರಿಕಲ್ಚರಿಸ್ಟ್‌ನಲ್ಲಿ weakest of the week is fishermen... ಮೀನುಗಾರರು. ಇವರು ಬಹಳ ಬಡ ಕುಟುಂಬದಿಂದ ಬಂದವರು. ನೀವು ಈ ರೀತಿ ಪರಿಹಾರವನ್ನು ಕೊಡತಕ್ಕ ಪ್ರಯತ್ನವನ್ನು ಏಕೆ ಮಾಡಬಾರದು. ಡೀಸೆಲ್ ಸಬ್ಸಿಡಿ ಬಗ್ಗೆ ಯಾವ ತರಹ ಮಾಡಿದ್ದೀರ. ನೀವು ಎಷ್ಟು ಸಬ್ಸಿಡಿಯನ್ನು ಕೊಟ್ಟಿದ್ದೀರಿ ಎಂದು ಹೇಳಿ. ಕೊಡುವುದಕ್ಕೆ ಸಾಧ್ಯ ಇಲ್ಲ. ಎಲ್ಲರಿಗೂ ಈ ಕನಸೇಷನ್ ತಲುಪುತ್ತಾ ಇಲ್ಲ. ಏಕೆಂದರೆ ಇದರ ಬಗ್ಗೆ ಯಾವುದೇ ರೀತಿ ವ್ಯವಹಾರಿಕವಾಗಿ ಒಂದು ಯೋಜನೆ ಮಾಡಿ, ಎಂದರೆ ತಾವು ಖಂಡಿತವಾಗಿ ಆ ಯೋಜನೆಯನ್ನು ಮಾಡುತ್ತಿಲ್ಲ.

೨-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಅಲ್ಲಿ ಕೆಲವು ಸ್ಯಾಂಡ್ ಬಾರ್ಸ್ ಇವೆ. ಇದರ ಬಗ್ಗೆ ಸಹ ತಮಗೆ ಮನವಿಗಳು ಬಂದಿವೆ. ಇಲ್ಲಿ ಡ್ರೆಡ್ಜಿಂಗ್ ಮಾಡಿಸದ ಕಾರಣ ಕೆಲವು ಜನರು ಸತ್ತಿದ್ದಾರೆ. ಗಂಗೊಳ್ಳಿ ಹತ್ತಿರ ಮತ್ತು ಮಂಗಳೂರಿನ ಹಳೆಯ ಬಂದರ್‌ನ ಹತ್ತಿರ ಕೆಲವು ಮರಣಗಳಾಗಿವೆ. ಈ ಡ್ರೆಡ್ಜಿಂಗ್ ಸಲುವಾಗಿ ನೀವು ಒಂದು ಏಜೆನ್ಸಿಯನ್ನು ಫಿಕ್ಸ್ ಮಾಡಿದ್ದೀರಿ. ಇದರ ಬಗ್ಗೆ ಪತ್ರಿಕೆಗಳಲ್ಲಿ ಸಹ ವರದಿಗಳು ಬಂದಿವೆ. They have no capacity at all, ಆದ್ದರಿಂದ ಅವರ ಕೈಯಲ್ಲಿ ಈ ಕೆಲಸ ಮಾಡಲು ಸಾಧ್ಯವಾಗಿಲ್ಲ. I know very well you have discussed with the Chairman of the Dredging Corporation of India. He is prepare to help you, he is prepared to come out to purchase a dredger for our own dredging purpose. ಅವರು ಸಹಾಯ ಮಾಡಲು ಮುಂದೆ ಬರುತ್ತಿದ್ದಾರೆ. ಆದರೆ ನಿಮ್ಮಲ್ಲಿ ಹಣ ಇಲ್ಲ. ಈ ಹಿಂದೆ ಈ ಇಲಾಖೆಯ ಮಾನ್ಯ ಸಚಿವರು ಈ ಸಭೆಯಲ್ಲಿ ಒಂದು ಡ್ರೆಡ್ಜಿಂಗ್ ಮಿಷಿನ್ ಕೊಂಡುಕೊಳ್ಳುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಮಾಡದೇ ಇರತಕ್ಕಂಥ, ನಡೆಯದೇ ಇರತಕ್ಕಂಥ ಹೇಳಿಕೆಗಳನ್ನು ಇಲ್ಲಿ ಏತಕ್ಕೆ ಕೊಡಬೇಕು ? ಈ ಯಂತ್ರ ಸುಮಾರು ಎರಡು ಮೂರು ಕೋಟಿ ಬೆಲೆ ಬಾಳುತ್ತದೆ ಈ ಇಲಾಖೆಗೆ ಅಷ್ಟು ಹಣವನ್ನು ಅಲಾಟ್ ಮಾಡದಿರುವಾಗ ತಾವು ಯಾವ ರೀತಿ ಅದನ್ನು ಕೊಳ್ಳುತ್ತೀರಿ?

ಇನ್ನು ಹಳೆಯ ಮಂಗಳೂರು ಬಂದರು ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಬಂದರನ್ನು ಅಭಿವೃದ್ಧಿ ಪಡಿಸುವ ಬಗ್ಗೆ ನಮ್ಮ ಕಾಲದಲ್ಲಿ ಒಂದು ಯೋಜನೆ ಮಂಜೂರಾಯಿತು. ೪೦ ಲಕ್ಷ ರೂಪಾಯಿಗಳ ಈ ಒಂದು ಯೋಜನೆ ಕೆಲಸ ಇವೊತ್ತಿನವರೆಗೂ ಮುಗಿದಿಲ್ಲ. ಲೋಕೋಪಯೋಗಿ ಇಲಾಖೆಯವರು ಬಂದರು ಇಲಾಖೆಯವರಿಗೆ ನಿಮ್ಮ ಕೆಲಸ ಮೊದಲು ಮುಗಿಯಲಿ, ನಂತರ ನಮ್ಮ ಕೆಲಸ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಬಂದರು ಇಲಾಖೆ

ಯವರು ನಿಮ್ಮ ಕೆಲಸವನ್ನು ಮೊದಲು ಮಾಡಿ, ನಂತರ ನಮ್ಮ ಕೆಲಸವನ್ನು ಮಾಡುತ್ತೇವೆಂದು ಬಂದರು ಇಲಾಖೆಯವರು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಈ ಕೆಲಸ ಇನ್ನೂ ಪೂರ್ತಿ ಆಗಿಲ್ಲ. ಇದರ ಬಗ್ಗೆ ನೀವು ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಬೇಕಾಗುತ್ತದೆ. ಇದು ವಾಣಿಜ್ಯ ವ್ಯವಹಾರಗಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಸ್ಟರ್ ಪ್ಲಾನನ್ನು ನೀವು ತಯಾರು ಮಾಡಬೇಕಾಗುತ್ತದೆ. ಈಗ ಈ ಹಳೆಯ ಬಂದರಿನ ಮೂಲಕ ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಮಾಡಲು ಸಾಧ್ಯವಾಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಮಲ್ಪೆ ಬಂದರು ಇದೆ. ಇಲ್ಲಿಂದಲೂ ಸಹ ಎಕ್ಸ್‌ಪೋರ್ಟ್ ಮಾಡಲು ಸಾಧ್ಯವಾಗುತ್ತಿಲ್ಲ. ಇಲ್ಲಿಂದ ಎಕ್ಸ್‌ಪೋರ್ಟ್ ಮಾಡಲು ಕಸ್ಟಮ್ಸ್ ಸರ್ಟಿಫಿಕೇಟ್ ಅನ್ನು ಕಸ್ಟಮ್ಸ್ ಅಧಿಕಾರಿಗಳು ಕೊಡುವುದಿಲ್ಲ. ತಮಗೆ ಗೊತ್ತಿರುವಂತೆ ಮಂಗಳೂರು ಹೆಂಚುಗಳು ಜಗತ್‌ಪ್ರಸಿದ್ಧವಾಗಿವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಯಾರು ಆಗುವಂತಹ ಈ ಹೆಂಚುಗಳನ್ನು ರಫ್ತು ಮಾಡಬೇಕಾದರೆ ಅವುಗಳನ್ನು ಮಂಗಳೂರು ಬಂದರ್‌ಗೆ ಸಾಗಿಸಬೇಕಾಗಿದೆ, ಇದರಿಂದ ಖರ್ಚು ಹೆಚ್ಚು ಬರುತ್ತದೆ. ಆದ್ದರಿಂದ ಹಳೆಯ ಮಂಗಳೂರು ಬಂದರನ್ನು ಅಭಿವೃದ್ಧಿ ಪಡಿಸಲು ನೀವು ಸಂಬಂಧಪಟ್ಟವರ ಜೊತೆ ಮಾತುಕತೆ ನಡೆಸಬೇಕು. ಮಂಗಳೂರಿಗೆ ಥರ್ಮಲ್ ಪ್ಲಾಂಟ್ ಬರುವುದಿದೆ. ಈ ಕಾರಣದಿಂದ ಅಲ್ಲಿನ ಬಂದರು ಇಲಾಖೆಯವರು ಸಹ ಈ ಬಗ್ಗೆ ಕ್ರಮ ಕೈಕೊಳ್ಳಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸೀ-ಬರ್ಡ್ ಯೋಜನೆ ಕೆಲಸ ಪ್ರಾರಂಭವಾಗಿದೆ. ಆದ್ದರಿಂದ ನಾವು ಇದನ್ನು ಸಹ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. There are certain ancillary things which goes into the development of the hinter land and goes into the development of the whole district. ಈಗ ತಾವು ನೋಡಿರಬಹುದೆಂದು ಕಾಣುತ್ತದೆ, ಏನೆಂದರೆ, ಕೇರಳಾದ ಕರಾವಳಿ ಪ್ರದೇಶದ ಉದ್ದಕ್ಕೂ ಕೆನಾಲ್ ಸಿಸ್ಟಂ ಅನ್ನು ಅಲ್ಲಿನ ಸರ್ಕಾರ ಇಂಟ್ರೊಡ್ಯೂಸ್ ಮಾಡಿದ ಮೇಲೆ ಅಲ್ಲಿನ ಕೈಗಾರಿಕೋದ್ಯಮಿಗಳಿಗೆ ಬಹಳ ಅನುಕೂಲವಾಗಿದೆ. ಏಕೆಂದರೆ ಈ ಕೆನಾಲ್ ಮೂಲಕ ಏನನ್ನು ಬೇಕಾದರೂ ಸಾಗಿಸಬಹುದಾಗಿದೆ. ಇದರಿಂದ ಸಾಗಾಣಿಕೆ ವೆಚ್ಚ ಸಹ ಕಡಿಮೆ ಆಗುತ್ತದೆ. ಆದ್ದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಹ ಇದೇ ರೀತಿ ಮಾಡಬಹುದು. ಈ ಜಿಲ್ಲೆಗಳಲ್ಲಿ ಸಾಕಷ್ಟು ನದಿಗಳು ಹರಿಯುತ್ತವೆ. ಆದ್ದರಿಂದ ಈ ಎರಡು ಜಿಲ್ಲೆಗಳಲ್ಲಿ ನೀವು ಕೇರಳಾ ಮಾದರಿಯಲ್ಲಿ ಕೆನಾಲ್ ಸಿಸ್ಟಂನ್ನು ಜಾರಿಗೆ ತಂದರೆ it can create abundant wealth. Transport system could be improved, ಇದು ಜಾರಿಗೆ ಬಂದರೆ ಥರ್ಮಲ್ ಪ್ಲಾಂಟ್‌ಗೆ ಬೇಕಾದ ಕೋಲ್ ಅನ್ನು ಈ ಕೆನಾಲ್ ಮೂಲಕವೇ ಸಾಗಿಸಬಹುದು, ಇಲ್ಲದಿದ್ದರೆ ಗೂಡ್ಸ್ ಟ್ರೈನ್ ಮೂಲಕವೇ ಸಾಗಿಸಬೇಕಾಗುತ್ತದೆ. ಈಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಸೀ-ಬರ್ಡ್ ಯೋಜನೆ ಕೆಲಸ ಪ್ರಾರಂಭವಾಗಿರುವ ಕಾರಣ ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ನೀವು ಡಿಫೆನ್ಸ್ ಇಲಾಖೆಯವರ ಜೊತೆ ಮತ್ತು ಪೋರ್ಟ್ ಡೆವಲಪ್‌ಮೆಂಟ್ ಅಥಾರಿಟಿ ಅವರ ಜೊತೆ ಮಾತುಕತೆ ನಡೆಸಬೇಕು. ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ಇಲಾಖೆಯವರು ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಬೇಕು. ಈ ಕೆಲಸಕ್ಕೂ ತಮ್ಮ ಇಲಾಖೆಗೂ ಸಂಬಂಧವಿಲ್ಲ ಎಂದು ತಾವು ಹೇಳಬೇಡಿ. Let them invest money on these canal development. ಈ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ನೀವು ಕೆ.ಇ.ಬಿ. ಮತ್ತು ಕೆ.ಪಿ.ಸಿ. ಅವರ ಮೇಲೂ ಸಹ ಒತ್ತಡ ತರಬಹುದು. ಏಕೆಂದರೆ ಈ ಕೆನಾಲ್ ಮೂಲಕ ಕೋಲ್ ಸಾಗಿಸಲು ಅವರಿಗೂ ಅನುಕೂಲವಾಗುತ್ತದೆ.

ಇದಕ್ಕೂ ಒಂದು ಮಾಸ್ಟರ್ ಪ್ಲಾನನ್ನು ದಯಮಾಡಿ ಮಾಡಬೇಕು. ಏಕೆಂದರೆ, ವಿಧಾನಸಭೆ ಸೇರಿದಾಗ ಮಾತ್ರ, ಫಿಷರೀಸ್ ಡಿಪಾರ್ಟ್‌ಮೆಂಟ್, ಪೋರ್ಟ್ ಡಿಪಾರ್ಟ್‌ಮೆಂಟಿನ ಬೇಡಿಕೆ ಬಂದಾಗ ಮಾತ್ರ ಇದು ಘೋಷಣೆಯಾಗಿ ಉಳಿಯಬಾರದು. ರಿವರ್ ಟ್ರಾನ್ಸ್‌ಪೋರ್ಟ್ ಸಿಸ್ಟಮನ್ನು ಡೆವಲಪ್ ಮಾಡಬೇಕು. It should not remain as it is. Now you can concretise it. Naval talk ಅಲ್ಲಿ ಆಗುತ್ತದೆ, ಅಲ್ಲಿ ಥರ್ಮಲ್ ಪ್ಲಾಂಟ್ ಆಗುತ್ತದೆ. ರಿವರ್ ಬೆಡ್‌ನಲ್ಲಿ ಯಾರು ಇರುತ್ತಾರೆ ಅಲ್ಲಿ ಒಂದು ಸಿಸ್ಟಂ ಇತ್ತು. ಪರಂಪರಾನುಗತವಾಗಿ ರಿವರ್ ಬದಿಯಲ್ಲಿ ಅದೆಲ್ಲಾ ಕ್ಲೀನ್ ಮಾಡುವಂಥ ಒಂದು ಪ್ರೊಸೆಸ್ ಇತ್ತು. ಈಗ ಯಾರು ಮಾಡುತ್ತಾರೆ, ಈಗ ಅಲ್ಲೆಲ್ಲಾ ವಾಟರ್ ಕೆನಾಟ್ ಫ್ಲೋ, ಈಗ ಅವಕಾಶ ಇರುವುದಿಲ್ಲ. ಅದಕ್ಕೆಲ್ಲಾ ತಾವು ಕಾರ್ಯಕ್ರಮ ಮಾಡಬೇಕು, ಈ ಕಾರ್ಯಕ್ರಮವನ್ನು ರೂಪಿಸಿದರೆ ಇದರಿಂದ ಹೆಚ್ಚು ಪ್ರಯೋಜನ ಖಂಡಿತವಾಗಿ ಬರುತ್ತದೆ. ಆದುದರಿಂದ ಇವತ್ತು ನನ್ನ ಬೇಡಿಕೆ ಏನೆಂದರೆ, ಮಾಸ್ಟರ್‌ಪ್ಲಾನ್‌ಮಾಡಿ. ಮೈನರ್ ಪೋರ್ಟ್ಸ್ ಡೆವಲಪ್

ಮೆಂಟಿಗೆ ಏನಿದೆ ಅದಕ್ಕೆ ಮಾಸ್ಟರ್‌ಪ್ಲಾನ್ ಮಾಡಿ, ಇದಕ್ಕೆ ಬೇಕಾದರೆ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್, ಎಕ್ಸ್‌ಟರ್ನಲ್ ಏಯ್ಡ್ ತರಿಸಲಿಕ್ಕೆ ಸಾಧ್ಯತೆ ಇದೆ, ಹಿಂದೆ ಹಿಂಟರ್‌ಲ್ಯಾಂಡ್ ಡೆವಲಪ್‌ಮೆಂಟಿಗೆ ಒಂದು ಸಮಿತಿ ಮಾಡಿತ್ತು. ಡಾಕ್ಟರ್ ನಂಜುಂಡಪ್ಪ ಕಮಿಟಿಯವರು ವರದಿ ಕೊಟ್ಟಿದ್ದಾರೆ. ಅದನ್ನು ಅನುಷ್ಠಾನ ಮಾಡಲಿಕ್ಕೆ ಏನು ಕಾರ್ಯಕ್ರಮ ಮಾಡಿದ್ದೀರಿ ? ಹಿಂಟರ್‌ಲ್ಯಾಂಡ್ ಡೆವಲಪ್‌ಮೆಂಟ್ ಆಗದೇ ಹೋದರೆ ಮೈನರ್ ಪೋರ್ಟ್ಸ್ ಡೆವಲಪ್‌ಮೆಂಟ್ ಆಗುವುದಿಲ್ಲ. Even the other big Mangalore harbour development ಆಗಲಿಕ್ಕೆ ಖಂಡಿತವಾಗಿ ಆಗುವುದಿಲ್ಲ. ಆದುದರಿಂದ ಜೆಟ್ಟಿಗಳನ್ನು ಮೈನರ್ ಪೋರ್ಟ್‌ಗಳನ್ನು ಬೆಳಸಲಿಕ್ಕೆ ವಿಶೇಷವಾದಂಥ ಕಾರ್ಯ ಕ್ರಮವನ್ನು ಮಾಡಲಿಕ್ಕೆ ಸಾಧ್ಯತೆ ಇದೆ. ಏಷಿಯನ್ ಬ್ಯಾಂಕ್ ಕೂಡ ಮುಂದೆ ಬರಬಹುದು. ಮೈನರ್ ಪೋರ್ಟ್ ಡೆವಲಪ್‌ಮೆಂಟಿಗೆ ತಾವು ಮುಂದೆ ಹೋದರೆ ಬೇರೆ ಬೇರೆ ಮೂಲಗಳಿಂದ ಹೆಚ್ಚು ಸಹಾಯ ಖಂಡಿತವಾಗಿ ಬರಲಿಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇವತ್ತು ಈ ಮೀನುಗಾರಿಕೆ ಮತ್ತು ನ್ಯಾಯಾಂಗ, ಶಾಸಕಾಂಗ ಹಾಗೂ ಬಂದರಿಗೆ ಸಂಬಂಧಪಟ್ಟ ಬೇಡಿಕೆಗಳು ಏನಿದೆ ಇದರ ಬಗ್ಗೆ ನನ್ನ ಕೆಲವು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ್ (ಬಹ್ಮಾವರ).—ಸನ್ಮಾನ್ಯ ಅಧ್ಯಕ್ಷರೆ, ಇಂದು ಏನು ಈ ಇಲಾಖೆಗಳ ಬೇಡಿಕೆಗಳನ್ನು ಇಟ್ಟಿದ್ದಾರೆ ಅದನ್ನು ವಿರೋಧಿಸುತ್ತಾ, ಕರಾವಳಿ ಪ್ರದೇಶದಿಂದ ಬಂದಿರತಕ್ಕ ನಾನು ಈ ಮೀನುಗಾರಿಕೆ ಬಗ್ಗೆ ಒಂದೆರಡು ಮಾತುಗಳನ್ನು ಆಡಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಅಧ್ಯಕ್ಷರೆ, ತಮಗೆಲ್ಲಾ ಗೊತ್ತಿದೆ, ಮೀನು ತಿನ್ನಲಿಕ್ಕೆ ಎಷ್ಟು ರುಚಿ ಇರುತ್ತದೆ. ಆದರೆ ಅದನ್ನು ಹಿಡಿಯಲಿಕ್ಕೆ ಎಷ್ಟು ಕಷ್ಟ, ಬವಣೆ ಪಡಬೇಕಾಗಿದೆ ಎನ್ನುವುದು ನಾನು ದಿನಂಪ್ರತಿ ನೋಡುತ್ತಿರುವ ಒಂದು ವಿಷಯ. ಕಳೆದ ವರ್ಷ ಅಂದರೆ ೧೯೮೬–೮೭ರಲ್ಲಿ ಸುಮಾರು ಒಂದೂವರೆ ಲಕ್ಷ ಟನ್ ಮೀನು ಉತ್ಪಾದನೆಯಾಗಿದ್ದರೆ, ಅದು ೧೯೮೭–೮೮ರಲ್ಲಿ ಒಂದು ಲಕ್ಷ ೨೯ ಸಾವಿರ ಟನ್‌ಗೆ ಇಳಿದಿದೆ. ಇದರ ಅರ್ಥ, ಮೀನು ಉತ್ಪಾದನೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಆದರ ಮೌಲ್ಯದ ವಿಚಾರದಲ್ಲಿ ಹೇಳುವುದಾದರೆ, ಅದರ ರೇಟ್ ಜಾಸ್ತಿಯಾಗುವುದರಿಂದ ಅದರಲ್ಲಿ ಏನೂ ವ್ಯತ್ಯಾಸ ಆಗುತ್ತಾ ಇಲ್ಲ. ಆದರೆ ಈ ಮೀನುಗಾರಿಕೆಯನ್ನು ನಾವು ಎರಡು ರೀತಿಯಲ್ಲಿ ತೆಗೆದುಕೊಳ್ಳಬಹುದು. ಒಂದು ಕಡಲ ಮೀನುಗಾರಿಕೆ ಹಾಗೂ ಎರಡನೆಯದು ಒಳನಾಡು ಮೀನುಗಾರಿಕೆ. ಒಳನಾಡು ಮೀನುಗಾರಿಕೆಗೋಸ್ಕರ ಈ ವರ್ಷ ಒಂದು ಮಸೂದೆಯನ್ನು ಮಾನ್ಯ ಸಚಿವರು ರೂಪಿಸಿದ್ದಾರೆ. ನಾನು ಒಳನಾಡಿನಲ್ಲಿ ಇರುವುದರಿಂದ ನನಗೆ ಗೊತ್ತಿದೆ. ಅದನ್ನು ಆದಷ್ಟು ಬೇಗನೆ ಪಾಸ್ ಮಾಡಿ ಮೀನುಗಾರರಿಗೆ ಅದರ ಸದುಪಯೋಗ ಮಾಡಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಕಡಲು ಮೀನುಗಾರಿಕೆಯಲ್ಲಿ ಕೂಡ ಎರಡು ವಿಧ ಇದೆ. ಒಂದು ಸಂಪ್ರದಾಯ ಮೀನುಗಾರಿಕೆ. ಇನ್ನೊಂದು ಯಾಂತ್ರೀಕೃತ ಮೀನುಗಾರಿಕೆ. ಸಂಪ್ರದಾಯಿಕ ಮೀನುಗಾರಿಕೆಯಲ್ಲಿ ನಾಡ ದೋಣಿಗಳನ್ನು ಉಪಯೋಗಿಸಿಕೊಂಡು ಕರಾವಳಿ ತೀರದಲ್ಲಿ ಸಿಗುವಂತಹ ಮೀನುಗಳನ್ನು ಹಿಡಿಯುತ್ತಾರೆ. ಆದರಿಂದ ಮೀನುಗಾರರು ಜೀವನ ನಡೆಸಿಕೊಳ್ಳುತ್ತಾರೆ. ಯಾಂತ್ರೀಕೃತ ಮೀನುಗಾರಿಕೆಯಲ್ಲಿ ಕರಾವಳಿಯಲ್ಲಿ ಮೀನುಗಾರರು ದೂರದವರೆಗೆ ಹೋಗಿ ಮೀನುಗಳನ್ನು ಹಿಡಿಯುತ್ತಾರೆ ಮಾನ್ಯ ಮೊಯಿಲಿಯವರು ಹೇಳಿದಹಾಗೆ, ಯಾಂತ್ರೀಕೃತ ಮೀನುಗಾರಿಕೆಯಲ್ಲಿ ದಶಕ ಕಳೆದರೂ ಕೂಡ ಡೀಪ್ ಸೀಗೆ ಹೋಗಿ ಮೀನು ಹಿಡಿಯುವಷ್ಟು ಮುನ್ನಡೆ ಸಾಧಿಸಿಲ್ಲ. ಕರಾವಳಿ ಪ್ರದೇಶದಲ್ಲಿ ಎಷ್ಟು ಮೀನುಗಳನ್ನು ಹಿಡಿದರೂ ವರ್ಷೇ ವರ್ಷೇ ಉತ್ಪಾದನೆ ಕಡಿಮೆಯಾಗುತ್ತಿದೆ. ಅದಕ್ಕೋಸ್ಕರ ಡೀಪ್ ಸೀ ಫಿಷಿಂಗ್‌ಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಡಬೇಕು. ಇವತ್ತು ಸಂಪ್ರದಾಯಕ ಮೀನುಗಾರಿಕೆಗೂ ಯಾಂತ್ರೀಕೃತ ಮೀನುಗಾರಿಕೆಗೂ ಪೈಪೋಟಿ ಉಂಟಾಗಿ, ಕಳೆದ ವರ್ಷ ಘರ್ಷಣೆ ಕೂಡ ಆಗಿದೆ. ಇದರಿಂದ ಬಹಳಷ್ಟು ಆಸ್ತಿಪಾಸ್ತಿಗಳು ನಷ್ಟವಾಗಿದ್ದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ. ರಘುಪತಿ.—ತಮಗೂ ಗೊತ್ತಿದೆ. ಅವರನ್ನು ಕರೆದು ಕಾಂಪ್ರುಮೈಸ್ ಮಾಡಲಾಯಿತು.

ಶ್ರೀ ಬಸವರಾಜ್.—ಯೋಜನೆಗಳನ್ನು ಮಾಡುವಾಗ ದೂರದೃಷ್ಟಿ ಇರಬೇಕು. ಡೀಪ್ ಸೀ ಫಿಷಿಂಗ್ ಹೆಚ್ಚು ಅವಕಾಶ ಮಾಡಿಕೊಡಬೇಕು. ಮೀನುಗಾರಿಕೆಯಿಂದ ೮೬–೮೭ರಲ್ಲಿ ಸರ್ಕಾರಕ್ಕೆ ೦.೮೭ ಕೋಟಿ ರೂಪಾಯಿಗಳ ವಿದೇಶಿವಿನಿಮಯ ಬಂದಿದೆ. ೮೭–೮೮ರಲ್ಲಿ ೩.೬೮ ಕೋಟಿ ವಿದೇಶಿ ವಿನಿಮಯ ಬಂದಿದೆ. ಆದರೆ, ಇದರಲ್ಲಿ ದುಡಿಯುತ್ತಿರುವವರಿಗೆ ಯಾವ ಸೌಲಭ್ಯವೂ ಸಿಕ್ಕಿಲ್ಲ. ಮೀನಿಗೆ ಸರಿಯಾದ ದರ ಸಿಗುತ್ತಿಲ್ಲ. ಪ್ರಾರಂಭದ ಹಂತದಲ್ಲಿ ಹೆಚ್ಚು ಮೀನುಗಳು ಬರುತ್ತವೆ, ಆಗ

ದರ ಕಡಿಮೆಯಾಗುತ್ತದೆ, ಮೀನಿನ ಪ್ರಮಾಣ ಕಡಿಮೆಯಾದಾಗ ದರ ಹೆಚ್ಚಾಗುತ್ತದೆ. ಕೆಲವರಿಗೆ ಮಾತ್ರ ಲಾಭ ಸಿಗುತ್ತದೆ. ಇದನ್ನು ಹೋಗಲಾಡಿಸಲು ಮೀನಿನ ದರವನ್ನು ಗೊತ್ತು ಮಾಡಬೇಕು. ಹೆಚ್ಚಿನ ಪ್ರಮಾಣದಲ್ಲಿ ಮೀನು ಸಿಕ್ಕಿದಾಗ ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಸಂಗ್ರಹಣೆ ಮಾಡುವಂಥ ವ್ಯವಸ್ಥೆ ಮಾಡಿದರೆ, ಸರಿಯಾದ ಬೆಲೆ ಮಾರಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ, ಕೋಲ್ಡ್ ಸ್ಟೋರೇಜ್ ಉಪಯೋಗ ಮೀನುಗಾರರಿಗೆ ಆಗುತ್ತಿಲ್ಲ. ಇದು ನಿಗಮದ ವಶದಲ್ಲಿದ್ದು, ಅವರು ತೆಗೆದುಕೊಂಡಂಥ ಮೀನನ್ನು ಮಾತ್ರ ಅವರು ಇಟ್ಟುಕೊಳ್ಳುತ್ತಾರೆ. ಈ ಒಂದು ಸೌಲಭ್ಯವನ್ನು ಮೀನುಗಾರರಿಗೂ ವಿಸ್ತರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಡಿದಂಥ ಮೀನುಗಳು ಕೆಲವೇ ಬಂದರುಗಳಲ್ಲಿ ತರುವಂಥ ವ್ಯವಸ್ಥೆ ಇದೆ. ಎಲ್ಲಾ ಬಂದರುಗಳಲ್ಲಿಯೂ ಈ ವ್ಯವಸ್ಥೆ ಇಲ್ಲ. ಮಂಗಳೂರು, ಮಲ್ಪೆ, ಗಂಗೊಳ್ಳಿ, ಕಾರವಾರ ಹೀಗೆ ೧೨ ಸಣ್ಣ ಸಣ್ಣ ಬಂದರುಗಳು ಇವೆ. ಇವುಗಳನ್ನು ಅಭಿವೃದ್ಧಿಪಡಿಸಿ, ಮೀನುಗಾರರಿಗೆ ಉಪಯೋಗವಾಗುವಂತೆ ಮಾಡಬೇಕು. ಹಂದರಕಟ್ಟೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಕಾರ್ಯ ನಡೆಯುತ್ತಿದ್ದು, ಇದು ಬಹಳ ಪ್ರಾಮುಖ್ಯತೆ ಪಡೆದಿತ್ತು. ಈಗ ಅಲ್ಲಿ ಮೀನು ಹಿಡಿದು ತರುವಂಥ ವ್ಯವಸ್ಥೆ ಇಲ್ಲದೇ ಇರುವುದರಿಂದ ಅದರ ಪ್ರಾಮುಖ್ಯತೆ ಕಡಿಮೆಯಾಗಿದೆ. ಇಂಥ ಬಂದರುಗಳ ಬಗ್ಗೆ ಸರ್ಕಾರದವರು ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡು, ಅವುಗಳನ್ನು ಅಭಿವೃದ್ಧಿ ಪಡಿಸಿ, ಮೀನುಗಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇದೇ ರೀತಿ ಉಳಿದ ಎಲ್ಲಾ ಬಂದರುಗಳನ್ನೂ ಅನುಕೂಲವಾಗತಕ್ಕ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ಮೀನುಗಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಳಿವೆಗಳಲ್ಲಿ ಹೂಳೆತ್ತುವ ಕೆಲಸ ಆಗಬೇಕು. ಈ ಬಗ್ಗೆ ಮಾನ್ಯ ಮೊಯಿಲಿಯವರು ಬಹಳ ವಿವರವಾಗಿ ಹೇಳಿದ್ದಾರೆ. ಪ್ರತಿ ವರ್ಷವೂ ಮೀನುಗಾರಿಕೆಯ ಸಮಯ ಪ್ರಾರಂಭವಾದ ಕೂಡಲೇ ಒಂದಲ್ಲೊಂದು ಕಡೆ ಅಪಘಾತಗಳು ಆಗುತ್ತಿರುವುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಈ ರೀತಿಯ ಅಪಘಾತಗಳು ಯಾವ ಕಾರಣಕ್ಕಾಗಿ ಆಗುತ್ತವೆಂದರೆ, ಅಳಿವೆಗಳಲ್ಲಿ ಹೂಳು ತುಂಬಿಕೊಂಡು ದೋಣಿಗಳು ಹೋಗುವುದಕ್ಕೆ, ಬರುವುದಕ್ಕೆ ತೊಂದರೆಯಾಗಿ ಈ ರೀತಿ ಹಾನಿಯಾಗುತ್ತಿರುತ್ತದೆ. ಮೀನುಗಾರರಿಗೆ ಈ ತೊಂದರೆಯನ್ನು ತಪ್ಪಿಸಬೇಕಾದರೆ ಡ್ರೆಡ್ಜಿಂಗ್ ಕೆಲಸವನ್ನು ಸರ್ಕಾರದವರೇ ಮಾಡಿದರೂ ಪರವಾಗಿಲ್ಲ, ಅಥವಾ ಖಾಸಗೀಯವರಿಂದ ಮಾಡಿಸಿದರೂ ಪರವಾಗಿಲ್ಲ. ಒಟ್ಟಿನಲ್ಲಿ ಅಳಿವೆಗಳಲ್ಲಿ ಹೂಳೆತ್ತುವ ಕೆಲಸವನ್ನು ಆದಷ್ಟು ಬೇಗ ಸರಿಯಾಗಿ ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಇನ್ನು ಮೀನುಗಾರಿಕೆ ಮಾಡುವಾಗ ಸಮುದ್ರದಲ್ಲಿ ಬಹಳ ಉತ್ತಮವಾದ ದೊಡ್ಡ ಪ್ರಕೃತಿದತ್ತವಾದ ಮೀನುಗಳನ್ನು ಹಿಡಿಯುತ್ತಾರೆ. ಆದೇ ರೀತಿ ಒಳನಾಡು ಮೀನುಗಾರಿಕೆಯಲ್ಲಿ ಕೆರೆ, ಜಲಾಶಯ ಕಡೆಗಳಲ್ಲಿ ನಮಗೆ ಬೇಕಾದ ಮೀನಿನ ಮರಿಗಳನ್ನು ಬಿಟ್ಟು, ಬೆಳೆಸಿ ಮೀನಿನ ಉತ್ಪಾದನೆಯನ್ನು ಮಾಡುತ್ತಿದ್ದಾರೆ. ಈಗ ಏನಾಗಿದೆ ಎಂದರೆ ಕರಾವಳಿ ತೀರ ಪ್ರದೇಶ ಸುಮಾರು ೭೫ ಭಾಗ ಹಾಳಾಗಿ ಹೋಗಿದೆ. ಇದನ್ನು ಅಭಿವೃದ್ಧಿಪಡಿಸಿದರೆ ಅಲ್ಲಿ ಹೆಚ್ಚು ಮೀನುಗಾರಿಕೆ ಉತ್ಪನ್ನವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ನಿರುದ್ಯೋಗಿ ವಿದ್ಯಾವಂತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರಲ್ಲಿ ಆಸಕ್ತಿಯುಳ್ಳವರಿಗೆ ಮೀನು ಸಾಕಾಣಿಕೆಗೆ ಸಬ್ಸಿಡಿ ರೂಪದಲ್ಲಿ ನೆರವು ನೀಡಿ ಪ್ರೋತ್ಸಾಹಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮೀನುಗಾರರ ರಾಷ್ಟ್ರೀಯ ಕ್ಷೇಮಾಭಿವೃದ್ಧಿ ಸಂಸ್ಥೆ ಎಂದು ಇದೆ. ಅದರ ಮೂಲಕ ೨೦ ಸಾವಿರ ರೂಪಾಯಿಗಳ ನೆರವಿನೊಂದಿಗೆ ಮೀನುಗಾರರಿಗೆ (ಬೆಸ್ತರಿಗೆ) ಮನೆಗಳನ್ನು ಕಟ್ಟಿಸಿ ಕೊಡತಕ್ಕ ಕಾರ್ಯಕ್ರಮ ಇದೆ. ನಮ್ಮ ಕರಾವಳಿಯ ಉದ್ದಕ್ಕೂ ಈ ಮೀನುಗಾರರೇ ವಾಸಿಸುತ್ತಿದ್ದಾರೆ. ಅವರೆಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ರೂಪಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಮತದಾರ ಕ್ಷೇತ್ರದಲ್ಲಿ ಹೂಡಿ ಬಂದವರಿಗೆ ಹೋಗತಕ್ಕ ೪ ಕಿಲೋಮೀಟರ್ ರಸ್ತೆಯಲ್ಲಿ ಕೊನೆಯ ೧ ಕಿಲೋ ಮೀಟರ್ ರಸ್ತೆ ಇನ್ನೂ ಆಗಿಲ್ಲ. ಇದು ಹಾಗೆಯೇ ಇದೆ. ದಯವಿಟ್ಟು ಇದನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ಮಾನ್ಯ ಸಚಿವರನ್ನು ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಕೇಂದ್ರ ಸರ್ಕಾರದ ಯೋಜನೆಯ ಅಡಿಯಲ್ಲಿ ಡಿ.ಪಿ.ಎ.ಪಿ. ಪಶ್ಚಿಮ ಘಟ್ಟ ಯೋಜನೆ, ಐ.ಆರ್.ಡಿ.ಪಿ. ಯೋಜನೆ ಇನ್ನೂ ಮುಂತಾದ ಯೋಜನೆಗಳಿವೆ. ಇವುಗಳಿಗೆಲ್ಲಾ ಕೇಂದ್ರಸರ್ಕಾರದ ಹಣ ಬರುತ್ತದೆ.

ಆದ್ದರಿಂದ ಕೇಂದ್ರಸರ್ಕಾರದಿಂದ ಹಣ ಬರತಕ್ಕ ಹಲವಾರು ಯೋಜನೆಗಳು ಏನಿವೆ ಅವುಗಳನ್ನು ಅನುಸರಿಸಿ ತಾವೂ ಕೂಡ ಒಳ್ಳೆಯ ಉತ್ತಮವಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಅದರ ಮೂಲಕ ಸಿಕ್ಕತಕ್ಕ ಎಲ್ಲ ಸಹಾಯವನ್ನು ಪಡೆದುಕೊಂಡು ಅದರ ಉಪಯೋಗ ನಮ್ಮ ಮೀನುಗಾರರಿಗೆ ಸಿಕ್ಕುವಂತೆ ಮಾಡಬೇಕು.

ಎಲ್ಲಕ್ಕಿಂತಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೋಸ್ಕರವಾಗಿ ಸುಮಾರು ೪ ಕೋಟಿ ರೂಪಾಯಿಗಳ ಡೆನಿಡಾ ಯೋಜನೆ ಇದೆ. ಇದು ಜಾರಿಗೆ ಬಂದರೆ ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಅಭಿವೃದ್ಧಿಯಾಗುತ್ತದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಒಂದು ಯೋಜನೆಯನ್ನು ಆದಷ್ಟು ಬೇಗನೆ ಅನುಷ್ಠಾನಕ್ಕೆ ತರುವುದರಲ್ಲಿ ಮಾನ್ಯ ಸಚಿವರು ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ಇಷ್ಟು ವೇಳೆ ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಮಾನ್ಯ ಅಧ್ಯಕ್ಷರೇ ಈ ದಿವಸ ಮೀನುಗಾರಿಕೆ ಇಲಾಖೆಯ ಬೇಡಿಕೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ಇಲಾಖೆಯ ಬಗ್ಗೆ ಈಗಾಗಲೇ ಮಾನ್ಯ ವೀರಪ್ಪಮೊಯಿಲಿಯವರು ಮತ್ತು ಮಾನ್ಯ ಬಸವರಾಜ್‌ರವರು ಬಹಳವಾಗಿ ಹೇಳಿದ್ದಾರೆ. ಆದರೆ ಮೀನುಗಾರರ ಮಧ್ಯದಲ್ಲಿ, ಸಮುದ್ರದ ಬದಿಯಲ್ಲಿ ರಾಶಿ ರಾಶಿ ಚಡಪಡಿಸುವ ಹಸಿ ಹಸಿ ಮೀನುಗಳನ್ನು ತೆಗೆದುಕೊಂಡು ಹೋಗಿ ಪದಾರ್ಥಗಳನ್ನು ಮಾಡುವಂಥ ಮೀನುಗಾರರ ಮತದಾರರಿಂದ ಆರಿಸಿಬಂದ ನಾನು ಅವರ ವಿಷಯವಾಗಿ ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ.

ಸಾಧಾರಣವಾಗಿ ೨೩೦ ಕಿಲೋಮೀಟರ್ ಕರಾವಳಿ ಪ್ರದೇಶದಲ್ಲಿ ೬೩೮ ಪರ್ಸೀಯನ್ ದೋಣಿಗಳನ್ನು ೭೩೧ ಬಿಡುಂಬಲೆ ದೋಣಿಗಳನ್ನು, ೨ ಆಳ ಸಮುದ್ರ ದೋಣಿಗಳು ಇವೆ ಮತ್ತು ಸುಮಾರು ೧೩೦೦ ಸೀಗಡಿ ಟ್ರಾಲರ್‌ಗಳನ್ನು ಹೊಂದಿದ್ದು ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ತೊಡಗಿದೆ ಎಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಇದು ಸಾಲದು ಇನ್ನೂ ಆಳ ಸಮುದ್ರಕ್ಕೆ ಹೋಗುವಂಥ ದೋಣಿಗಳನ್ನು ಕೊಡಬೇಕು. ಏತಕ್ಕೆಂದರೆ ಮೀನು ಹಿಡಿಯತಕ್ಕಂಥವರು ಎಷ್ಟು ಕಷ್ಟ ಪಡುತ್ತಾರೆ, ಅವರು ಎಷ್ಟು ಕಷ್ಟ ಶರೀರ ಹೊಂದಿರುತ್ತಾರೆಂದರೆ ೨೪ ಗಂಟೆಗಳ ಕಾಲ ಕಡಲಲ್ಲಿಯೇ ಇರಬೇಕು. ಅವರಿಗೆ ನೆಲದಲ್ಲಿ ಏನಾಗುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಕಡಲಿಗೆ ಹೋದಮೇಲೆ ಹೆಂಡತಿ ಮಕ್ಕಳು ಏನಾಗುತ್ತಾರೆಂಬುದು ಗೊತ್ತಿರುವುದಿಲ್ಲ. ಕಡಲಿಗೆ ಹೋದಮೇಲೆ ಮತ್ತೆ ಬರುತ್ತೇವೆಂದು ಹೇಳುವ ಯಾವುದೇ ಅಭಿಪ್ರಾಯವಿಲ್ಲದೆ ಕೆಲಸ ಮಾಡತಕ್ಕಂಥ ಜನರು ಅವರು. ಅವರಿಗೆ ಅನೇಕ ಸಲ ತೊಂದರೆಗಳು ಉಂಟಾಗುತ್ತವೆ. ಈ ವರ್ಷ ಮೀನು ಕ್ಷಾಮ ಬಂದಿದೆ. ಕಳೆದ ವರ್ಷವೂ ಅದಕ್ಕಿಂಥ ಮೊದಲು ಒಳ್ಳೆಯ ಮೀನಿನ ಸಂಗ್ರಹ ಆಗಿದೆ. ಈ ವರ್ಷ ಬಹಳ ಕಡಿಮೆ ಆಗಿದೆ. ಅದರಿಂದ ಮೀನಿನ ಸಂಗ್ರಹಣೆಯಲ್ಲಿ ಅವರಿಗೆ ಪೆಟ್ಟು ಬಿದ್ದಿದೆ. ಈಪತ್ತು ಮೀನುಗಾರರ ಬಗ್ಗೆ ನಮ್ಮ ಸರ್ಕಾರ ಏನು ಮಾಡಿದೆ ಎಂದರೆ ಅದರಲ್ಲಿ ಅಭ್ಯಾಸ ಮಾಡಿರತಕ್ಕಂಥ ಮಂತ್ರಿಗಳನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಿರುತ್ತಾರೆ. ಕಳೆದ ಮೂರು ವರ್ಷಗಳಲ್ಲಿ ಮೂರು ಜನ ಈ ಖಾತೆಗೆ ಮಂತ್ರಿಗಳಾಗಿರುತ್ತಾರೆ. ಕಳೆದ ಮೂರು ವರ್ಷಗಳಲ್ಲಿ ಮಾನ್ಯ ಬೈರೇಗೌಡರು,

ಮಾನ್ಯ ಕೃಷ್ಣಾರೆಡ್ಡಿಯವರು ಆದಮೇಲೆ ಈಗ ಮಾನ್ಯ ರಘುಪತಿಯವರು ಬಂದಿರುತ್ತಾರೆ. ಅವರು ಒಳ್ಳೆಯ ಆಲೋಚನೆ ಮಾಡಿ ಒಳ್ಳೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿಯೇ ಬದಲಾವಣೆಯಾಗಿರುತ್ತದೆ. ಒಳ್ಳೆಯ ಆಲೋಚನೆ ಮಾಡಿ ಕಾರ್ಯ ರೂಪಕ್ಕೆ ತರುವಂಥ ಮಂತ್ರಿಗಳು ಈ ಖಾತೆಗೆ ಬೇಕಾಗಿರುತ್ತದೆ. ನಾನು ಮಾನ್ಯ ಬೈರೇಗೌಡರಿಗೆ ಕೇಳಿದೆ ನೀವು ೨೫ ಮೀನುಗಳ ಹೆಸರನ್ನು ಹೇಳಿ ಎಂದು. ಅವರಿಗೆ ೨೦ ಮೀನುಗಳ ಹೆಸರನ್ನು ಹೇಳುವುದಕ್ಕೆ ಆಗಲಿಲ್ಲ. ಮಾನ್ಯ ರಘುಪತಿಯವರಿಗೆ ಬಾಯಿಪಾಠವಾಗಿರಬಹುದು. ಮೀನುಗಾರಿಕೆ ಇಲಾಖೆಯಲ್ಲಿ ಪ್ರತಿಯೊಂದು ಮೀನಿನ ಹೆಸರು, ಮೀನಿನ ಲಕ್ಷಣ, ಪ್ರತಿಯೊಂದು ಮೀನಿನ ಶಕ್ತಿ, ಅದು ಎಷ್ಟು ಹಣವನ್ನು ತಂದುಕೊಡುತ್ತದೆ ಎನ್ನುವ ಎಲ್ಲಾ ವಿವರಗಳನ್ನು ತಿಳಿದುಕೊಂಡಿರಬೇಕು. ಮಾನ್ಯ ರಘುಪತಿಯವರು ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದಾರೆ. ಬಹಳ ಸಂತೋಷ, ಅವರು ಬಹುಶಃ ಒಂದು ವರ್ಷಕಾಲವಾದರೂ ಈ ಇಲಾಖೆಯಲ್ಲಿ ಇದ್ದು ಒಳ್ಳೆಯ ಕೆಲಸಗಳನ್ನು ಮಾಡಿ ಮೆಹನತನ್ನು ಪಡೆಯಲಿ.

ಮಾನ್ಯ ವೀರಪ್ಪ ಮೊಯಿಲಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಮೀನುಗಾರಿಕೆಯ ಅಭಿವೃದ್ಧಿ ಯೋಜನೆಗೆ ಬಹಳಷ್ಟು ಹಣವನ್ನು ಕಡಿಮೆ ಮಾಡಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಏಕೆಂದರೆ ಅವರು ಚಿನ್ನವನ್ನು ಕಡಲಿನಿಂದ ತರುತ್ತಾರೆ. ೪೮ ಕೋಟಿ ರೂಪಾಯಿಗಳ ಆದಾಯವನ್ನು ತರುತ್ತದೆ. ಇನ್ನು ಹೆಚ್ಚು ಹೆಚ್ಚು ಸಹಾಯ ಮಾಡಿದರೆ ೨೦ ಕೋಟಿ ರೂಪಾಯಿಗಳ ಆದಾಯವನ್ನು ತರಬಹುದು ಎಂದು ಹೇಳುವಾಗ ಇದು ಒಂದು ದೊಡ್ಡ ವಿಚಾರವೇ, ಈ ವಿಚಾರದಲ್ಲಿ ಹೆಚ್ಚಿನ ಮೆಹನತ್ ತೆಗೆದುಕೊಳ್ಳಬೇಕೆಂದು ಮೀನುಗಾರಿಕಾ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರರ ಕಷ್ಟಪರಂಪರೆಯ ಬಗ್ಗೆ ಹೇಳುವುದಾದರೆ ಬಹಳ ದೊಡ್ಡದಿದೆ. ಸಮುದ್ರ ದಂಡೆಯಲ್ಲಿ ಹೂಳು ಎತ್ತದೆ ಬಹಳ ಅನ್ಯಾಯವಾಗಿದೆ. ೧೫ ಜೀವ ಹೋಗಿದೆ. ಮಂಗಳೂರಿನಲ್ಲಿಯೇ ೧೫ ಜನರ ಜೀವ ಹೋಗಿದೆ. ಕಳೆದ ನಾಲ್ಕು ವರ್ಷದಲ್ಲಿ ಎರಡುಲಕ್ಷ ನಾಲ್ಕು ಲಕ್ಷ ಬೆಲೆಬಾಳತಕ್ಕಂಥ ಬೋಟ್‌ಗಳು ಮರಳಿಗೆ ಸಿಕ್ಕಿ ಮುರಿದುಹೋಗಿ ಹಾನಿಗೊಂಡಿರುತ್ತಾರೆ, ಇಷ್ಟೆಲ್ಲ ಕಷ್ಟಪಡುತ್ತಿರುವ ಅವರ ಕಷ್ಟವನ್ನು ವರ್ಣಿಸಲು ಸಾಧ್ಯವಿಲ್ಲ. ಹೂಳು ಎತ್ತುವುದಕ್ಕೆ ಕಂಟ್ರಾಕ್ಟ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆಯಾಗಿ ಹೂಳೆತ್ತಿಸಿ ನಮ್ಮ ಮೀನುಗಾರರ ಜೀವ ಹಾನಿಯಾಗದಂತೆ ಇನ್ನೂ ಮುಂದಾದರೂ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಳೇ ಬಂದರದಲ್ಲಿ ಒಬ್ಬರು ಆಫೀಸರ್ ಇದ್ದಾರೆ, ಅವರಿಗೆ ಮೀನುಗಾರರ ಬಗ್ಗೆ ಚಿಂತೆಯೇ ಇಲ್ಲ. ಮೀನುಗಾರರ ಕಷ್ಟ ಸುಖಗಳು ಹೇಳಿದರೆ ಅವರ ತಲೆಗೆ ಹೋಗುವುದೇ ಇಲ್ಲ. ಬೆಂಗರೆ ಎಂಬ ಪ್ರದೇಶ ಉಂಟು. ಅದು ನನ್ನ ಮತದಾರ ಕ್ಷೇತ್ರದಲ್ಲಿದೆ. ಅಲ್ಲಿ ಕುಳಿತವರನ್ನು ನೀವು ಎದ್ದುಹೋಗಿ, ನಿಮಗೆ ಸ್ಥಳ ಬಾಡಿಗೆ ಹೆಚ್ಚು ಮಾಡಿದ್ದೇವೆ ಎಂದು ಹೆದರಿಸಿದ್ದಾರೆ. ಆದರಿಂದ ಅನೇಕ ತೊಂದರೆಗಳಾಗಿವೆ. ಮುಷ್ಕರಗಳಾಗಿವೆ. ಅದು ತಮಗೂ ಗೊತ್ತಿದೆ. ಒಂದು ರೂಪಾಯಿ ಇದ್ದ ಸ್ಥಳ ಬಾಡಿಗೆಯನ್ನು ಹತ್ತು ರೂಪಾಯಿ ಮಾಡಿದ್ದಾರೆ. ಅದಕ್ಕೆ ಬಹಳ ಗಲಾಟೆಯಾಗಿ ಕೊನೆಗೆ ಮೀನುಗಾರಿಕೆ ಮಂತ್ರಿಗಳ ಹತ್ತಿರ ನಿವೇದನೆ ಬಂದ ಮೇಲೆ ಬಡವರಿಗೆ ಮಾಡುವುದು ಬೇಡ ಎಂದು ಹೇಳಿದ್ದರಿಂದ ಆ ಮನೆಯವರಿಗೆ ಸ್ವಲ್ಪ ಸುಖವಾಗಿದೆ. ಆದರೆ ಮೀನಿನ ವ್ಯಾಪಾರ ಮಾಡತಕ್ಕವರು, ಚಿಕ್ಕ ಚಿಕ್ಕ ಜೋಪಡಿಗಳನ್ನು ಹಾಕಿ ಮೀನು ಸಂಗ್ರಹ ಮಾಡುವ ಜನ ಇದ್ದಾರೆ. ಅವರಿಗೆ ೧೦ ರೂಪಾಯಿ ಕೊಡುವವರು ೨೦೦ ರೂಪಾಯಿ ಕೊಡಬೇಕು, ೨೫ ರೂಪಾಯಿ ಕೊಡುವವರು ೨೫೦ ರೂಪಾಯಿ ಕೊಡಬೇಕು ಎಂದು ಒಮ್ಮೆಲೇ ಹೇಳಿದರೆ ಕಷ್ಟ. ೧೦ ಪಾಲು ಹೆಚ್ಚು ಮಾಡಿದ್ದಾರೆ. ಅದನ್ನು ಕಡಿಮೆ ಮಾಡಬೇಕೆಂದು ಮೀನುಗಾರಿಕಾ ಮಂತ್ರಿಗಳ ಹತ್ತಿರ ಕೇಳಿದ್ದಾರೆ. ನಾನೂ ಕೂಡ ನಿವೇದನೆ ಮಾಡಿದ್ದೇನೆ. ಯಾರು ಏನು ಹೇಳಿದರೋ ಏನೋ. ಇವರು ದೊಡ್ಡವರಲ್ಲ ಸ್ವಾಮಿ. ಚಿಕ್ಕಚಿಕ್ಕ ಜೋಪಡಿ ಹಾಕಿರತಕ್ಕವರಿದ್ದಾರೆ. ಇವರಿಗೂ ಕಡಿಮೆ ಮಾಡಬೇಕೆಂದು ಹೇಳಿದ್ದೇನೆ. ನನ್ನ ಮನಸ್ಸಿನಲ್ಲಿ ಉಂಟು, ನಾನು ಆಲೋಚನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಹಾಗೆ ಮಾಡಿಯಾರು ಎಂಬುದು ನನ್ನ ಭಾವನೆ.

ಶ್ರೀ ಎಂ. ರಘುಪತಿ.—ತಾವು ಸಲಹೆ ಕೊಟ್ಟ ಮೇಲೆ, ನನ್ನನ್ನು ಭೇಟಿ ಮಾಡಿದ ಮೇಲೆ ನಾನು ವರದಿ ಕೇಳಿದ್ದೇನೆ. ಯಾವಯಾವುದರಲ್ಲಿ ಎಷ್ಟೆಷ್ಟು ಜಾಸ್ತಿ ಮಾಡಿದ್ದೀರೆಂದು ಕೇಳಿದ್ದೇನೆ. ಅದನ್ನು ಕಡಿಮೆ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮೀನುಗಾರರು ಸಭೆಗಳನ್ನು ಮಾಡಿ ನಾವು ಬಹಳ ಹಿಂದೆ ಇದ್ದೇವೆ, ನಾವು ದುಡಿಮೆಗಾರರು, ಪರಿಶಿಷ್ಟ ವರ್ಗದಲ್ಲಿ ನಮ್ಮನ್ನು ಸೇರಿಸಿ, ಅವರಿಗೆ ಸಿಗತಕ್ಕ ಎಲ್ಲಾ ಸವಲತ್ತು ನಮಗೆ ಸಿಗಬೇಕು ಎಂದು ಹೇಳಿದ್ದಾರೆ. ಮಹಾ-ಸಮ್ಮೇಳನ ಮಾಡಿ ಹೇಳಿದ್ದಾರೆ. ಇದರ ಬಗ್ಗೆ ಆಲೋಚನೆ ಮಾಡಬೇಕು.

ಇನ್ನು ಫಿಷರೀಸ್ ಕಾಲೇಜಿನಲ್ಲಿ ಮೀನುಗಾರರ ಮಕ್ಕಳಿಗೆ ಹೆಚ್ಚು ಪ್ರವೇಶ ಕೊಡಬೇಕು. ಎಲ್ಲೆಲ್ಲಿಂದಲೋ ಬಂದ ಜನರು ಕಲಿಯುತ್ತಿದ್ದಾರೆ. ಅವರು ಹೋಗಬಾರದು ಎಂದು ಹೇಳುವುದಿಲ್ಲ. ಆದರೆ ಮೀನುಗಾರರ ಮಕ್ಕಳು ೨೮೦ ಕಿಲೋಮೀಟರ್‌ನಲ್ಲಿ, ಅದೂ ಅಲ್ಲದೆ ಒಳನಾಡಿನಲ್ಲಿ ಮೀನುಗಾರರ ಮಕ್ಕಳು ಇರುವಾಗ ಅವರಿಗೆ ಆದಷ್ಟು ಹೆಚ್ಚು ಪ್ರವೇಶ ಕೊಡುವ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಅವರಿಗೆ ಮನೆ ಕಟ್ಟಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇವೆಂದು ಅನೇಕ ಸಾರಿ ಹೇಳಿದ್ದಾರೆ. ಖಾಲಿ ಜೋಪಡಿ ಮತ್ತು ನಾಲ್ಕೈದು ಕಂಬಗಳನ್ನು ಹಾಕಿ ಮನೆ ಮಾಡಿರುವವರು ಎಷ್ಟೋ ಜನ ಇದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಮೀನುಗಾರರಿಗೆ ಮನೆ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಮೀನಿನ ಮಾರುಕಟ್ಟೆ ಇಲ್ಲದೆ ಮಾರಾಟ ಕೂಡ ಕಷ್ಟವಾಗಿದೆ. ಮೀನನ್ನು ಇಡುವ ರೀತಿಯಲ್ಲಿ ಇಟ್ಟರೆ ಮಾತ್ರ ಉಳಿಯುತ್ತದೆ. ಇಲ್ಲದೇಹೋದರೆ ಸಾಯಂಕಾಲದ ಹೊತ್ತಿಗೆ ಹಾಳಾಗಿಹೋಗುತ್ತದೆ. ಮೀನು ಮಾರುಕಟ್ಟೆ ಒಳ್ಳೆಯ ದಿದ್ದರೆ ಒಳ್ಳೆಯ ಕ್ರಯ ಕೂಡ ಸಿಗುತ್ತದೆ. ಅಷ್ಟು ಮಾತ್ರವಲ್ಲ ಐಸ್ ಪ್ಲಾಂಟ್ ಕೂಡ ಹೆಚ್ಚಾಗಿ ಇರಬೇಕು. ಅದಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕೆಂದು ಅನೇಕ ಬಾರಿ ಮೀನುಗಾರರು ಮೊರೆ ಇಡುತ್ತಿದ್ದಾರೆ. ಅವರ ಮಂಡಲಿಯವರು ಮೊರೆ ಇಡುತ್ತಾರೆ. ನಾವೂ ಸಹ ಹೇಳುತ್ತಿದ್ದೇವೆ. ಆದರೆ ಅದು ಆಗಲಿಲ್ಲ. ಐಸ್ ಪ್ಲಾಂಟ್ ಜಾಸ್ತಿ ಮಾಡಿ ಅವರಿಗೆ ಮಂಜುಗಡ್ಡೆ ಸಿಗುವಹಾಗೆ ಎಲ್ಲ ವ್ಯವಸ್ಥೆ ಮಾಡಿದರೆಮಾತ್ರ ಮೀನು ಉಳಿಯುವುದಕ್ಕೆ ಸಾಧ್ಯ.

ಉಲ್ಲಾಳದಲ್ಲಿ ಹಿಂದೆ ಮೀನುಗಾರಿಕಾ ಮಂತ್ರಿಗಳಾಗಿದ್ದ ಲಿಂಗಾರೆಡ್ಡಿಯವರು ೧೯೬೭ನೇ ಇಸವಿಯಲ್ಲಿ ಜೆಟ್ಟಿಗಳಿಗೆ ಶಂಕುಸ್ಥಾಪನೆ ಮಾಡಿದ್ದರು. ಮೊನ್ನೆ ಪ್ರಶ್ನೆ ಕೇಳಿದಾಗ ಆದಷ್ಟು ಜಾಗ್ರತೆ ಮಾಡುತ್ತೇವೆಂದು ಹೇಳಿದಿರಿ. ತಮ್ಮ ಸ್ಮೃತಿಪಟಲದಲ್ಲಿ ಒಳ್ಳೆಯ ರೀತಿಯಲ್ಲಿರಬಹುದು. ಆದಷ್ಟು ಜಾಗ್ರತೆ ಉಲ್ಲಾಳ, ಶಿರೂರು, ಸುರತ್ಕಲ್ ಇಲ್ಲಿ ಜೆಟ್ಟಿಗಳನ್ನು ಮಾಡಿದರೆ ಮೀನುಗಾರರಿಗೆ ಮೀನು ತಂದು ಇಳಿಸುವುದಕ್ಕೆ ಮತ್ತು ಕೊಂಡುಹೋಗುವುದಕ್ಕೆ ಅನುಕೂಲವಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ತಡೆಗೋಡೆ. ಸಮುದ್ರ ಕೊರೆತದಿಂದ ಇಡೀ ಮೀನುಗಾರರು ಕೊಚ್ಚಿ ಹೋಗುವಂಥ ವ್ಯವಸ್ಥೆ ಇದೆ. ಸುರತ್ಕಲ್, ಉಲ್ಲಾಳ ಮತ್ತು ಇಡೀ ಕರಾವಳಿಯಲ್ಲಿ ತಡೆಗೋಡೆ ಬೇಕು. ಹೆಚ್ಚು ಹಣ ಇದಕ್ಕೆ ಬೇಕು, ಆದ್ದರಿಂದ ಇದಕ್ಕೆ ಕೇಂದ್ರದ ಸಹಾಯ ಬೇಕು ಎಂದು ಹೇಳುತ್ತಿದ್ದಾರೆ. ಏನೇ ಆದರೂ ರಾಜ್ಯಸರ್ಕಾರ ಅವರ ಪಾಲು ಹಾಕಿ ಕೇಂದ್ರಸರ್ಕಾರದಿಂದ ಹಣ ಶೀಘ್ರವಾಗಿ ಪಡೆದು ತಡೆಗೋಡೆಯನ್ನು ಸುರತ್ಕಲ್, ಉಲ್ಲಾಳ ಮತ್ತು ಕುಂದಾಪುರದಲ್ಲಿ ಕಟ್ಟದಿದ್ದರೆ ಕಷ್ಟವಾಗುತ್ತದೆ. ಪ್ರತಿವರ್ಷ ೨೦-೩೦ ಮನೆಗಳು ಹೋಗುತ್ತಿವೆ. ಕಳೆದ ವರ್ಷ ೩೨ ಮನೆಗಳು ಉಲ್ಲಾಳದಲ್ಲಿ ಹೋಯಿತು. ಕಂದಾಯ ಮಂತ್ರಿಗಳ ಹತ್ತಿರ ಹೇಳಿ, ಡೆಪ್ಯುಟಿ ಕಮೀಷನರ್‌ಗೆ ಹೇಳಿ ಎಲ್ಲೋ ಜಾಗ ಮಾಡಿಕೊಟ್ಟೆವು. ಆದ್ದರಿಂದ ಈ ತಡೆಗೋಡೆ ಪ್ರಾಮುಖ್ಯ.

ಶ್ರೀ ಎಂ. ರಘುಪತಿ.—ನಾನೇ ಖುದ್ದಾಗಿ ಬಂದು ಸ್ಥಳ ಪರಿಶೀಲನೆ ಮಾಡಿ ಸಹಾಯ ಮಾಡಿದ್ದೇನೆ ನಿಮಗೆ ಜ್ಞಾಪಕ ಇದೆ.

ಶ್ರೀ ಬಿ. ಎಂ. ಇದಿನಬ್ಬ.—ಅದೇ ರೀತಿಯಲ್ಲಿ ಸಬ್ಸಿಡಿ ಕೊಡುವುದರಲ್ಲಿ ಜಿಪುಣತನ ತೋರಿಸದೆ ಆದಷ್ಟು ಹೆಚ್ಚು ಸಬ್ಸಿಡಿ ಕೊಡಬೇಕು. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಇದೆ. ಅಲ್ಲಿ ಕೂಡ ದುಂದುವೆಚ್ಚ ನಡೆಯುತ್ತಿದೆ ಎಂದು ದೂರುಂಟು. ಸನ್ಮಾನ್ಯ ಅಧ್ಯಕ್ಷರೆ, ನಿಗಮಗಳನ್ನು ಮಾಡುತ್ತಾರೆ. ನಿಗಮಗಳು ಉಗಮಗಳು ಜಾಸ್ತಿಯಾಗಿ ನಿಗಮಗಳಿಂದ ತೊಂದರೆಯಾಗುತ್ತಿದೆಯೆಂದು ಜನ ಹೇಳುವಂಥದ್ದು ಕೇಳುತ್ತಿದ್ದೇವೆ. ನಿಗಮದಲ್ಲಿ ದುಂದುವೆಚ್ಚ ಹೆಚ್ಚಾಗುತ್ತಿದೆ. ಲೆಕ್ಕಕ್ಕಿಂತ ಹೆಚ್ಚಾಗಿ ಸಿಬ್ಬಂದಿಗಳನ್ನು ನೇಮಕ ಮಾಡುತ್ತಿದ್ದಾರೆ ಎಂದು ಅನೇಕ ದೂರುಗಳು ನನ್ನ ಹತ್ತಿರ ಬಂದಿವೆ. ಇದನ್ನು ಅನಿರೀಕ್ಷಿತ ಭೇಟಿಯಿಂದಲೋ ಅಥವಾ ಒಳಗಿನ ಕಣ್ಣಿನಿಂದಲೋ ನೋಡಿ ಆರೀತಿ ಆಗತಕ್ಕ ದುಂದುವೆಚ್ಚವನ್ನು ನಿಲ್ಲಿಸದಿದ್ದರೆ ಮೀನುಗಾರಿಕಾ ನಿಗಮದಿಂದ ಮೀನುಗಾರಿಕಾ ಇಲಾಖೆಗೆ ತೊಂದರೆಯಾಗಬಹುದು.

೨-೩೦ ಪಿ.ಎಂ.

ಶ್ರೀ ಎಂ ರಘುಪತಿ.—ನಿಮ್ಮ ಹತ್ತಿರ ಇರುವಂತಹ ಮಾಹಿತಿಯನ್ನು ನನಗೆ ಕಳುಹಿಸಿಕೊಡಿ. ನಾನು ಅದರ ಬಗ್ಗೆ ಇಂಪಾರ್ಶಿಯಲ್ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಬಸವಲಿಂಗಪ್ಪ.—ಮೀನನ್ನು ಹಿಡಿಯಬೇಕಾದರೆ ಕರಾವಳಿಗೆ ಹೋಗಬೇಕು. ಮೀನು ಹಿಡಿಯುವವರಿಗೆ ಸಹಾಯಮಾಡಬೇಕೆಂದು ಅದೇ ದೊಡ್ಡ ಕೆಲಸವೆಂದು ಮಾನ್ಯ ರಘುಪತಿಯವರಿಗೆ

ಹಚ್ಚಿದ್ದಾರೆ. ಈಗ ಮಾನ್ಯ ರಘುಪತಿಯವರಿಗೆ ಕೆಲಸ ಇಲ್ಲ. ಅವರಿಗೆ ಕೆಲಸಕೊಡಿ ಎಂಬುದಾಗಿ ನಾವೆಲ್ಲಾ ಸೇರಿ ಕೊಡಿಸಬೇಕಾಗುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ರಘುಪತಿಯವರು ಮೀನುಗಾರಿಕಾ ಮಂತ್ರಿಗಳಾದ ಮೇಲೆ ಮೀನುಗಾರಿಕಾ ಇಲಾಖೆ ಇದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ, ಮೊದಲು ಯಾರಿಗೂ ಗೊತ್ತಿರಲಿಲ್ಲ.

ಶ್ರೀ ಬಿ. ಎ. ಇದಿನಬ್ಬ.—ಮೀನುಗಾರರು ಬಹಳ ಬಡವರು, ಬಹಳ ಕಷ್ಟದಲ್ಲಿರತಕ್ಕಂತಹವರು, ಮೊನ್ನೆ ಶ್ರೀಯುತ ಬಸವಲಿಂಗಪ್ಪನವರು ಮಾತನಾಡುವಾಗ ನಾವು ಬಡವರಿಗೆ ಉಪಕಾರ ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಅವರಿಗೆ ಉಪಕಾರ ಮಾಡಿ ಎಂಬುದಾಗಿ ನಾವೂ ಹೇಳುತ್ತೇವೆ. ಆದರೆ ನಯಂಗಾರಿಕೆ ಇರತಕ್ಕ ಚಂದ ಇರತಕ್ಕವರಿಗೆ ಬಹಳ ಶ್ರೀಮಂತರಿಗೇ ಈ ಎಲ್ಲಾ ಸಹಾಯ ಸಿಕ್ಕುತ್ತಿದೆ. ಬಡವರಿಗೆ ಇಲಾಖೆ ಏನೂ ಮಾಡುತ್ತಿಲ್ಲವೆಂದು ಹೇಳಿದ್ದು ನೆನಪುಂಟು. ಮೀನುಗಾರರ ಪಟ್ಟಿಗೆ ನನ್ನದೂ ಅದೇ ಅಭಿಪ್ರಾಯ. ಅವರು ಬಹಳ ಬಡವರು ಮೈಮೇಲೆ ಬಟ್ಟೆ ಹಾಕಿಕೊಳ್ಳುವವರಲ್ಲ, ಒಂದು ಪಂಚೆಯನ್ನು ಕಟ್ಟಿಕೊಂಡು ಕೆಲಸ ಮಾಡತಕ್ಕಂತಹವರು. ಆದ್ದರಿಂದ ಇವರ ಬಗ್ಗೆ ಹೆಚ್ಚಿನ ಕಳಕಳಿ ತೋರಿಸಬೇಕು. ಅವರಿಗೆ ಮನೆ ಕಟ್ಟಿಸಿಕೊಡಬೇಕು. ಅವರಿಗೆ ಸಬ್ಸಿಡಿ ಕೊಡಬೇಕು, ತಡೆಗೋಡೆ ಕಟ್ಟಿಸಿಕೊಡಬೇಕು. ಅದೇ ರೀತಿ ಸಮುದ್ರದಿಂದ ಹೊರಕ್ಕೆ ಬಂದಾಗ ಅಡ್ಡ ಮಾರ್ಗಗಳು ಇರುತ್ತವೆ. ಫಿಷರೀಸ್ ರಸ್ತೆಗಳು ಬಹಳ ಮುಖ್ಯವಾಗಿ ಆಗಬೇಕು. ಮೀನು ಸಿಕ್ಕಿದ ಮೇಲೆ ಅದನ್ನು ತೆಗೆದುಕೊಂಡು ಬರಬೇಕಾದರೆ ರಸ್ತೆ ಇಲ್ಲದಿದ್ದರೆ ಮೀನು ಮಧ್ಯದಲ್ಲೇ ಹಾಳಾಗಿ ಹೋಗುತ್ತವೆ. ಆದ್ದರಿಂದ ಅವರಿಗೆ ರಸ್ತೆಗಳನ್ನೂ ಕೂಡ ಮಾಡಬೇಕು. ಅದೂ ಅಲ್ಲದೆ ಮೀನುಗಾರರು ವ್ಯಾಯಾಮದಲ್ಲಿ ಬಹಳ ಗಟ್ಟಿಗರು, ಅನೇಕ ಬಹುಮಾನಗಳನ್ನು ಕುಸ್ತಿಯಲ್ಲಿ ಈಜುಗಾರಿಕೆಯಲ್ಲಿ ಪಡೆದಿದ್ದಾರೆ. ಆದ್ದರಿಂದ ಅವರಿಗೆ ವ್ಯಾಯಾಮ ಮಾಡುವುದಕ್ಕೆ ಬೇಕಾದಂತಹ ಸಲಕರಣೆಗಳನ್ನು ಒದಗಿಸಿಕೊಡಬೇಕು. ಅವರನ್ನು ಮರೆಯಬಾರದು. ಅವರ ಬಗ್ಗೆ ಎಲ್ಲಿಯವರೆಗೆ ಹೋಗಬೇಕೆಂದರೆ, ನಾವುಗಳು ಯಾರಾದರೂ ಮನೆಯಿಂದ ಹೊರಗೆ ಹೋಗುವಾಗ ಮನೆಯಲ್ಲಿದ್ದವರಿಗೆ ಹೋಗಿ ಬರುತ್ತೇವೆಂದು ಹೇಳುತ್ತೇವೆ. ಆದರೆ ಅವರು ಆ ರೀತಿ ಹೇಳುವುದಿಲ್ಲ. ಅಕ್ಕಿ ಹಾಕಿ ಎಂಬುದಾಗಿ ಹೇಳುವುದಿಲ್ಲ, ಬಂದ ಮೇಲೆ ಅಕ್ಕಿ ಹಾಕಿ ಎಂದು ಹೇಳುತ್ತಾರೆ. ಅವರ ಬಗ್ಗೆ ನನ್ನದೇ ಆದ ಒಂದು ಕವನವನ್ನು ಬರೆದಿದ್ದೇನೆ.

ನಾವು ಮೀನುಗಾರರು
ನಾವು ಕಡಲ ಧೀರ ಮಕ್ಕಳು
ಅನ್ನ ನೀರಗೊಡವೆ ಇಲ್ಲ
ಮಡದಿ ಮಕ್ಕಳಾರು ಇಲ್ಲ,
ಬಂದು ಬಳಗ ಎಂತೂ ಇಲ್ಲ
ದುಡಿದು ದಣಿದು ಸೋತೆವು
ನಾವು ಮೀನುಗಾರರು
ನಾವು ಕಡಲ ಧೀರ ಮಕ್ಕಳು.
ಜೀವನ್ಮರಣದಂಥ ದುಡಿಮೆ
ನೋಡುತ್ತಿರುವಿರಾ ನೀವು

ದಡದಲ್ಲಿ ನಿಂತು ಚೆಂದಾಗಿದ್ದೆ ಎಂಬುದಾಗಿ ನೋಡುತ್ತೀರಾ, ಎಂಬುದಾಗಿ ಹೇಳುತ್ತಾ,

ನೆಲದಿ ಸುಖದಿ ಮೆರೆದು ನೀವು
ಮರೆಯುತಿರುವಿರಾ
ನಾವು ಮೀನುಗಾರರು
ನಾವು ಕಡಲ ಧೀರ ಮಕ್ಕಳು
ಮೇಲೆ ನೋಡೆ ಬರಿಯ ಗಗನ
ಕೆಳಗೆ ನೋಡೆ ನೀಲ ಜಲವು
ಎಡಕು ಬಲಕು ಅಲ್ಲು ಇಲ್ಲು

ಯಾರೂ ಇಲ್ಲವೇ.
ನಾವು ವಿಮಾನಗಾರರು
ನಾವು ಕಡಲ ಧೀರ ಮಕ್ಕಳು.

ವಿಮಾನಗಾರರ ಬಗ್ಗೆ ನಾನು ಬರೆದಂತಹ ಕವಿತೆಯನ್ನು ಅವರು ಲಕ್ಷ್ಯದಲ್ಲಿಟ್ಟು ಅವರಿಗೆ ಸಹಾಯ ಮಾಡಬೇಕು.

ಮತ್ತೆ ಈ ೩ ವರ್ಷಗಳಲ್ಲಿ ನೋಡಿದಾಗ ನಮ್ಮ ಅಧ್ಯಕ್ಷರು ಅನೇಕ ಸಾಧನೆ ಮಾಡಿದ್ದಾರೆ, ಬಹಳ ಸಂತೋಷ. ಮೊದಲು ಪ್ರಶ್ನೆಗೆ ಉತ್ತರವೇ ಬರುತ್ತಿರಲಿಲ್ಲ. ಕಟ್ಟುಗಟ್ಟಲೆ ಉತ್ತರಗಳು ಸರ್ವೇ ಸಾಮಾನ್ಯವಾಗಿ ಈಗ ಬರುತ್ತಿವೆ. ನಮಗೆ ಬೇಕಾದ ವಿವರಗಳನ್ನ ಅಧ್ಯಕ್ಷರು ಕೊಡಿಸಿದ್ದಾರೆ. ಕಳಕಳಿಯಿಂದ ಎಲ್ಲಾ ಶಾಸಕರಿಗೂ ಪತ್ರ ಬರೆದಿದ್ದಾರೆ. ಅನೇಕ ವಿಚಾರಗಳನ್ನು ತಿಳಿಸಿ ಎಚ್ಚರಿಕೆಯನ್ನು ಕೊಟ್ಟಿದ್ದೀರಿ. ಯಾರು ಇದುವರೆವಿಗೂ ಪ್ರಶ್ನೆಗಳನ್ನು ಕೇಳಲಿಲ್ಲ, ಯಾರೂ ಇದುವರೆವಿಗೂ ಸದನದಲ್ಲಿ ಮಾತನಾಡಲಿಲ್ಲ, ಅವರಿಗೂ ಆಸಕ್ತಿ ವಹಿಸುವ ರೀತಿಯಲ್ಲಿ ಪತ್ರ ಬರೆದಿದ್ದೀರಿ. ಮಾನ್ಯ ಕೆ. ಹೆಚ್. ಪಾಟೀಲರು ಕೇಳಿದ ಹಾಗೆ ಮಾಜಿ ಎಂ.ಎಲ್.ಎ.ಗಳಿಗೆ ಎಲ್ಲಾ ಸವಲತ್ತುಗಳನ್ನು ಕೊಡಬೇಕು. ಅದೂ ಕೂಡ ನನ್ನ ಅಭಿಪ್ರಾಯ. ಏಕೆಂದರೆ ಸ್ವಾತಂತ್ರ್ಯ-ಯೋಧರು ಅನೇಕರು ಇದ್ದಾರೆ. ಅವರಿಗೆ ವಸತಿ ಏರ್ಪಾಡು ಮಾಡಬೇಕು, ಬಸ್ಸಿನ ಪಾಸು ಕೊಡಬೇಕು. ಅವರಿಗೆ ಪೆನ್ಸನ್ ಕೊಡಬೇಕು. ಒಂದೊಂದು ಕ್ಷೇತ್ರದಲ್ಲಿ ಜನರ ಮಧ್ಯದಲ್ಲಿ ಕೆಲಸ ಮಾಡಿ ಇವತ್ತು ಅವರು ಮಾಜಿಯಾಗಿದ್ದಾರೆ. ಇವತ್ತು ಅವರು ಮಾಜಿಯಾಗಿದ್ದರೂ ಒಂದು ಕಾಲದಲ್ಲಿ ರಾರಾಜಿಸಿದಂತಹವರು. ಎಲ್ಲರ ಪರಿಚಯ ಇರತಕ್ಕಂತಹವರು, ಅನೇಕರ ಗುರುತು ಇರತಕ್ಕಂಥಹವರು. ಇಂತಹವರನ್ನು ಅಷ್ಟೇ ಒಳ್ಳೆಯ ರೀತಿಯಿಂದ ನೋಡಿ ಕೊಳ್ಳ ಬೇಕು. ಎಲ್ಲರೂ ಶ್ರೀಮಂತರಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅದುದರಿಂದ ಮಾಜೀ ಎಂ.ಎಲ್.ಎ.ಗಳಿಗೆ ಬಸ್ ಪಾಸ್ ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನು ಕೊಡುವ ಬಗ್ಗೆ ಮಾನ್ಯ ಕೆ. ಎಚ್. ಪಾಟೀಲರು ಏನು ಹೇಳಿದರು ಅದಕ್ಕೆ ನನ್ನ ಕಬೂಲಿ ಕೂಡ ಉಂಟು. ನಾವು ೨೨೪ ಮಂದಿ ಎಂ.ಎಲ್.ಎ.ಗಳು ಹಾಗೂ ೭೩ ಮಂದಿ ಎಂ.ಎಲ್.ಸಿ.ಗಳು ಯಾವಯಾವುದೋ ಮೂಲೆ ಮೂಲೆಗಳಿಂದ ಬಂದಿದ್ದೇವೆ; ನಮ್ಮ ನಮ್ಮ ಆಹಾರ, ವಿಹಾರ ನಮ್ಮ ನಮ್ಮಲ್ಲಿ ಬೇರೆ ಬೇರೆಯೇ ಇರುತ್ತದೆ. ಇಲ್ಲಿಗೆ ನಾವು ಬಂದಾಗ ನಮಗಾಗಿ ಎರಡು ಕ್ಯಾಂಟೀನ್‌ಗಳುಂಟು. ಅಲ್ಲಿಯ ಊಟವನ್ನು ಯಾರೂ ಕೂಡಾ ಮೆಚ್ಚುವುದಿಲ್ಲ. ಬೇಕಾದರೆ ನೀವೇ ಎರಡು-ಮೂರು ಬಾರಿ ಪ್ರೈವೇಟಾಗಿ ಹೋಗಿ ನೋಡಿ. ಊಟ ಇಲ್ಲದೇ ಬದುಕಬೇಕಾಗಿದೆ. ನಾನೊಬ್ಬನೇ ಅಲ್ಲ ಅನೇಕ ಎಂ.ಎಲ್.ಎ.ಗಳು ಇದನ್ನು ಹೇಳುತ್ತಿದ್ದಾರೆ. ನನ್ನ ಪ್ರಶ್ನೆ ಇಷ್ಟೇ. ಅವರು ಹಣ ಎಷ್ಟು ಬೇಕಾದರೂ ತೆಗೆದುಕೊಳ್ಳಲಿ. ಆದಷ್ಟು ರುಚಿಯಾದ, ಒಳ್ಳೆಯ ರೀತಿಯ ಅಡಿಗೆ ಮಾಡಿ ಊಟ ಹಾಕುವ ವ್ಯವಸ್ಥೆಯಾಗಬೇಕೆಂದು ನನ್ನ ಅಭಿಪ್ರಾಯ. ನಾವು ಎಲ್ಲಿಂದಲ್ಲೋ ಬಂದಿದ್ದೇವೆ. ಅಲ್ಲಿಂದ ಬಂದು ರೋಗವನ್ನು ತೆಗೆದುಕೊಂಡು ಹೋಗುವುದು ಸರಿಯಲ್ಲ. ಹೌಸ್ ಕಮಿಟಿಯ ಸದಸ್ಯರು ಆಗಾಗ ಅವರನ್ನು ಹೆದರಿಸುತ್ತಿರುತ್ತಾರೆ. ಅವರಿಗೆ ಎಚ್ಚರಿಕೆಯನ್ನೂ ಕೂಡಾ ಕೊಡುತ್ತಾರೆ. ಆದರೆ ಏನಾಗುತ್ತದೆ ? ಮತ್ತೆ ಅದೇ ರೀತಿ ಆಗುತ್ತದೆ. ಕಡೆಯದಾಗಿ ಅಧ್ಯಕ್ಷರಿಗೆ ಒಂದು ಮಾತು ಹೇಳುತ್ತೇನೆ.

ಅ -- ಕಡೆ ಬರಿ ಕಡಿಮೆ ಶಾಸಕರು
ಈ ಕಡೆಯು ಅದರಂತೆ ಪಾಲಿಪರು
ಮಂತ್ರಿಗಳು ಸರಿ ಹಾಜರಿಲ್ಲ
ಇದು ದಕ್ಷತೆಯಲ್ಲ, ಇದು ಸರಿಯಲ್ಲ ಎಂದು ಅಧ್ಯಕ್ಷರು ಆಗಾಗ್ಗೆ
ಹೇಳುತ್ತಾ ಇರುವರು.

ನಿಮ್ಮ ಪರಿಶ್ರಮಕ್ಕೆ ಬೆಲೆ ಬರಲು ಇವರು ಬಿಡುವುದಿಲ್ಲ, ಇದಕ್ಕೆ ಕಡಿವಾಣ ಹಾಕಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯವಾಯಿತು. ಸೋಮವಾರ ಮಂತ್ರಿಗಳು ಉತ್ತರ ನೀಡುವರು. ಈಗ ಒಂದು ಪ್ರಕಟಣೆ ಇದೆ.